ಸಂಪುಟ: 21, ಸಂಚಿಕೆ: 242, ಪುಟಗಳು: 8, ಸೋಮವಾರ, 10 ಜೂನ್ 2024 RNI NO. KARKAN/2002/08054
epaper: www.sanjemugilu.com



ವೇಣು ಸಾರಥ್ಯದಲ್ಲಿ...

ಸುದ್ದಿಗಳ ಹೊನಲು

# ಸಂಜೆ ಮುಗಿಲು

ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ

ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ



dp

ದಶಪ್ರಮತಿ ಮುದ್ರಣಾಲಯ
dashapramathi mudranalaya

PRE-PRESS PRINTERS

Contact: +91 9483589085 | e-mail: dashapramathimudranalaya@gmail.com

We Undertake Printing of
Newspapers | Tabloids | Magazines



### ಸುಭಾಷಿತ

ಅಧ್ಯಕ್ಷನೋ, ಸೇನಾನಿಯೋ,
ಕಮ್ಮಾರನೋ, ಚಮ್ಮಾರನೋ ಎಲ್ಲರ
ಕಾಯಕವೆಲ್ಲವೂ ಪೂಜ್ಯ.

। ಕುವೆಂಪು

### ಪಂಚಾಂಗ

(ಸೋಮವಾರ 10, ಜೂನ್-2024)

- ಸೋಮವಾರ, ಚತುರ್ಥಿ, ಪುಷ್ಯ
- ಶ್ರೀ ಕ್ರೋಧಿ ನಾಮ ಸಂವತ್ಸರ,
- ಉತ್ತರಾಯಣ, ಗ್ರೀಷ್ಮ ಋತು,
- ಜೇಷ್ಠ ಮಾಸ, ಶುಕ್ಲ ಪಕ್ಷ,
- ರಾಹುಕಾಲ : 7.35 ರಿಂದ 9.11
- ಗುಳಿಕಕಾಲ : 1.59 ರಿಂದ 03.35
- ಯಮಗಂಡಕಾಲ : 10.47 ರಿಂದ 12.23

## ಸಂಕ್ಷಿಪ್ತ ಸುದ್ದಿ

### ಆಂಬ್ಯುಲೆನ್ಸ್ ತಡೆಗಟ್ಟಿ ಹಲ್ಲೆ ಮಾಡಿದ ಕ್ರೂರಿಗಳು!



**ಬೆಂಗಳೂರು:** ರೋಡ್ ರೇಜ್ ಆಯ್ತು, ರಸ್ತೆಯಲ್ಲೇ ಹಲ್ಲೆ ಆಯ್ತು. ಇದೀಗ ಪುಂಡರು ತುರ್ತು ಚಿಕಿತ್ಸೆಗೆ ತೆರಳುತ್ತಿದ್ದ ಆಂಬ್ಯುಲೆನ್ಸ್ ಅನ್ನೂ ಬಿಟ್ಟಿಲ್ಲ. ಸೈರನ್ ಹಾಕಿಕೊಂಡು ಧಾವಿಸುತ್ತಿದ್ದ ಆಂಬ್ಯುಲೆನ್ಸನ್ನೂ ಚೇಸ್ ಮಾಡಿ, ಅಡ್ಡಗಟ್ಟಿ, ಉಸಿರಾಟದ ತೊಂದರೆ ಇರೋ ಮಗುವಿದೆ ಬಿಟ್ಬಿಡಿ ಎಂದು ಬೇಡಿಕೊಂಡರೂ ಕೇಳದೆ ಡ್ರೈವರ್ ಮೇಲೆ ಹಲ್ಲೆ ನಡೆಸಿದ್ದಾರೆ. ಈ ಘಟನೆ ಬೆಂಗಳೂರು ಹೊರವಲಯದ ನೆಲಮಂಗಲ ಟೋಲ್‌ನಲ್ಲಿ ನಿನ್ನೆ ಸಂಜೆ ನಡೆದಿದೆ. ಆಂಬ್ಯುಲೆನ್ಸ್ ಅತಿ ವೇಗವಾಗಿ ಓಡಿಸ್ತಿದೀಯಾ ಎಂದು ಕೆಣಕಿ ಕಾರಿನಲ್ಲಿದ್ದ ನಾಲ್ವರಿಂದ ಆಂಬ್ಯುಲೆನ್ಸ್ ಚಾಲಕನ ಮೇಲೆ ಹಲ್ಲೆ ನಡೆದಿದೆ. ಆಂಬ್ಯುಲೆನ್ಸ್ ಚಾಲಕನ ಬಟ್ಟೆ ಹರಿದುಹಾಕಿ ಆತನ ಮೇಲೆ ಹಲ್ಲೆ ನಡೆಸಿದ್ದಾರೆ. ಪುಟ 2

### ಇಸ್ರೇಲಿ ಕಮಾಂಡೋಗಳು ಹಮಾಸ್ ಭದ್ರಕೋಟೆಯಿಂದ ಒತ್ತೆಯಾಳುಗಳ ರಕ್ಷಣೆ



**ಇಸ್ರೇಲ್:** ಗಾಜಾದ ಹಮಾಸ್ ಭದ್ರಕೋಟೆ ಎಂದು ಪರಿಗಣಿಸಲಾದ ಪ್ರದೇಶದಲ್ಲಿ ಇಸ್ರೇಲ್ ಶನಿವಾರ ಕಾರ್ಯಾಚರಣೆ ನಡೆಸಿದ್ದು, ಭಯೋತ್ಪಾದಕ ಗುಂಪಿನ ವಶದಿಂದ ತನ್ನ ನಾಲ್ವರು ನಾಗರಿಕರನ್ನು ಸುರಕ್ಷಿತವಾಗಿ ರಕ್ಷಿಸಿದೆ. ಈ ಕಾರ್ಯಾಚರಣೆಯು ಇಸ್ರೇಲಿ ಸೇನೆ (ಐಡಿಎಫ್) ಮತ್ತು ಅದರ ಗುಪ್ತಚರ ಸಂಸ್ಥೆಗಳ ಬಲವನ್ನು ಸಾಬೀತುಪಡಿಸಿದೆ. ವಿಶೇಷವೆಂದರೆ ಇಸ್ರೇಲ್ ಸೇನೆ ಹಗಲು ಹೊತ್ತಿನಲ್ಲಿ ಈ ಕಾರ್ಯಾಚರಣೆ ನಡೆಸಿದೆ. ಪುಟ 2

## ಜಮ್ಮು ಕಾಶ್ಮೀರದಲ್ಲಿ ಉಗ್ರರ ದಾಳಿ: ಕಂದಕಕ್ಕೆ ಬಿದ್ದ ಬಸ್



**ಜಮ್ಮು :** ಜಮ್ಮು ಮತ್ತು ಕಾಶ್ಮೀರದಲ್ಲಿ ಭಾನುವಾರ ಸಂಜೆ ನಡೆದ ಉಗ್ರರ ದಾಳಿ ಇಡೀ ದೇಶವನ್ನೇ ಬೆಚ್ಚಿಬೀಳಿಸುತ್ತಿದೆ. ಒಂದೆಡೆ ನರೇಂದ್ರ ಮೋದಿ ಹಾಗೂ ಸಚಿವರುಗಳು ಪ್ರಮಾಣವಚನ ಸ್ವೀಕರಿಸುತ್ತಿದ್ದರೆ, ಇನ್ನೊಂದು ಕಡೆ ಉಗ್ರ ದಾಳಿ ನಡೆದಿದೆ. ಹಾಗಾದರೆ ಉಗ್ರ ದಾಳಿ ಹೇಗೆ ನಡೆಯಿತು, ಆ ಒಂದು ಬುಲೆಟ್ ನಿಂದಾಗಿ ಬಸ್ ಕಂದಕಕ್ಕೆ ಬಿದ್ದಿದ್ದು ಹೇಗೆ ಎಂಬುದರ ಕುರಿತು ಮಾಹಿತಿ ಇಲ್ಲಿದೆ.

ಜಮ್ಮು ಮತ್ತು ಕಾಶ್ಮೀರದ ರಿಯಾಸಿ ಜಿಲ್ಲೆಯಲ್ಲಿ ಭಯೋತ್ಪಾದಕ ದಾಳಿ ನಡೆದಿದೆ. ಶಿವಖೋಡಿಯಿಂದ ಕತ್ರಾಗೆ ತೆರಳುತ್ತಿದ್ದ ಬಸ್ ಮೇಲೆ ಉಗ್ರರು ಸುಮಾರು 30ರಿಂದ 40 ಸುತ್ತು ಗುಂಡು ಹಾರಿಸಿದ್ದಾರೆ. ಭಯೋತ್ಪಾದಕರು ನಡೆಸಿದ ಗುಂಡಿನ ದಾಳಿಯಲ್ಲಿ ಬಸ್ ಚಾಲಕನಿಗೆ ಬುಲೆಟ್ ತಗುಲಿದ್ದು, ಇದರ ಪರಿಣಾಮ ಚಾಲಕ ವಾಹನದ ಮೇಲೆ ಸಮತೋಲನ ಕಳೆದುಕೊಂಡ ಕಾರಣ ಬಸ್ ಆಳವಾದ ಕಂದಕಕ್ಕೆ ಬಿದ್ದಿದೆ. ಅಪಘಾತದಲ್ಲಿ 10 ಮಂದಿ ಸಾವನ್ನಪ್ಪಿದ್ದು, 33 ಮಂದಿ ಗಾಯಗೊಂಡಿದ್ದಾರೆ. ಕೂಡಲೇ ಅವರನ್ನು ನಾರಾಯಣ ಆಸ್ಪತ್ರೆ ಮತ್ತು ರಿಯಾಸಿ ಜಿಲ್ಲಾ ಆಸ್ಪತ್ರೆಗೆ ಕಳುಹಿಸಲಾಯಿತು.

ಈ ಉಗ್ರರು ಪಾಕಿಸ್ತಾನ ಮೂಲದವರಾಗಿದ್ದಾರೆ ಎಂಬುದು ತಿಳಿದುಬಂದಿದೆ, ಇದೀಗ ಡ್ರೋನ್ ಮೂಲಕ ಇಡೀ ಕಾಡನ್ನು ಸುತ್ತುವರೆಯಲಾಗಿದೆ, ಅಲ್ಲಿ ಎಲ್ಲಾದರೂ ಉಗ್ರರ ಚಟುವಟಿಕೆ ಕಂಡುಬಂದರೆ ತಕ್ಷಣ ಮಾಹಿತಿ ಲಭ್ಯವಾಗುತ್ತದೆ. ಅಪಘಾತಕ್ಕೀಡಾದ ಬಸ್ ಶಿವ ಖೋಡಿಯಿಂದ ಹಿಂತಿರುಗುತ್ತಿತ್ತು. ಯಾತ್ರಾರ್ಥಿಗಳು ಶಿವಖೋಡಿಯಲ್ಲಿ ಭೋಲೆ ಬಾಬಾನ ದರ್ಶನ ಪಡೆದು ಕತ್ರಾಗೆ ಹಿಂತಿರುಗುತ್ತಿದ್ದರು.

**ಆತಂಕವನ್ನು ಸೃಷ್ಟಿಸುವ ದೃಶ್ಯಗಳು:** ಬಸ್ಸಿನ ಸುತ್ತಲಿನ ಚಿತ್ರಗಳು ಆತಂಕವನ್ನು ಸೃಷ್ಟಿಸುತ್ತದೆ. ಎಲ್ಲೆಂದರಲ್ಲಿ ಹಲವರ ಶವಗಳು ಬಿದ್ದಿರುವುದು ಕಂಡು ಬಂದಿದೆ. ಮೃತದೇಹಗಳು ಛಿದ್ರಗೊಂಡ ಸ್ಥಿತಿಯಲ್ಲಿ ಪತ್ತೆಯಾಗಿವೆ. ಅವರಲ್ಲಿ ಕೆಲವು ಮಕ್ಕಳ ಶವಗಳಿದ್ದವು. ಪೌನಿ ಮತ್ತು ರಾನ್ಸು ನಡುವಿನ ಚಂಡಿ ಮೋಡ್‌ನಲ್ಲಿರುವ ದರ್ಗಾ ಬಳಿ ಭಯೋತ್ಪಾದಕರು ಗುಂಡು ಹಾರಿಸಲು ಪ್ರಾರಂಭಿಸಿದರು ಎಂದು ಹೇಳಲಾಗುತ್ತದೆ. ಬಸ್ಸಿನಲ್ಲಿ 40 ರಿಂದ 50 ಯಾತ್ರಾರ್ಥಿಗಳು ಇದ್ದರು.

ರಿಯಾಸಿ ಆಡಳಿತದ ಪ್ರಕಾರ, ಬಸ್ ಹಳ್ಳಕ್ಕೆ ಬಿದ್ದು ಜನರು ಸಾವನ್ನಪ್ಪಿದ್ದಾರೆ. ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆ ಪೂರ್ಣಗೊಂಡಿದೆ. ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಯಾತ್ರಾರ್ಥಿಗಳು ಉತ್ತರ ಪ್ರದೇಶ, ದೆಹಲಿ ಮತ್ತು ರಾಜಸ್ಥಾನದಿಂದ ಬಂದವರು. ಪುಟ 2

## 25 ವರ್ಷದ ಬಳಿಕ ಜೆಡಿಎಸ್‌ಗೆ ಕೇಂದ್ರದಲ್ಲಿ ಮಂತ್ರಿ ಸ್ಥಾನ!

# ಹೆಚ್‌ಡಿಕೆಗೆ ಮಂತ್ರಿಗಿರಿ

**ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಅವರ ಮೂರನೇ ಅಧಿಕಾರ ಅವಧಿಯಲ್ಲಿ ಮಾಜಿ ಸಿಎಂ ಹೆಚ್‌ಡಿ ಕುಮಾರಸ್ವಾಮಿ ಅವರಿಗೆ ಕ್ಯಾಬಿನೆಟ್ ಮಂತ್ರಿಗಿರಿ ಸಿಕ್ಕಿದೆ. ಈ ಮೂಲಕ ಬರೋಬ್ಬರಿ 25 ವರ್ಷದ ಬಳಿಕ ಜೆಡಿಎಸ್‌ಗೆ ಕೇಂದ್ರದಲ್ಲಿ ಮಂತ್ರಿಗಿರಿ ಒಲಿದಂತಾಗಿದೆ.

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ 1996-97ರಲ್ಲಿ ದೇವೇಗೌಡರು ಪ್ರಧಾನಿಯಾಗಿದ್ದರು. ಈ ಸಂದರ್ಭದಲ್ಲಿ ಕೆಲ ಕಾಲ ಗೃಹ ಖಾತೆಯನ್ನು ತಮ್ಮ ಬಳಿಯೇ ಇಟ್ಟುಕೊಂಡಿದ್ದರು.

ದೇವೇಗೌಡರು ಪ್ರಧಾನಿಯಾಗಿದ್ದ ಸಮಯದಲ್ಲಿ ಅಂದು ಜೆಡಿಎಸ್ ನಾಯಕರಾಗಿದ್ದ ಎಸ್.ಆರ್. ಬೊಮ್ಮಾಯಿ ಮತ್ತು ಸಿಎಂ ಇಬ್ರಾಹಿಂ ಅವರಿಗೆ ಕೇಂದ್ರದಲ್ಲಿ ಮಂತ್ರಿ ಸ್ಥಾನ ಸಿಕ್ಕಿತ್ತು. ಆ ನಂತರ ಜೆಡಿಎಸ್‌ನಿಂದ ಸಂಸತ್‌ಗೆ ಆಯ್ಕೆ ಆಗುತ್ತಿದ್ದರೂ ಯಾರಿಗೂ ಮಂತ್ರಿ ಸ್ಥಾನ ಸಿಕ್ಕಿರಲಿಲ್ಲ.

2004, 2009ರ ಚುನಾವಣೆಯಲ್ಲಿ ಯುಪಿಎ ಸರ್ಕಾರ ಅಧಿಕಾರದಲ್ಲಿದ್ದರೆ 2014 ರಿಂದ 2024ರ ವರೆಗೆ ಎನ್‌ಡಿಎ ಸರ್ಕಾರ ಕೇಂದ್ರದಲ್ಲಿ ಅಧಿಕಾರದಲ್ಲಿತ್ತು. 2014ರ ಚುನಾವಣೆಯಲ್ಲಿ ಯಾರೊಂದಿಗೂ ಮೈತ್ರಿ ಮಾಡಿಕೊಳ್ಳದ ಜೆಡಿಎಸ್ 2019ರಲ್ಲಿ ಕಾಂಗ್ರೆಸ್ ಜೊತೆ ಮೈತ್ರಿ ಮಾಡಿಕೊಂಡು ಕೇವಲ ಒಂದು ಸ್ಥಾನ ಮಾತ್ರ ಗೆದ್ದುಕೊಂಡಿತ್ತು.

ಈ ಚುನಾವಣೆಯಲ್ಲಿ ಮೊದಲೇ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿದ್ದ ಜೆಡಿಎಸ್ ಹಾಸನ, ಮಂಡ್ಯ, ಕೋಲಾರದಲ್ಲಿ ಸ್ಪರ್ಧಿಸಿತ್ತು. ಹಾಸನದಲ್ಲಿ ಪ್ರಜ್ವಲ್ ರೇವಣ್ಣ ಸೋತರೆ, ಮಂಡ್ಯದಲ್ಲಿ ಹೆಚ್‌ಡಿ ಕುಮಾರಸ್ವಾಮಿ, ಕೋಲಾರದಲ್ಲಿ ಮಲ್ಲೇಶ್ ಬಾಬು ಜಯಗಳಿಸಿದ್ದರು. ಪುಟ 2



## ಹೆಬ್ಬಾಳ್ಕರ್ ಬಳಿ ಕ್ಷಮೆ ಕೇಳಿದ ಸಿದ್ದರಾಮಯ್ಯ



**ಬೆಂಗಳೂರು:** ಮಗನ ಸೋಲಿನ ಬೇಸರಲ್ಲಿದ್ದ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಬಳಿ ಸಿಎಂ ಸಿದ್ದರಾಮಯ್ಯ ಕ್ಷಮೆ ಕೇಳಿದ್ದಾರೆ.

ಸಿಎಂ ಭೇಟಿಗೆ ಆಗಮಿಸಿದ್ದ ಬೆಳಗಾವಿ ಭಾಗದ ಸಚಿವರಾದ ಲಕ್ಷ್ಮಿ ಹೆಬ್ಬಾಳ್ಕರ್ ಹಾಗೂ ಸತೀಶ್ ಜಾರಕಿಹೊಳಿ ಮತ್ತು ಚಿಕ್ಕೋಡಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಆಗಮಿಸಿದ್ದರು

ಲಕ್ಷ್ಮಿ ಹೆಬ್ಬಾಳ್ಕರ್ ನೋಡಿ ಸಿಎಂ ಸಿದ್ದರಾಮಯ್ಯ ಸಾರಿ ಕಣಮ್ಮ ಎಂದಿದ್ದಾರೆ. ಸಿಎಂ ಸಾರಿ ಎಂದ ಕೂಡಲೇ ತುಂಬಾ ಭಾವುಕರಾಗಿ ಲಕ್ಷ್ಮಿ ಹೆಬ್ಬಾಳ್ಕರ್ ಮೌನಕ್ಕೆ ಶರಣಾದರು.

ಬೆಳಗಾವಿ ಲೋಕಸಭಾ ಕ್ಷೇತ್ರದಿಂದ ಹೆಬ್ಬಾಳ್ಕರ್ ಪುತ್ರ ಮೃಣಾಲ್ ಅವರು 1,78,437 ಮತಗಳ ಅಂತರದಿಂದ ಸೋತಿದ್ದರು. ಬಿಜೆಪಿಯ ಜಗದೀಶ್ ಶೆಟ್ಟರ್ ಅವರಿಗೆ 7,62,029 ಮತಗಳು ಬಿದ್ದರೆ ಮೃಣಾಲ್ ಅವರಿಗೆ 5,83,592 ಮತಗಳು ಬಿದ್ದಿದ್ದವು.

### ಮೋದಿ ಸಂಪುಟದಲ್ಲಿ ನಡ್ಡಾಗೆ ಸ್ಥಾನ

## ಯಾರಾಗ್ತಾರೆ ಬಿಜೆಪಿ ಮುಂದಿನ ಅಧ್ಯಕ್ಷ?

**ನವದೆಹಲಿ:** ಜೆಪಿ ನಡ್ಡಾ ಅವರು ಮೋದಿ ಸಂಪುಟದಲ್ಲಿ ಸ್ಥಾನ ಪಡೆದ ಹಿನ್ನೆಲೆಯಲ್ಲಿ ಮುಂದಿನ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಯಾರಾಗುತ್ತಾರೆ ಎಂಬ ಕುತೂಹಲ ಮನೆ ಮಾಡಿದೆ.

ಗುಜರಾತ್‌ನಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ಪ್ರಕಾಶ್ ನಡ್ಡಾ ಅವರು ಭಾನುವಾರ ಕೇಂದ್ರ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಹಿಮಾಚಲ ಪ್ರದೇಶದಲ್ಲಿ ಶಾಸಕರಾಗಿದ್ದ ಇವರು ಸಿಎಂ ಪ್ರೇಮ್ ಕುಮಾರ್ ಧುಮಲ್ ಸರ್ಕಾರದಲ್ಲಿ ಅರಣ್ಯ ಮತ್ತು ವಿಜ್ಞಾನ, ತಂತ್ರಜ್ಞಾನ ಖಾತೆಯ ಸಚಿವರಾಗಿದ್ದರು.

ಮೋದಿ ಸರ್ಕಾರ ಬಂದ ನಂತರ 2014-2019ರ ಅವಧಿಯಲ್ಲಿ ನಡ್ಡಾ ಅವರಿಗೆ ಕೇಂದ್ರ ಆರೋಗ್ಯ ಖಾತೆಯನ್ನು ನೀಡಲಾಗಿತ್ತು. ಅಮಿತ್ ಶಾ ಮೋದಿ ಸಂಪುಟದ ಸೇರಿದ ಬಳಿಕ 2020ರಲ್ಲಿ ಅವರನ್ನು ರಾಷ್ಟ್ರೀಯ ಅಧ್ಯಕ್ಷರನ್ನಾಗಿ ಮಾಡಲಾಗಿತ್ತು. ನಡ್ಡಾ ಅವಧಿ 2022ರಲ್ಲೇ ಅಂತ್ಯವಾಗಿದ್ದರೂ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಅವಧಿಯನ್ನು 2024ರವರೆಗೆ ವಿಸ್ತರಿಸಲಾಗಿತ್ತು. ಪುಟ 2



### ಬಕ್ರೀದ್ ಹಿನ್ನಲೆ ಚಾಮರಾಜಪೇಟೆಯಲ್ಲಿ ಮೇಕೆಗಳ ಮೇಳ

## ನಟರ ಹೆಸರಲ್ಲಿ ಮೇಕೆ- ಟಗರು



**ಬೆಂಗಳೂರು:** ಮುಸ್ಲಿಂ ಬಾಂಧವರ ಪವಿತ್ರ ಹಬ್ಬ ಬಕ್ರೀದ್‌ಗೆ ಇನ್ನು ಒಂದು ವಾರ ಮಾತ್ರ ಬಾಕಿ ಇದೆ. ಈ ಹಬ್ಬದ ಸಲುವಾಗಿ ಮೇಕೆ- ಕುರಿಗಳಿಗೆ ಭಾರಿ ಡಿಮ್ಯಾಂಡ್ ಶುರುವಾಗಿದ್ದು, ಬಕ್ರೀದ್ ಸಲುವಾಗಿಯೇ ಚಾಮರಾಜಪೇಟೆ ಈದ್ಗಾ ಮೈದಾನದಲ್ಲಿ ಕುರಿ- ಮೇಕೆಗಳ ಸಂತೆ ನಡೆಯಿತು. ಮೇಳದಲ್ಲಿ ವಿವಿಧ ಬಗೆಯ ಮೇಕೆಯ ತಳಿಗಳು ಇದ್ದುದರಿಂದ ಲಕ್ಷಾಂತರ ರೂಪಾಯಿಯ ವಹಿವಾಟು ಸಹ ನಡೆಯಿತು.

ಪ್ರತಿವರ್ಷ ಬಕ್ರೀದ್ ಹಬ್ಬದ ಸಲುವಾಗಿ ನಗರದ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ದೊಡ್ಡ ಮಟ್ಟದ ಮೇಕೆ, ಕುರಿ, ಟಗರು ಮೇಳದ ಸಂತೆ ನಡೆಯುತ್ತೆ. ಈ ವರ್ಷವು ಕುರಿ- ಮೇಕೆಗಳ ಸಂತೆ ನಡೆಯುತ್ತಿದ್ದು ಮೇಳದಲ್ಲಿ ವಿವಿಧ ತಳಿಯ ಮೇಕೆ, ಕುರಿ, ಟಗರುಗಳಿಗೆ ಭಾರಿ ಡಿಮ್ಯಾಂಡ್ ಇತ್ತು. ಇನ್ನು ಮೇಳದಲ್ಲಿ 7 ಬಗೆಯ ಕುರಿಗಳು ಮೂರು ಬಗೆಯ ಮೇಕೆಗಳು ಗಮನ ಸೆಳೆದ್ವು. ಅದರಲ್ಲಿ ಬಂಡೂರ್ ಕುರಿ, ಅಮಿನ್ ಗಾಡ್, ನಾಟಿ ತಳಿ, ಕರಿ ಕುರಿ, ಪಾವಗಡ, ಶಿರ ಕುರಿ, ಜಮುನ ಪುರಿ, ನಾಟಿ ಹೋತಕ್ಕೆ ಭಾರಿ ಡಿಮ್ಯಾಂಡ್ ಇತ್ತು. ಹೀಗಾಗಿ ನಿನ್ನೆ 20 ಸಾವಿರಕ್ಕೂ ಹೆಚ್ಚು ಮೇಕೆ, ಕುರಿ, ಟಗರುಗಳನ್ನ ತರಿಸಲಾಗಿತ್ತು. ಇವುಗಳಿಗೆ 10 ಸಾವಿರದಿಂದ ಹಿಡಿದು ಲಕ್ಷಾಂತರ ರೂಪಾಯಿವರೆಗೂ ಹಣ ನಿಗದಿ ಮಾಡಲಾಗಿತ್ತು. ಪುಟ 2

### ಪಾಟರಿ ಟೌನ್ ಮೆಟ್ರೋ ಸ್ಟೇಷನ್‌ಗೆ ಪುನೀತ್ ರಾಜ್ ಕುಮಾರ್ ಹೆಸರಿಡಲು ಮನವಿ

## ಪಿಎಂ ಮೋದಿ ಕಚೇರಿಯಿಂದ ಸಕಾರಾತ್ಮಕ ಪ್ರತಿಕ್ರಿಯೆ



**ಬೆಂಗಳೂರು:** ಗೊಟ್ಟಿಗೆರೆ ಹಾಗೂ ನಾಗವಾರ ನಡುವಣ ನಮ್ಮ ಮೆಟ್ರೋ ಪಿಂಕ್ ಮಾರ್ಗದ ಪಾಟರಿ ಟೌನ್ ಸ್ಟೇಷನ್ ಗೆ ಪವರ್ ಸ್ಟಾರ್ ಪುನೀತ್ ರಾಜ್ ಕುಮಾರ್ ಹೆಸರಿಡಲು ಒತ್ತಡ ಹೆಚ್ಚಾಗಿದೆ. ಪಾಟರಿ ಟೌನ್ ಮೆಟ್ರೋ ಸ್ಟೇಷನ್ ಗೆ ಕರ್ನಾಟಕ ರತ್ನ ಪುನೀತ್ ರಾಜ್ ಕುಮಾರ್ ಹೆಸರಿಡುವಂತೆ ಪ್ರಧಾನಿ ನರೇಂದ್ರ ಮೋದಿ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ್, ರಾಜ್ಯಪಾಲರು ಹಾಗೂ ಮೆಟ್ರೋ ಎಂಡಿಗೆ ಕರ್ನಾಟಕ ಬಹುಜನ ಫೆಡರೇಶನ್ ಪತ್ರ ಬರೆದಿದೆ. ಈ ಪತ್ರಕ್ಕೆ ಈಗಾಗಲೇ ಪ್ರಧಾನಿ ಕಾರ್ಯಾಲಯದಿಂದ ಸಕಾರಾತ್ಮಕ ಪ್ರತಿಕ್ರಿಯೆ ಬಂದಿದ್ದು, ಸಿಎಂ ಸಿದ್ದರಾಮಯ್ಯ ಕೂಡ ಮೆಟ್ರೋ ಎಂಡಿಗೆ ಮನವಿ ಪರಿಶೀಲಿಸಲು ಪತ್ರ ಬರೆದಿದ್ದಾರೆ.

ನಿಯಮಾನುಸಾರು ಅಪ್ಪು ಹೆಸರು ಇಡುವ ಬಗ್ಗೆ ಪರಿಶೀಲಿಸಲಾಗುವುದು ಎಂದು ಹೋರಾಟಗಾರರಿಗೆ ಬಿಎಂಆರ್ ಸಿಎಲ್ ಉತ್ತರ ನೀಡಿದೆ. ಈಗಾಗಲೇ ಈ ಮಾರ್ಗದ ಕಾಮಗಾರಿ ಶೇ 50 ರಷ್ಟು ಮುಗಿದಿದ್ದು ಕಾಮಗಾರಿ ಪೂರ್ಣವಾಗುವಷ್ಟರಲ್ಲಿ ಪುನೀತ್ ಹೆಸರಿಡುವ ಬಗ್ಗೆ ತೀರ್ಮಾನ ಕೈಗೊಳ್ಳಬೇಕು ಎಂದು ಸ್ಥಳೀಯ ನಿವಾಸಿಗಳು ಕೂಡ ಮನವಿ ಮಾಡಿದ್ದಾರೆ. ಪುಟ 2

### ಬಿಜೆಪಿ ವಿಜಯೋತ್ಸವ ಮುಗಿಸಿ ಮನೆಗೆ ಹೋಗುತ್ತಿದ್ದ ಇಬ್ಬರಿಗೆ ಚಾಕು ಇರಿತ

## ಮೂವರ ವಶ

**ಮಂಗಳೂರು:** ಮಂಗಳೂರಿನಲ್ಲಿ ಚುನಾವಣೋತ್ತರ ಹಿಂಸಾಚಾರ ಮುಂದುವರೆದಿದೆ. ನಿನ್ನೆ ರಾತ್ರಿ ಬಿಜೆಪಿ ವಿಜಯೋತ್ಸವ ವೇಳೆ ಅನ್ಯಕೋಮಿಯ ಗುಂಪೊಂದು ಇಬ್ಬರಿಗೆ ಚಾಕು ಇರಿದಿದ್ದು ಓರ್ವನ ಮೇಲೆ ದಾಳಿ ನಡೆಸಿದ್ದಾರೆ. ಈ ಘಟನೆ ಸಂಬಂಧ ಕೊಣಾಜೆ ಠಾಣೆ ಪೊಲೀಸರು ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಯುತ್ತಿದ್ದಾರೆ. ಹರೀಶ್(41), ನಂದಕುಮಾರ್ (24)ಗೆ ಚಾಕು ಇರಿಯಲಾಗಿದ್ದು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಮತ್ತೋರ್ವ ಕೃಷ್ಣ ಕುಮಾರ್ ಎಂಬಾತನ ಮೇಲೆ ಹಿಗ್ಗಾಮುಗ್ಗಾ ಹಲ್ಲೆ ನಡೆಸಲಾಗಿದೆ.



ಲೋಕಸಭಾ ಚುನಾವಣೆಯ ಫಲಿತಾಂಶದ ದಿನ ಸಂಭ್ರಮಕ್ಕಾಗಿ ಪಟಾಕಿ ಸಿಡಿಸಿದಕ್ಕೆ ಗಲಾಟೆಯಾಗಿ ಮರು ದಿನ ಬಜರಂಗದಳ ಕಾರ್ಯಕರ್ತನಿಗೆ ಕಾಂಗ್ರೆಸ್ ಕಾರ್ಯಕರ್ತನಿಂದ ಹಲ್ಲೆ ನಡೆದಿದ್ದ ಘಟನೆ ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ತಾಲೂಕಿನ ಕುಂಪಲ ಎಂಬಲ್ಲಿ ನಡೆದಿತ್ತು. ಆದರೆ ನಿನ್ನೆ ಕೂಡ ಚುನಾವಣೋತ್ತರ ಹಿಂಸಾಚಾರ ಘಟನೆ ಮರುಕಳಿಸಿದೆ. ಪುಟ 2

# ನಾಳೆ ಬೃಹತ್ ಪ್ರತಿಭಟನೆ

**ಬೆಂಗಳೂರು:** ಕಲ್ಯಾಣ ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯ ಹಾಗೂ ವಿವಿಧ ಹುದ್ದೆಗಳ ನೇಮಕಾತಿ ಮುಂಬಡ್ತಿಯಲ್ಲಿ ನಮ್ಮ ಭಾಗದ ಅಭ್ಯರ್ಥಿಗಳಿಗೆ ಸರ್ಕಾರದಿಂದ ಆಗುತ್ತಿರುವ ತಾರತಮ್ಯ ನೀತಿ ವಿರೋಧಿಸಿ ಜೂನ್ 11 ಮಂಗಳವಾರ ನಗರದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದ್ದು ಪಕ್ಷಾತೀತವಾಗಿ ಭಾಗವಹಿಸಿ ಯಶಸ್ವಿಗೊಳಿಸಿ ಎಂದು ಮಾಜಿ ಸಂಸದ ಹಾಗೂ ಕಲ್ಯಾಣ ಕರ್ನಾಟಕ 371 (ಜೆ) ಹೋರಾಟ ಸಮಿತಿಯ ಸಂಚಾಲಕ ಕೆ.ವಿರೂಪಾಕ್ಷಪ್ಪ ಹೇಳಿದರು. ನಗರದ ಖಾಸಗಿ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಳಿಗ್ಗೆ ಪ್ರತಿಭಟನೆ ಮೆರವಣಿಗೆ ನಗರದ ಪ್ರವಾಸಿ ಮಂದಿರದಿಂದ ಸಾಗಿ ಗಾಂಧಿ ವೃತ್ತದಲ್ಲಿ ರಸ್ತೆ ತಡೆ ಜನ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುತ್ತದೆ. ನಂತರ ತಹಶೀಲ್ದಾರ್ ಕಛೇರಿಗೆ ಸಾಗಿ ದಂಡಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಲಾಗುವುದು. ಸಾವಿರಾರು ಸಂಖ್ಯೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಉಪನ್ಯಾಸಕರು ವಿದ್ಯಾರ್ಥಿಗಳು, ನ್ಯಾಯವಾದಿಗಳು, ಮಠಾಧೀಶರು, ಹಾಲಿ ಮಾಜಿ ಶಾಸಕರು, ಜನಪ್ರತಿನಿಧಿಗಳು, ಪಾಲಕರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸೇರಿದಂತೆ ಪ್ರತಿಯೊಬ್ಬರೂ ಈ ಬೃಹತ್ ಪ್ರತಿಭಟನೆಯಲ್ಲಿ ಭಾಗವಹಿಸಿ ನಮ್ಮ ಭಾಗಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ಪ್ರತಿಭಟಿಸಿ ಹೋರಾಟದ ಕಾವು ಸರ್ಕಾರಕ್ಕೆ ಮುಟ್ಟುವಂತೆ ಸಹಕರಿಸಲು ಮನವಿ ಮಾಡಿದರು.

# ರಾಜಧಾನಿಯಲ್ಲಿ ಅನಧಿಕೃತ ಕಟ್ಟಡಗಳ ತೆರವು

**ಬೆಂಗಳೂರು:** ಅನಧಿಕೃತ ಬಡಾವಣೆಗಳಲ್ಲಿ ನಿರ್ಮಾಣ ಮಾಡಿರುವ ಕಟ್ಟಡಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಆರಂಭಿಸಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಸ್ವಾಧೀನ ಪಡಿಸಿಕೊಂಡಿರುವ ಪ್ರದೇಶ, ಸಮಗ್ರ ಅಭಿವೃದ್ಧಿ ಯೋಜನಾ ಪ್ರದೇಶ (ಸಿಡಿಪಿ), ಶಿವರಾಮ ಕಾರಂತ ಬಡಾವಣೆ ಹಾಗೂ ಬಿಡಿಎ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆಗಳು ನಿರ್ಮಾಣ ಆಗುತ್ತಿರುವುದು ಗಮನಕ್ಕೆ ಬಂದಿದ್ದು, ನಿರ್ಮಾಣಗಳನ್ನು ತೆರವುಗೊಳಿಸಲಾಗುತ್ತಿದೆ ಎಂದು ಬಿಡಿಎ ಪ್ರಕಟಣೆ ತಿಳಿಸಿದೆ.

ಖಾಸಗಿ ಬಡಾವಣೆ ನಿರ್ಮಾಣಕ್ಕೆ ಬಿಡಿಎಯಿಂದ ಬಡಾವಣೆ ನಕ್ಷೆಯ ಅನುಮೋದನೆಯನ್ನು ಪಡೆದುಕೊಳ್ಳಬೇಕು. ನಂತರ ಬಡಾವಣೆಯನ್ನು ರಚಿಸಿ, ನಿವೇಶನವನ್ನು ಹಂಚಿಕೆ ಮಾಡಬೇಕು. ಪ್ರಾಧಿಕಾರದಿಂದ ಬಡಾವಣೆಯ ನಕ್ಷೆಯನ್ನು ಅನುಮೋದನೆ ಪಡೆಯದೇ ಬಡಾವಣೆಯನ್ನು ನಿರ್ಮಿಸಿ, ನಿವೇಶನ ಗಳನ್ನು ಮಾರಾಟ ಮಾಡಲಾಗುತ್ತಿದೆ. ಈ ವಿಷಯವು ಪ್ರಾಧಿಕಾರದ ಗಮನಕ್ಕೆ ಬಂದಿದ್ದು, ಆಯುಕ್ತರ ಆದೇಶದಂತೆ ಜೂನ್ 7ರಿಂದ ತೆರವು ಕಾರ್ಯ ಆರಂಭಿಸಲಾಗಿದೆ. ಜೆ.ಬಿ. ಕಾವಲ್ ಗ್ರಾಮದಲ್ಲಿ ಸುಮಾರು ಐದು ಎಕರೆ ಪ್ರದೇಶದಲ್ಲಿ ಅನಧಿಕೃತ ಬಡಾವಣೆಯ ನಿರ್ಮಾಣ ಕಾಮಗಾರಿಯನ್ನು ತೆರವು ಗೊಳಿಸಲಾಗಿದೆ ಎಂದು ತಿಳಿಸಿದೆ. ಅನಧಿಕೃತ ಬಡಾವಣೆ ನಿರ್ಮಾಣ, ನಿವೇಶನಗಳ ಮಾರಾಟ ಮಾಡುವವರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು ಎಂದೂ ಇದೇ ವೇಳೆ ಎಚ್ಚರಿಕೆ ನೀಡಿದೆ.



# ವಿ.ಸೋಮಣ್ಣಗೆ ಯಾವ ಖಾತೆ !

**ತುಮಕೂರು :** ನಾನು ಕೆಲಸಗಾರ,ನನ್ನನ್ನು ಹೈಕಮಾಂಡೇ ತುಮಕೂರಿಗೆ ಕಳಿಸಿದೆ ನನ್ನನ್ನು ಗೆಲಿಸಿದರೆ ತುಮಕೂರನ್ನು ಎರಡನೇ ವಾರಣಾಸಿ ಮಾಡತ್ತೇನೆ ಎಂದು ಕಾಲಿಗೆ ಚಕ್ರಕಟ್ಟಿಕೊಂಡವರಂತೆ ಪಾದರಸದಂತೆ ಓಡಾಡುತ್ತಿದ ವಿ.ಸೋಮಣ್ಣ ತುಮಕೂರು ಲೋಕಸಭಾ ಕ್ಷೇತ್ರದಿಂದ ಗೆದ್ದಾಯ್ತು, ಈಗ ಕೇಂದ್ರದಲ್ಲಿ ಮಂತ್ರಿ ಭಾಗ್ಯವು ದೊರಕಿರುವುದು ಮೈತ್ರಿ ನಾಯಕರ ಖುಷಿಯನ್ನು ಹಿಮ್ಮಡಿಗೊಳ್ಳಿಸಿದೆ.

ತುಮಕೂರು ಲೋಕಸಭಾ ಕ್ಷೇತ್ರದಿಂದ ಗೆದ್ದ ದಿನವೇ ಮೈತ್ರಿ ಪಕ್ಷದ ಜೆಡಿಎಸ್ ಕಾರ್ಯಕರ್ತರಿಗೆ ಅಭಿನಂದನೆಗಳನ್ನು ಹೇಳಿ,ನಾನು ಸಹ ಜೆಡಿಎಸ್ ನಲ್ಲಿ ಇದವನ್ನೆ ಜನತಾಪರಿವಾರದವನ್ನೆ ನಾನು ಸದಾಕಾಲವೂ ನಿಮ್ಮಜೊತೆ ಇರುತ್ತೆನೆ ಎನ್ನುವ ಮೂಲಕ ಜೆಡಿಎಸ್ ಕಾರ್ಯಕರ್ತರಲ್ಲಿನ ಹೊಸ ಹುರುಪನ್ನು ಮೂಡಿಸಿದರು.ವಿ ಸೋಮಣ್ಣ ನವರು ಗೆದ್ದರೆ ಕೇಂದ್ರ ಮಂತ್ರಿಯಾಗತ್ತಾರೆ ಎಂದು ಮೈತ್ರಿಪಕ್ಷಗಳ ಸಭೆ,ಸಮಾರಂಭಗಳಲ್ಲಿ ನಾಯಕರು ನುಡಿಯುತ್ತಿದ ಮಾತುಗಳು ಹುಸಿಯಾಗಲಿಲ್ಲ.ಮೈತ್ರಿ ನಾಯಕರ ಮಾತಿನಂತೆ ಮೋದಿ ನೇತೃತ್ವದ ಸರ್ಕಾರದಲ್ಲಿ ಸೋಮಣ್ಣ ಕೇಂದ್ರ ಸರ್ಕಾರದ ಭಾಗವಾಗಿ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.ಯಾವ ಖಾತೆ ಸಿಗಬಹುದು ಎಂಬ ಕಾತುರದಲಿ ಮೈತ್ರಿ ಕಾರ್ಯಕರ್ತರಿದ್ದಾರೆ.



ವಾಜಿಪೇಯಿ ಸಚಿವ ಸಂಪುಟವಿದಾಗ ಎರಡು ಬಾರಿ ಸಂಸದರಾಗಿ ಆಯ್ಕೆ ಆಗಿದ ದಿವಂಗತ ಎಸ್ ಮಲ್ಲಿಕಾರ್ಜುನಯ್ಯ ನವರು ಉಪ ಸಭಾಪತಿ ಯಾಗಿದ್ದರು,ಜಿ ಎಸ್ ಬಸವರಾಜು ಎರಡು ಬಾರಿ ಸಂಸದರಾಗಿ ಆಯ್ಕೆಯಾದರು ಕೇಂದ್ರದಲ್ಲಿ ಯಾವುದೆ ಹುದ್ದೆ ಗಿಟ್ಟಿಸುವಲ್ಲಿ ಸಫಲವಾಗಲಿಲ್ಲ. ಮೊದಲ ಬಾರಿಗೆ ಗೆದ್ದ ವಿ ಸೋಮಣ್ಣ ಕೇಂದ್ರ ಸರ್ಕಾರದ ಭಾಗವಾಗಿತ್ತಿರುವುದಕ್ಕೆ ಬಿಜೆಪಿ,ಜೆ ಡಿ ಎಸ್ ಕಾರ್ಯಕರ್ತರು ಹರ್ಷ ವ್ಯಕ್ತಪಡಿಸಿದ್ದಾರೆ.

ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಯು ಮೈಸೂರು ಕರ್ನಾಟಕದ ಎರಡು ಪಕ್ಷಗಳ ಗೆಲುವಿಗೂ ಸಹಕಾರಿಯಾಗಿದೆ.ಕೋಲಾರ,ಚಿಕ್ಕಬಳ್ಳಾಪುರ, ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ಮಂಡ್ಯ,ಮತ್ತು ಮೈಸೂರು ಜಿಲ್ಲೆಗಳಲ್ಲಿ ಅಭ್ಯರ್ಥಿ ಗಳು ಗೆಲುವುದಕ್ಕೂ ಮೈತ್ರಿ ಕಾರಣವಾಗಿತ್ತು.

ಈ ಭಾಗದಲ್ಲಿರುವ ಒಕ್ಕಲಿಗ,ಲಿಂಗಾಯತ, ಪರಿಶಿಷ್ಟ ಜಾತಿ (ಎಡಗೈ) ಹಾಗೂ ಕಾಡುಗೊಲ್ಲ ಸೂತ್ರವು ಫಲಿಸಿದೆ.

ನಾನು ಈ ಹಿಂದೆ ಸಂಸದನಾಗಿ ಹಲವು ಕೆಲಸ ಮಾಡಿದೇನೆ,ನನ್ನ ಜನಾಂಗ,ನನ್ನ ಕೆಲಸ,ಸ್ಥಳೀಯತೆ ಕೈ ಹಿಡಿಯುತ್ತದೆ ಎಂಬ ಮುದ್ದಹನುಮೇಗೌಡರ ಅತೀಯಾದ ಆತ್ಮವಿಶ್ವಾಸ ಸೋಲುವಂತೆ ಮಾಡಿತು.

ವಿ ಸೋಮಣ್ಣ ನವರಿಗೆ ಯಾವ ಖಾತೆ ಸಿಗಬಹುದು ಎಂಬ ನಿರೀಕ್ಷೆ ಯಲ್ಲಿದೇವೆ,ಸೋಮಣ್ಣ ಕೇಂದ್ರ ಮಂತ್ರಿ ಆಗತ್ತಾರೆ ಎಂಬ ವಿಶ್ವಾಸ ನಮಗೆ ಇತ್ತು ಹಲವು ಬಾರಿ ನಾವೆ ಈ ಬಗ್ಗೆ ಚುನಾವಣಾ ಪ್ರಚಾರಗಳಲ್ಲಿ ಹೇಳಿದೇವು ಸೋಮಣ್ಣ ನವರು ಕೇಂದ್ರ ಸಚಿವರಾಗುತ್ತಿರುವ ವಿಚಾರ ಖುಷಿ ತಂದಿದೆ ಎನ್ನುತ್ತಾರೆ ಜೆಡಿಎಸ್ ಜಿಲ್ಲಾಧ್ಯಕ್ಷ ಆರ್ ಸಿ ಅಂಜನಪ್ಪ.

ತುಮಕೂರು ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದು ಕೇಂದ್ರಸಚಿವರಾಗುತ್ತಿರುವ ಕ್ಷಣಗಳನ್ನು ಕಣ್ಣುತುಂಬಿ ಕೊಳ್ಳು ತುಮಕೂರಿನ ಭದ್ರಮ್ಮ ಕಲ್ಯಾಣ ಮಂಟಪದಲ್ಲಿರುವ ಬಿಜೆಪಿ ಕಚೇರಿಯಲ್ಲಿ ಎಲ್ ಇ ಡಿ ಪರದೆ ವ್ಯವಸ್ಥೆ ಮಾಡಲಾಯಿತು. ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರು ಸಿಹಿ ಹಂಚಿ,ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಆರೋಗ್ಯ ಇಲಾಖೆ ಎಚ್ಚರಿಕೆ

# ನಕಲಿ ವೈದ್ಯರ ವಿರುದ್ಧ ಕ್ರಮ

**ಬೆಂಗಳೂರು:** ನಕಲಿ ವೈದ್ಯಕೀಯ ವೃತ್ತಿಯನ್ನು ಬೇರುಸಮೇತ ಕಿತ್ತೊಗೆಯಲು ಆರೋಗ್ಯ ಇಲಾಖೆ ಮುಂದಾಗಿದ್ದು, ಇದರನ್ವಯ ಖಾಸಗಿ ಆಸ್ಪತ್ರೆಗಳು, ಕ್ಲಿನಿಕ್'ಗಳು ತಮ್ಮ ಕೆಪಿಎಂಇ ನೋಂದಣಿ ಸಂಖ್ಯೆ, ಆಸ್ಪತ್ರೆಯ ಹೆಸರು ಮತ್ತು ಮಾಲೀಕರ ಹೆಸರನ್ನು ಕಟ್ಟಡದ ಮುಂಭಾಗದಲ್ಲಿ ಪ್ರದರ್ಶಿಸವುದು ಕಡ್ಡಾಯವಾಗಿದೆ ಎಂದು ಆದೇಶ ಹೊರಡಿಸಿದೆ.

ಈ ಸಂಬಂಧ ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿದ್ದು, ಕೆಪಿಎಂಇ ಕಾಯ್ದೆ ನಿಯಮ 5ರ ಪ್ರಕಾರ, ಸಾರ್ವಜನಿಕರ ಮಾಹಿತಿಗಾಗಿ ವೈದ್ಯಕೀಯ ಪದ್ಧತಿ ಮತ್ತು ಲಭ್ಯವಿರುವ ಸೇವೆಗಳ ವಿವರವನ್ನು ಆಸ್ಪತ್ರೆಯ ಆವರಣದ ಪ್ರಮುಖ ಸ್ಥಳಗಳಲ್ಲಿ ಸ್ಪಷ್ಟವಾಗಿ ಪ್ರದರ್ಶಿಸಬೇಕು ಎಂದು ಸೂಚಿಸಿದೆ.

ಕೆಲ ಖಾಸಗಿ ಆಸ್ಪತ್ರೆ, ಕ್ಲಿನಿಕ್‌ಗಳು ಸಾಂಪ್ರದಾಯಿಕ ಹಾಗೂ ಪಾರಂಪರಿಕ ಪದ್ಧತಿ, ಮನೆ ಮದ್ದುಗಳು, ಬಾಡಿ ಮಸಾಜ್ ಹಾಗೂ ವಿವಿಧ ಥೆರಪಿಗಳ ಅನಧಿಕೃತ ಅಭ್ಯಾಸದಲ್ಲಿ ತೊಡಗಿಕೊಂಡಿರುವುದು ಗಮನಕ್ಕೆ ಬಂದಿದೆ. ಇವುಗಳು ಕೆಪಿಎಂಇ ಕಾಯ್ದೆ ಅಡಿಯಲ್ಲಿ ವೈದ್ಯಕೀಯ ಚಿಕಿತ್ಸೆಗಳಾಗಿ ವರ್ಗೀಕರಿಸಲ್ಪಟ್ಟಿಲ್ಲ. ಆದ್ದರಿಂದ ಎಲ್ಲ ಖಾಸಗಿ ಆಸ್ಪತ್ರೆಗಳು ಮತ್ತು ಕ್ಲಿನಿಕ್ ಗಳು ಹೊರಭಾಗದಲ್ಲಿ ಮಾಹಿತಿ ಫಲಕವನ್ನು ಹಾಕಬೇಕು. ಅಲೋಪತಿ ಆಸ್ಪತ್ರೆಗಳು ನೀಲಿ ಬಣ್ಣ ಮತ್ತು ಆಯುರ್ವೇದ ಆಸ್ಪತ್ರೆಗಳು ಹಸಿರು ಬಣ್ಣ ಸೂಚಿತ ಫಲಕವನ್ನು ಬಳಸಬೇಕು. ಈ ಮೂಲಕ ಬಣ್ಣ ಸಂಹಿತೆಯನ್ನು ಕಡ್ಡಾಯವಾಗಿ ಅನುಸರಿಸಬೇಕು ಎಂದು ತಿಳಿಸಲಾಗಿದೆ.




ಈ ನಿಯಮಗಳನ್ನು ಅನುಸರಿಸಲು ವಿಫಲವಾದಲ್ಲಿ, ಅಂತಹವರ ವಿರುದ್ಧ ಕೆಪಿಎಂಇ ಕಾಯ್ದೆಯಡಿ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿ, ನಕಲಿ ಮತ್ತು ಅರ್ಹತೆ ಹೊಂದಿಲ್ಲದ ವೈದ್ಯರು ಸಮಾಜಕ್ಕೆ ಕಂಟಕರಾಗಿದ್ದು, ರೋಗಿಗಳ ಆರೋಗ್ಯದ ವಿಚಾರದಲ್ಲಿ ಚೆಲ್ಲಾಟವಾಡುತ್ತಿದ್ದಾರೆ. ನಮ್ಮ ಸರ್ಕಾರವು ರೋಗಿಗಳ ಸುರಕ್ಷತೆಗೆ ಮತ್ತು ಉತ್ತಮ ಆರೋಗ್ಯ ಸೇವೆ ಒದಗಿಸಲು ಬದ್ಧವಾಗಿದೆ. ನಕಲಿ ವೈದ್ಯರಿಗೆ ಕಡಿವಾಣ ಹಾಕಲು ಕಠಿಣ ನಿಯಮ ಜಾರಿಗೊಳಿಸಲಾಗಿದೆ.

ಅಲೋಪತಿ ಆಸ್ಪತ್ರೆಗಳು ನೀಲಿ ಬಣ್ಣ ಮತ್ತು ಆಯುರ್ವೇದಿಕ್ ಆಸ್ಪತ್ರೆಗಳು ಹಸಿರು ಬಣ್ಣದ ಬೋರ್ಡ್ ಬಳಸುವ ಮೂಲಕ ಬಣ್ಣ ಸಂಹಿತೆಯನ್ನು ಕಡ್ಡಾಯವಾಗಿ ಅನುಸರಿಸಬೇಕು. ಖಾಸಗಿ ವೈದ್ಯಕೀಯ ಆಸ್ಪತ್ರೆಗಳು ಈ ನಿಯಮಗಳನ್ನು ಅನುಸರಿಸುವಲ್ಲಿ ವಿಫಲವಾದಲ್ಲಿ ಏಕಂಇ ತಿದ್ದುಪಡಿ ಕಾಯಿದೆ 2017 ರ ಸೆಕ್ಷನ್ 19(5) ರ ಅನ್ವಯ ಕಠಿಣ ಕಾನೂನುಕ್ರಮ ಕೈಗೊಳ್ಳಲಾಗುವುದು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಸುತ್ತೋಲೆ ಪರಾಮರ್ಶಿಸಿ ಎಂದು ಹೇಳಿದ್ದಾರೆ.

# ಬೆಂ.ಗ್ರಾಮಾಂತರ ಎಸ್ಪಿ ಕಚೇರಿ ಜಾಗವೇ ಮಾರಾಟಕ್ಕೆ ಯತ್ನ

**ಬೆಂಗಳೂರು:** ಬೆಂಗಳೂರು ನಗರದಲ್ಲಿ ಖಾಲಿ ಜಾಗ ಕಾಣಿಸಿದರೆ ಸಾಕು. ಯಾರದ್ದೋ ಜಾಗಕ್ಕೆ ಯಾರೋ ಬೇಲಿ ಹಾಕಲು ಮುಂದಾಗುತ್ತಾರೆ. ಇನ್ಯಾರೋ ಬೇಲಿ ಹಾಕ್ತಾರೆ. ಇಂತಹ ಪ್ರಕರಣಗಳಿಂದ ಜನ ತತ್ತರಿಸಿ ಹೋಗಿದ್ದಾರೆ. ಒಂದು ಸೈಟ್ ತೆಗೆದುಕೊಳ್ಳಬೇಕಾದರೆ ಸಾವಿರ ಸಲ ಯೋಚನೆ ಮಾಡಿ, ದಾಖಲೆಗಳ ಪರಿಶೀಲಿಸಿ ಖರೀದಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ನಡುವೆ, ಖಾಲಿ ಸೈಟ್‌ಗಳ ನಕಲಿ ದಾಖಲೆ ಸೃಷ್ಟಿಸಿ ಭೂ ಕಬಳಿಕೆ ಮಾಡ್ತಿರುವ ಭೂಗಳ್ಳರು ಧೈರ್ಯ ಮಾಡಿ ಸೂಪರಿಡೆಂಟ್ ಆಪ್ ಪೊಲೀಸ್ ಕಚೇರಿಯ ಆಸ್ತಿಯನ್ನೇ ನಕಲಿ ದಾಖಲೆ ಸೃಷ್ಟಿಸಿ ಮಾರಾಟಕ್ಕೆ ಯತ್ನಿಸಿ ಪೊಲೀಸರ ಅತಿಥಿಯಾಗಿದ್ದಾರೆ.

ಬೆಂಗಳೂರಿನ ಹೃದಯ ಭಾಗದಲ್ಲಿರುವ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ನೇಪಾಳ ರಾಜರ ಹೆಸರಿನಲ್ಲಿದೆಯಂತೆ! ಅದೊಂದ್ ಕಡೆ ಸಿವಿಲ್ ಡಿಸ್ಪ್ಯೂಟ್ ಇದೆ. ಇದರ ನಡುವೆ ಎಸ್‌ಪಿ ಕಚೇರಿಯ ಆಸ್ತಿ ದಾಖಲೆಗಳನ್ನು ನಕಲಿ ಮಾಡಿಕೊಂಡಿರೋ ಕೆಲ ಭೂಗಳ್ಳರು ಸದ್ದಿಲ್ಲದೇ ಎಸ್‌ಪಿ ಕಚೇರಿಯ ಆಸ್ತಿಯನ್ನು ಮಾರಾಟ ಮಾಡಲು ಯತ್ನಿಸಿದ್ದಾರೆ.




ಅದರ ಮೊದಲ ಹಂತವಾಗಿ ಹನೀಫ್ ಎಂಬಾತ ಎಸ್‌ಪಿ ಕಚೇರಿಯ ಪೋಟೋಗಳು ಹಾಗೂ ವಿಡಿಯೋಗಳನ್ನು ತೆಗೆದು ಗ್ರಾಹಕರಿಗೆ ಶೇರ್ ಮಾಡಲು ಯತ್ನಿಸಿದ್ದಾನೆ. ಅದನ್ನು ಗಮನಿಸಿದ ಎಸ್‌ಪಿ ಕಚೇರಿಯಲ್ಲಿ ಕೆಲಸ ಮಾಡುವ ವೈರ್ ಲೆಸ್ ವಿಭಾಗದ ಇನ್ಸ್‌ಪೆಕ್ಟರ್ ಸಂತೋಷ್ ಗೌಡ ಪ್ರಶ್ನಿಸಿದ್ದಾರೆ. ಈ ವೇಳೆ ಆರೋಪಿ ಈ ಜಾಗ ನಮ್ಮದು, ನನ್ನ ಹೆಸರಿಗೆ ಜಿಪಿಎ ಇದೆ ಎಂದು ಅವಾಜ್ ಹಾಕಿದ್ದಾನೆ. ಇದರಿಂದ ಆತಂಕಕ್ಕೊಳಗಾದ ಇನ್ಸ್‌ಪೆಕ್ಟರ್ ಸಂತೋಷ್ ಗೌಡ ಹಿರಿಯ ಅಧಿಕಾರಿಗಳ ಗಮನಕ್ಕೆ ವಿಷಯ ಮುಟ್ಟಿಸಿ ಹನೀಫ್ ಸೇರಿದಂತೆ ನಕಲಿ ದಾಖಲೆ ಸೃಷ್ಟಿಸಿ ಎಸ್‌ಪಿ ಕಚೇರಿ ಆಸ್ತಿಯ ಮಾರಾಟಕ್ಕೆ ಮುಂದಾದ ರಾಜಶೇಖರ್, ಮೊಹಮದ್ ನದೀಮ್, ಮೋಹನ್ ಶೆಟ್ಟಿ ಹಾಗೂ ಗಣಪತಿ ಎಂಬುವರ ಮೇಲೆ ದೂರು ದಾಖಲಿಸಿದ್ದಾರೆ.

ಈ ದೂರಿನ ಆಧಾರದ ಮೇಲೆ ಐಪಿಸಿ ಸೆಕ್ಷನ್ 353, 447 ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದ ಹೈಗ್ರೌಂಡ್ಸ್ ಪೊಲೀಸರು ಸದ್ಯ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಉಳಿದಂತೆ ಕೆಲವರು ತಲೆಮರೆಸಿಕೊಂಡಿದ್ದು ಅವರ ಬಂಧನಕ್ಕೂ ಹೈಗ್ರೌಂಡ್ಸ್ ಪೊಲೀಸರು ಬಲೆ ಬೀಸಿದ್ದಾರೆ.

# ಅತಿಥಿ ಉಪನ್ಯಾಸಕರನ್ನು ನೇಮಿಸಲು ಅರ್ಜಿ ಆಹ್ವಾನ

**ಕೋಲಾರ:** ಪ್ರಸಕ್ತ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಪದವಿ ಪೂರ್ವ ಕಾಲೇಜು ಮತ್ತು ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ಕನ್ನಡ, ಇಂಗ್ಲೀಷ್, ಉರ್ದು, ಗಣಿತ, ರಸಾಯನಶಾಸ್ತ್ರ, ಜೀವಶಾಸ್ತ್ರ, ಭೌತಶಾಸ್ತ್ರ, ವ್ಯವಹಾರ ಶಾಸ್ತ್ರ, ಕಂಪ್ಯೂಟರ್, ಲೆಕ್ಕಶಾಸ್ತ್ರ, ಅರ್ಥಶಾಸ್ತ್ರ ಹುದ್ದೆಗಳಿಗೆ ಎದುರಾಗಿ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಸಂಬಂಧಪಟ್ಟ ವಿಷಯಗಳಲ್ಲಿ ಸ್ನಾನಕೊತ್ತರ ಪದವಿಯನ್ನು ಪಡೆದು ಬಿ.ಎಡ್ ಪದವಿಯನ್ನು ಪಡೆದಿರಬೇಕು. ಅರ್ಜಿಗಳನ್ನು ಜೂನ್ 13 ರೊಳಗೆ ಸಲ್ಲಿಸಬಹುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಕೋಲಾರ ತಾಲ್ಲೂಕಿನ ಗಾಜಲದಿನ್ನೆ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಪದವಿ ಪೂರ್ವ ಕಾಲೇಜಿ ಪ್ರಾಂಶುಪಾಲರ ಮೊ.ಸಂ.9686799165/9611077530 ಮತ್ತು ಮುಳಬಾಗಿಲು ತಾಲ್ಲೂಕಿನ ಬಾಳಸಂದ್ರ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರ ಮೊ. ಸಂ.9019440484/7892859599 ರವರನ್ನು ಸಂಪರ್ಕಿಸಬಹುದು ಹಾಗೂ ಟಮಕ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಯವರ ಇ-ಮೇಲ್ ವಿಳಾಸ: domkolar@gmail.com ಇಲ್ಲಿಗೆ ಸಲ್ಲಿಸಬಹುದೆಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ತಿಳಿಸಿದರು.

# ವಿದ್ಯಾರ್ಥಿ ವೇತನಕ್ಕೆ ಅರ್ಜಿ

**ರಾಮನಗರ:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ 2023-24ನೇ ಸಾಲಿಗೆ ರಾಜ್ಯ ಸರ್ಕಾರದ ಕ್ರೀಡಾ ವಿದ್ಯಾರ್ಥಿ ವೇತನ ಯೋಜನೆಯಡಿ ಪ್ರತಿಭಾವಂತ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಮಾಧ್ಯಮಿಕ/ಪ್ರೌಢಶಾಲಾ ವಿದ್ಯಾರ್ಥಿ ಕ್ರೀಡಾಪಟು (6 ರಿಂದ 10ನೇ ತರಗತಿ)ಗಳಿಗೆ ವಾರ್ಷಿಕ 10 ಸಾವಿರ ಪ್ರೋತ್ಸಾಹಿತ ಕ್ರೀಡಾ ವಿದ್ಯಾರ್ಥಿ ವೇತನ ನೀಡಲು ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಈ ಯೋಜನೆಯನ್ವಯ ಪ್ರಸ್ತುತ ಮಾಧ್ಯಮಿಕ ಅಥವಾ ಪ್ರೌಢಶಾಲೆಯಲ್ಲಿ ಓದುತ್ತಿರುವ ಕ್ರೀಡಾಪಟುಗಳಿಗೆ ವಿದ್ಯಾರ್ಥಿವೇತನ ನೀಡಲಾಗುವುದು. 2023-24ನೇ ಸಾಲಿನ ವಿದ್ಯಾರ್ಥಿ ವೇತನಕ್ಕಾಗಿ ಅರ್ಹ ಕ್ರೀಡಾಪಟುಗಳು ಕಚೇರಿಯ ಅಧಿಕೃತ ಜಾಲತಾಣ https://sevasindhuservices.karnataka.gov.in ಮೂಲಕ ಆನ್ಲೈನ್ನಲ್ಲಿ ಜೂ. 30ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಮನಗರ ಜಿಲ್ಲೆ ಇವರನ್ನು ಖುದ್ದಾಗಿ ಅಥವಾ ಕಛೇರಿ ಅಧೀಕ್ಷಕರು, ದೂರವಾಣಿ ಸಂಖ್ಯೆ: 9448153308 ಇವರನ್ನು ಸಂಪರ್ಕಿಸುವಂತೆ ರಾಮನಗರ ಜಿಲ್ಲೆಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉದರ ದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರ

**ಮಂಡ್ಯ:** ಮಂಡ್ಯ ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಜೂನ್ 2024 ರ ಮಾಹೆಯ ಜೂನ್ 06 ರಿಂದ 30 ರವರೆಗೆ ಉದರ ದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿದೆ. ಜೂನ್ 05 ರಂದು ಕೀಲಾರ ಸರ್ಕಾರಿ ಆರೋಗ್ಯ ಕೇಂದ್ರ, ಜೂನ್ 07 ರಂದು ಬಸರಾಳು ಪ್ರಾಥಮಿಕ ಆರೋಗ್ಯ ಕೇಂದ್ರ, ಜೂನ್ 11 ರಂದು ಅರಕೆರೆ ಸರ್ಕಾರಿ ಆರೋಗ್ಯ ಕೇಂದ್ರ, ಜೂನ್ 12 ರಂದು ಪಾಂಡವಪುರ ಉಪ ವಿಭಾಗ ಆಸ್ಪತ್ರೆ, ಜೂನ್ 13 ರಂದು ಕೆರಗೋಡು ಪ್ರಾಥಮಿಕ ಆರೋಗ್ಯ ಕೇಂದ್ರ, ಜೂನ್ 14 ರಂದು ಮದ್ದೂರು ತಾಲ್ಲೂಕು ಆಸ್ಪತ್ರೆ, ಜೂನ್ 15 ರಂದು ಮಂಡ್ಯ ಮಿಮ್ಸ್, ಜೂನ್ 19 ರಂದು ಕೆ. ಆರ್. ಪೇಟೆ ತಾಲ್ಲೂಕು ಆಸ್ಪತ್ರೆ, ಜೂನ್ 20 ರಂದು ಕಿರುಗಾವಲು ಸರ್ಕಾರಿ ಆರೋಗ್ಯ ಕೇಂದ್ರ, ಜೂನ್ 21 ರಂದು ಕೆ.ಎಂ.ದೊಡ್ಡಿ ಸರ್ಕಾರಿ ಆರೋಗ್ಯ ಕೇಂದ್ರ, ಜೂನ್ 25 ರಂದು ಶಿವಳ್ಳಿ ಸರ್ಕಾರಿ ಆರೋಗ್ಯ ಕೇಂದ್ರ ಮತ್ತು ಬಿಂಡಿಗನವಿಲೆ ಸರ್ಕಾರಿ ಆರೋಗ್ಯ ಕೇಂದ್ರ, ಜೂನ್ 26 ರಂದು ನಾಗಮಂಗಲ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಬೆಳಿಗ್ಗೆ 10 ಗಂಟೆಗೆ ಉದರ ದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರ ನಡೆಯಲಿದೆ ಎಂದು ಜಿಲ್ಲಾ ಪಂಚಾಯತ್ನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೀನು ಹಿಡಿಯುವುದು ನಿಷೇಧ

**ರಾಮನಗರ:** ಮುಂಗಾರು ಮಳೆಗಾಲದ ಅವಧಿಯಲ್ಲಿ ಮೀನುಗಳ ವಂಶಾಭಿವೃದ್ಧಿ ಚಟುವಟಿಕೆಗಳು ನಡೆಯುವುದರಿಂದ ಪ್ರತಿ ವರ್ಷದ ಜೂನ್-01 ರಿಂದ ಜುಲೈ-30ರ ವರೆಗೆ ಜಿಲ್ಲೆಯ ಎಲ್ಲಾ ಸರ್ವಋತು ಕೆರೆಗಳು, ಜಲಾಶಯಗಳು, ತೊರೆಗಳು, ಅಳಿವೆಗಳು ಮತ್ತು ನದಿಗಳಲ್ಲಿ ಮೀನು ಹಿಡಿಯುವುದನ್ನು ನಿಷೇಧಿಸಲಾಗಿರುತ್ತದೆ .

# ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿವಿ ಘಟಿಕೋತ್ಸವ

**ಬೆಂಗಳೂರು:** ಡಾ. ಬಿ. ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯದ ಪ್ರಥಮ ವಾರ್ಷಿಕ ಘಟಿಕೋತ್ಸವವು, ಜೂನ್ 19 ರಂದು ಬೆಳಗ್ಗೆ 11.30 ಕ್ಕೆ ಜ್ಞಾನಭಾರತಿ ರಸ್ತೆಯ ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಜರುಗಲಿದೆ. ಘನತೆವೆತ್ತ ರಾಜ್ಯಪಾಲರಾದ ಥಾವರ್ಚಂದ್ ಗೆಹ್ಲೋಟ್ ಮತ್ತು ಡಾ. ಬಿ. ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯದ ಕುಲಾಧಿಪತಿಗಳು ಘಟಿಕೋತ್ಸವದ ಅಧ್ಯಕ್ಷತೆ ವಹಿಸಲಿದ್ದಾರೆ. ವಿಶ್ವವಿದ್ಯಾಲಯದ ಸಹಕುಲಾಧಿಪತಿಗಳು ಹಾಗೂ ಉನ್ನತ ಶಿಕ್ಷಣ ಸಚಿವರಾದ ಡಾ.ಎಂ.ಸಿ.ಸುಧಾಕರ್ ಘಟಿಕೋತ್ಸವದಲ್ಲಿ ಉಪಸ್ಥಿತರಿರುವರು. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಮಾಜಿ ಅಧ್ಯಕ್ಷರು ಹಾಗೂ ಮಾಜಿ ಪ್ರಧಾನ ಮಂತ್ರಿಗಳ ಆರ್ಥಿಕ ಸಲಹೆಗಾರರಾದ ಡಾ. ಸಿ. ರಂಗರಾಜನ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಘಟಿಕೋತ್ಸವವನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ಮಣಿಮೇಖಲೈ ಅವರಿಗೆ ಪ್ರತಿಷ್ಠಿತ ಐ ಎಮ್ ಸಿ ಲೇಡೀಸ್ ವಿಂಗ್ ಪ್ರಶಸ್ತಿ




ಹಣಕಾಸು ಸೇವೆ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಗಣನೀಯ ಸಾಧನೆಗಾಗಿ ಮಹಿಳಾ ಸಾಧಕಿಯರಿಗಾಗಿ ನೀಡುವ ಐ ಎಮ್ ಸಿ ಲೇಡಿಸ್ ವಿಂಗ್ ಪ್ರಶಸ್ತಿಯು ಈ ಬಾರಿ ಯೂನಿಯನ್ ಬ್ಯಾಂಕ್ ಅಫ್ ಇಂಡಿಯಾ ನ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಸಿ ಇ ಒ ಶ್ರೀಮತಿ ಮಣಿಮೇಖಲೈ ರವರಿಗೆ ಲಭಿಸಿದೆ. ಐ ಎಂ ಸಿ ಛೇಂಬರ್ ಅಫ್ ಕಾಮರ್ಸ್ ಮತ್ತು ಇಂಡಸ್ಟ್ರಿಯ ಮಹಿಳಾ ವಿಭಾಗದವರು ಸ್ಥಾಪಿಸಿರುವ ಈ ಪ್ರಶಸ್ತಿಯನ್ನು ಪ್ರತಿವರುಷವೂ ಹಣಕಾಸು, ಬ್ಯಾಂಕಿಂಗ್ ಮತ್ತು ಹೂಡಿಕೆ ಕ್ಷೇತ್ರಗಳಲ್ಲಿ ಗಣನೀಯ ಸಾಧನಗೈದ ಮಹಿಳಾ ಸಾಧಕಿಗೆ ನೀಡಲಾಗುತ್ತಿದೆ. ಗೋಡ್ರೇಜ್ ಇಂಡಸ್ಟ್ರೀಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ನಾದಿರ್ ಗೋಡ್ರೇಜ್ ರವರು ಶ್ರೀಮತಿ ಮಣಿಮೇಖಲೈ ರವರಿಗೆ ಈ ಪ್ರಶಸ್ತಿಯನ್ನು ಮುಂಬೈ ನಲ್ಲಿ ಪ್ರದಾನ ಮಾಡಿದರು.

# ಜೆಡಿಎಸ್ ನಾಯಕರಿಂದ ವಿಶೇಷ ಪೂಜೆ

**ರಾಯಚೂರು:** ನೂತನ ಎನ್‌ಡಿಎ ನೇತೃತ್ವದ ಸರ್ಕಾರದ ಪ್ರಧಾನಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿರುವ ನರೇಂದ್ರ ಮೋದಿಯವರಿಗೆ ಒಳ್ಳೆದಾಗಲಿ ಮತು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಕೇಂದ್ರ ಸಚಿವರಾಗಲಿ ಎಂದು ಪ್ರಾರ್ಥಿಸಿ ನಗರದ ಶ್ರೀ ನಂದೀಶ್ವರ ದೇವಸ್ಥಾನ ದಲ್ಲಿ ಜೆಡಿಎಸ್ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ವಿಶೇಷ ಪೂಜೆ ನೆರವೇರಿಸಿದರು.

ಪೂಜೆ ನಂತರ ಜೆಡಿಎಸ್ ಜಿಲ್ಲಾ ಕಾರ್ಯಾಧ್ಯಕ್ಷ ಎನ್. ಶಿವಶಂಕರ್ ವಕೀಲ ಮಾತನಾಡಿ, ನೂತನ ಎನ್ ಡಿಎ ಸರ್ಕಾರದ ಪ್ರಧಾನಿಯಾಗಿ ನರೇಂದ್ರ ಮೋದಿ ಅವರು ಮತ್ತೊಮ್ಮೆ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಈ ಸರ್ಕಾರಕ್ಕೆ ಒಳ್ಳೆಯದಾಗಲಿ ಮತ್ತು ಯಾವುದೇ ಕಂಟಕ ವಿಘ್ನಗಳು ಬಾರದಂತೆ ಮತ್ತು ನಮ್ಮ ಜೆಡಿಎಸ್ ನಾಯಕರಾದ ಹೆಚ್.ಡಿ.ಕುಮಾರಸ್ವಾಮಿ ಅವರು ಕೃಷಿಯಲ್ಲಿ ಅಪಾರ ಜ್ಞಾನವುಳ್ಳವರಾಗಿದ್ದು ರೈತರ ಸಾಲ ಮನ್ನಾ ಮಾಡಿದ್ದು ಮತ್ತು ಮಣ್ಣಿನ ಮಗ ಮಾಜಿ ಪ್ರಧಾನಿ ದೇವೇಗೌಡರ ರೈತರ ಪರ ಅಪಾರವಾದ ಕಾಳಜಿ ಅನುಭವ ಹಿನ್ನೆಲೆಯಲ್ಲಿ ಕುಮಾರಣ್ಣ ಅವರು ಕೃಷಿ ಮಂತ್ರಿ ಆಗಲಿ ಇದರಿಂದ ರೈತರ ಪರ ಕೆಲಸ ಮಾಡಲು ಅವಕಾಶ ಸಿಗಲೆಂದು ಪೂಜೆ ಸಲ್ಲಿಸಲಾಗಿದೆ ಎಂದರು. ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಮಕೃಷ್ಣ ಮುಖಂಡರುಗಳಾದ ಭೀಮಣ್ಣಮಂಚಲ್, ಆಂಜನೇಯ ಯಾದವ್, ನರಸಪ್ಪ ಆಶಾಪುರ್, ಬಿ.ಕೆ. ಬಾಬು, ಈರಣ್ಣ ಯಾದವ್, ನರಸಿಂಹಲು, ಆದಿರಾಜ್, ಮಲ್ಲು, ಆಲಂಬಾಬು, ಶಿವಕುಮಾರ ಯಾದವ್, ಭೀಮಣ್ಣ, ನರಸಿಂಗ್, ವೆಂಕಟಸ್ವಾಮಿ ಸೇರಿದಂತೆ ಅನೇಕರಿದ್ದರು.



# ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಿ-ವೈ.ಎಂ.ಸತೀಶ್

**ಬಳ್ಳಾರಿ:** ಪ್ರಸ್ತುತ ದಿನಗಳಲ್ಲಿ ಪ್ರತಿಯೊಬ್ಬರೂ ಗುಣಮಟ್ಟದ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಬೇಕು, ಶಿಕ್ಷಣವಿಲ್ಲದಿದ್ದರೆ ಏನೂ ಸಾಧಿಸಲು ಸಾಧ್ಯವಾಗೋಲ್ಲ ಎಂದು ವಿಧಾನ ಪರಿಷತ್ ಸದಸ್ಯ ವೈ.ಎಂ. ಸತೀಶ್ ಹೇಳಿದರು.

ನಗರದ ವೀರಶೈವ ವಿದ್ಯಾವರ್ಧಕ ಸಂಘದ ಕೊಟ್ಟೂರುಸ್ವಾಮಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ದಾನಿಗಳ ದಿನಾಚರಣೆ ಹಾಗೂ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳ ಸ್ವಾಗತ ಹಾಗೂ ವಿದ್ಯಾರ್ಥಿ ಸಂಘದ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಶಿಕ್ಷಕರು ಮಕ್ಕಳಿಗೆ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಿ ದೇಶದ ಅಭಿವೃದ್ಧಿಗೆ ಕೈಜೋಡಿಸಬೇಕು,

ದೇಶದಲ್ಲಿ ಗುಣಮಟ್ಟದ ಶಿಕ್ಷಣದ ಕೊರತೆ ಇದೆ. ಈ ಕೊರತೆಯನ್ನು ನಿವಾರಣೆ ಮಾಡುವ ಜವಾಬ್ದಾರಿ ಭವಿಷ್ಯದ ಶಿಕ್ಷಕರ ಮೇಲಿದೆ. ಪ್ರಶಿಕ್ಷಣಾರ್ಥಿಗಳು ಗುಣಮಟ್ಟದ ಶಿಕ್ಷಣವನ್ನು ಬೋಧಿಸಲು ಆದ್ಯತೆ ನೀಡಬೇಕು. ಅಲ್ಲದೇ, ಸಮಾಜಕ್ಕೆ ಉತ್ತಮ ವ್ಯಕ್ತಿಗಳನ್ನು ನೀಡಬೇಕು ಎಂದರು.

ವೀರಶೈವ ವಿದ್ಯಾವರ್ಧಕ ಸಂಘದ ಬೆಳವಣಿಗೆಯಲ್ಲಿ ದಾನಿಗಳ ಪಾತ್ರ ದೊಡ್ಡದು. ದಾನಿಗಳ ದಾನವು ಅರ್ಥಪೂರ್ಣವಾಗಿ ಉಪಯೋಗವಾಗಬೇಕು. ದಾನದ ಆಸ್ತಿಪಾಸ್ತಿಗಳನ್ನು ಸಂರಕ್ಷಣೆ ಮಾಡಬೇಕು, ಈ ನಿಟ್ಟಿನಲ್ಲಿ ಸಂಘ ನೀಡುವ ಜವಾಬ್ದಾರಿಗಳನ್ನು ನಿರ್ವಹಿಸುವೆ ಎಂದು ಹೇಳಿದರು.

ಹೇಮಕೂಟ ಸಿಂಹಾಸನಾಧೀಶ್ವರ ಕೊಟ್ಟೂರು ಶ್ರೀ ಬಸವಲಿಂಗ ಮಹಾಸ್ವಾಮಿಜಿ ಅವರು ಮಾತನಾಡಿ, ಪ್ರಶಿಕ್ಷಣಾರ್ಥಿಗಳು ತರಗತಿಯಲ್ಲಿ ವಿದ್ಯಾರ್ಥಿಗಳ ಮನಸ್ಸಿನ ಏಕಾಗ್ರತೆಯನ್ನು ಸಾಧಿಸುವ ಕೌಶಲ್ಯಗಳನ್ನು ಕಲಿಯಲು ಆದ್ಯತೆ ನೀಡಬೇಕು. ಭವಿಷ್ಯಕ್ಕೆ ಬೇಕಾಗಿರುವ ಗುಣಮಟ್ಟದ ಶಿಕ್ಷಣ ಬೋಧನೆಗೆ ಪ್ರಶಿಕ್ಷಣಾರ್ಥಿಗಳು ತಾಳ್ಮೆ, ಸಂಯಮದ ಜೊತೆಯಲ್ಲಿ ದೇಶಕಟ್ಟುವ ಜವಾಬ್ದಾರಿಯನ್ನು ನಿರ್ವಹಣೆ ಮಾಡಬೇಕು ಎಂದರು.



ಸ್ವಾತಂತ್ರ್ಯಪೂರ್ವದಿಂದಲೂ ಜಾತ್ಯಾತೀತವಾಗಿ ಶಿಕ್ಷಣ ಸೇವೆ ಸಲ್ಲಿಸಿ, ದೇಶವನ್ನು ನಿರ್ಮಾಣ ಮಾಡುವ ಜವಾಬ್ದಾರಿಯನ್ನು ವೀರಶೈವ ವಿದ್ಯಾವರ್ಧಕ ಸಂಘ ಮತ್ತು ವೀರಶೈವ ಮಠಗಳು - ಸಂಸ್ಥೆಗಳು ಸಮರ್ಥವಾಗಿ ನಿರ್ವಹಿಸಿದ್ದು, ಈಗಲೂ ಅದನ್ನು ಮುಂದುವರೆಸಿವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಅಲ್ಲಂ ಗುರುಬಸವರಾಜ ಮಾತನಾಡಿ, ದಾನಿಗಳು ನೀಡಿರುವ ದಾನವನ್ನು ಸಂರಕ್ಷಣೆ ಮಾಡಲು ಆದ್ಯತೆ ನೀಡಿ, ಶಿಕ್ಷಣ ಕ್ಷೇತ್ರಕ್ಕೆ ಸಮರ್ಪಣೆ ಮಾಡಿ ದಾನವನ್ನು ಅರ್ಥಪೂರ್ಣವಾಗಿ ಸ್ಮರಿಸಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ವೀರಶೈವ ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಟಿ. ಕೊಟ್ರಪ್ಪ, ದರೂರು ಶಾಂತನಗೌಡ ಅವರು ಮಾತನಾಡಿದರು.

ವೀರಶೈವ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ. ಅರವಿಂದ ಪಾಟೀಲ್ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಬಿಎಡ್ ನಲ್ಲಿ ಸಾಧನೆ ಮಾಡಿರುವ ವಿದ್ಯಾರ್ಥಿ ರುದ್ರೇಶ್ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ವೀರಶೈವ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷ ಜಾನೆಕುಂಟೆ ಬಸವರಾಜ್, ಖಜಾಂಚಿ ಬೈಲುವದ್ದಿಗೇರಿ ಏರ್ರಿಸ್ವಾಮಿ, ನರೇಂದ್ರಬಾಬು ಇತರರಿದ್ದರು. ಪ್ರಾಚಾರ್ಯ ಡಾ. ಸತೀಶ್ ಎ. ಹಿರೇಮಠ ಸ್ವಾಗತಿಸಿದರು. ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ಎಂ. ಶರಣಬಸವನಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು.

ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

# ಉಚಿತ ಫೋಟೋಗ್ರಫಿ, ವಿಡಿಯೋಗ್ರಫಿ ತರಬೇತಿ

**ರಾಮನಗರ:** ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಮತ್ತು ಕೆನರಾ ಬ್ಯಾಂಕ್ ಸಹಯೋಗದಲ್ಲಿ ನಡೆಸುತ್ತಿರುವ ರುಡ್ಸೆಟ್ ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿರುವ 30 ದಿನಗಳ ಫೋಟೋಗ್ರಫಿ ಹಾಗೂ ವಿಡಿಯೋಗ್ರಫಿ ಉಚಿತ ತರಬೇತಿಯು 25 ಜುಲೈ 2024 ರಿಂದ ಆಯೋಜಿಸಲಾಗಿದ್ದು, ಬೆಂಗಳೂರು ಗ್ರಾಮಾಂತರ, ರಾಮನಗರ ಹಾಗೂ ತುಮಕೂರು ಜಿಲ್ಲಾ ವ್ಯಾಪ್ತಿಯ ಗ್ರಾಮೀಣ ಆಸಕ್ತ ನಿರುದ್ಯೋಗಿ ಯುವಕ ಯುವತಿಯರು ಅರ್ಜಿ ಸಲ್ಲಿಸಬಹುದಾಗಿದೆ. ಆಸಕ್ತ 18 ರಿಂದ 45 ವರ್ಷ ವಯೋಮಾನದವರಾಗಿದ್ದು, ಕನ್ನಡ ಭಾಷೆ ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಗ್ರಾಮೀಣ ಪ್ರದೇಶದ ಆಧಾರ್ ಕಾರ್ಡ್ ಹಾಗೂ ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. ತರಬೇತಿ ಪಡೆಯಲು ಡಿಎಸ್‌ಎಲ್‌ಆರ್ ಕ್ಯಾಮರಾ ಕಡ್ಡಾಯವಾಗಿ ಹೊಂದಿರಬೇಕು. ತರಬೇತಿಯು ವಸತಿಯುತವಾಗಿದ್ದು, ತರಬೇತಿಯ ಅವಧಿಯಲ್ಲಿ ಉಚಿತವಾಗಿ ಊಟ ಮತ್ತು ವಸತಿ ನೀಡಲಾಗುವುದು ಹಾಗೂ ತರಬೇತಿ ಪೂರ್ಣಗೊಂಡ ನಂತರ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದಿಂದ ಪ್ರಮಾಣಪತ್ರವನ್ನು ವಿತರಿಸಲಾಗುವುದು. ಅರ್ಜಿ ಸಲ್ಲಿಸಲು ಜುಲೈ 20 ಕೊನೆಯ ದಿನವಾಗಿದೆ. ಆಸಕ್ತರು ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗೆ ರುಡ್ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮೊಬೈಲ್ ಸಂಖ್ಯೆ: 9241482541, 8884554510, 9113880324 ಅನ್ನು ಸಂಪರ್ಕಿಸಬಹುದಾಗಿದೆ ಎಂದು ರುಡ್ಸೆಟ್ ಸಂಸ್ಥೆಯ ಬೆಂಗಳೂರು ಶಾಖೆಯ ನಿರ್ದೇಶಕರಾದ ರವಿಕುಮಾರ ತಿಳಿಸಿದ್ದಾರೆ.



## ಒಂದರ ಮೇಲೊಂದು ಬಿದ್ದ ವಿದ್ಯುತ್ ತಂತಿಗಳು

**ವಿಜಯಪುರ:** ಪಟ್ಟಣದ ಬೆಸ್ಕಾಂ ಕಚೇರಿ ಮುಂಭಾಗದಲ್ಲಿ ಇರುವ ಎವರ್ ಗ್ರೀನ್ ಶಾಲೆಯ ರಸ್ತೆಯಲ್ಲಿನ ವಿದ್ಯುತ್ವೈರುಗಳು ಸಡಿಲವಾಗಿ ತೂರಾಡುತ್ತಿದ್ದು ಗಾಳಿಗೆ ಒಂದರ ಮೇಲೊಂದು ತಂತಿಗಳು ಬಿದ್ದು ವಿದ್ಯುತ್ ಅವಘಡಗಳಿಗೆ ಕಾರಣವಾಗುತ್ತಿದೆ.

ಇದೇ ರೀತಿ ಪಟ್ಟಣದ ಹತ್ತು ಹಲವೆಡೆ ವಿದ್ಯುತ್ತಂತಿಗಳು ಸಡಿಲವಾಗಿದ್ದು ವಿದ್ಯುತ್ ಅವಗಡಗಳಿಗೆ ಕಾರಣವಾಗುತ್ತಲಿದ್ದು ಈ ಕೂಡಲೇ ಬೆಸ್ಕಾಂ ಇಲಾಖೆಯಿಂದ ಪಟ್ಟಣದ ಎಲ್ಲೆಡೆ ಸಡಿಲವಾಗಿರುವ ವಿದ್ಯುತ್ತಂತಿಗಳನ್ನು ಬಿಗಿಗೊಳಿಸುವ ಹಾಗೂ ಒಂದಕ್ಕೊಂದು ತಂತಿಗಳು ತಗುಲದಂತೆ ಯಾವುದಾದರೂ ಕಡ್ಡಿ ಮತ್ತಿತರೆ ವಸ್ತುಗಳನ್ನು ಕಟ್ಟುವ ಮೂಲಕ ವಿದ್ಯುತ್ ಅವಗಡಗಳನ್ನು ತಪ್ಪಿಸಬೇಕೆಂದು ಶರಣ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷ ಮ ಸುರೇಶ್ ಬಾಬು ತಿಳಿಸಿರುವರು .

ಇಂದು ನಡೆದ ಅವಘಡದಿಂದ ಸುಮಾರು ಗಂಟೆಗಳ ಕಾಲ ಈ ಭಾಗದಲ್ಲಿ ವಿದ್ಯುತ್ ಇಲ್ಲದೆ ಸಾರ್ವಜನಿಕರು ಪರದಾಡುವಂಥಾಯಿತು.



## ಪಕ್ಷದ ಚೌಕಟ್ಟಿನಲ್ಲಿ ಚರ್ಚೆ

**ಜಮಖಂಡಿ:** ಕೆಲವೊಂದು ಕ್ಷೇತ್ರಗಳಲ್ಲಿ ಪಾರಂಪರಿಕ ಮತಗಳು ಇರುತ್ತವೆ, ಪಾರಂಪರಿಕ ಮತಗಳು ವ್ಯಕ್ತಿಗಳನ್ನು ನೋಡಿ, ಪಕ್ಷಗಳನು ನೋಡಿ ಮತಗಳು ಹೆಚ್ಚಾಗುತ್ತವೆ, 2018ರಲ್ಲಿ ನಾನು ಸೊತಿದ್ದೆ 2019ರ ಲೊಕಸಭಾ ಚುನಾವಣೆಯಲ್ಲಿ 36 ಸಾವಿರ ಮತಗಳು ಲೀಡ್ ಆಯಿತು ಇದಕ್ಕೆನು ಉತ್ತರ, ನನ್ನ ಚುನಾವಣೆಯಲ್ಲಿ 76 ಸಾವಿರ ಮತಗಳಿಂದ ಗೆಲ್ಲಿಸಿದರು, ಆದರೆ ಈ ಚುನಾವಣೆಯಲ್ಲಿ ಸುಮಾರು 7 ಸಾವಿರಕ್ಕಿಂತ ಕಡಿಮೆ ಮತಗಳು ಕಾಂಗ್ರೆಸ್‌ಗೆ ಬಂದಿದ್ದಾವೆ



ಅದಕ್ಕೆ ಕಾರಣ ಕೆಲವೊಂದು ದೋಷಗಳಿವೆ, ಅವುಗಳನ್ನು ಪಕ್ಷದ ವೇದಿಕೆಯಲ್ಲೆ ನಾನು ಚರ್ಚೆ ಮಾಡುತ್ತೆನೆ ಅದನ್ನು ಬಹಿರಂಗವಾಗಿ ಹೇಳುವುದಿಲ್ಲ, ಚುನಾವಣೆ ನಿರ್ವಹಣೆಯಲ್ಲಿ ಅವರು ಎಡವಿದ್ದೆ ಕಾರಣದಿಂದ ಹಿಗೆಲ್ಲ ಆಗಿದೆ ಎಂದು ಮಾಜಿ ಡಿಸಿಎಂ ಅಥಣಿ ಶಾಸಕ ಲಕ್ಷ್ಮಣ ಸವದಿ ಹೇಳಿದರು. ನಗರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಪಕ್ಷದ ಚೌಕಟ್ಟಿನಲ್ಲಿ ನಾನು ಚರ್ಚೆ ಮಾಡುತ್ತೇನೆ ಎಂದರು.

## ಕಾಡು ನಾಯಿ, ಜಿಂಕೆಗೆ ಕಾರು ಡಿಕ್ಕಿ

**ಚಾಮರಾಜನಗರ:** ಜಿಲ್ಲೆಯ ಬಂಡೀಪುರ ಹುಲಿ ಸಂರಕ್ಷಿತ ಮದ್ದೂರು ವಲಯದಲ್ಲಿ ಹಾದು ಹೋಗುವ ಗುಂಡ್ಲುಪೇಟೆ-ಸುಲ್ತಾನ್ ಬತ್ತೇರಿ ಹೆದ್ದಾರಿಯಲ್ಲಿ ತಡರಾತ್ರಿ ಇನ್ನೋವಾ ಕಾರು ಕಾಡು ನಾಯಿ ಹಾಗೂ ಜಿಂಕೆಗೆ ಡಿಕ್ಕಿ ಹೊಡೆದ ಪರಿಣಾಮ ಸಾವನ್ನಪಿವೆ. ಕೇರಳ ಮೂಲದ ಇನ್ನೋವಾ ಕಾರು ಕೆಎಲ್ 50 ಎಎಫ್ 331 ಕಾರು ರಾತ್ರಿ ಕೇರಳದ ಸುಲ್ತಾನ್ ಬತ್ತೇರಿ ಕಡೆಗೆ ತೆರಳುತ್ತಿದ್ದಾಗ 5 ವರ್ಷದ ಕಾಡು ನಾಯಿ,3 ವರ್ಷದ ಜಿಂಕೆಯನ್ನು ಡಿಕ್ಕಿ ಹೊಡೆದ ಪರಿಣಾಮ ಸಾವನ್ನಪ್ಪಿದೆ. ಇನ್ನೋವಾ ಕಾರನ್ನು ಅರಣ್ಯ ಇಲಾಖೆಯ ಉಪ ವಲಯ ಅರಣ್ಯಾಧಿಕಾರಿ ಹಾಗೂ ಅರಣ್ಯ ಸಿಬ್ಬಂದಿ ಹಿಡಿದು ಕಾರಿನ ಚಾಲಕ ಸ್ಟೀಫನ್ ಸನ್ನಿ ಹಾಗೂ ಕಾರನ್ನು ವಶಕ್ಕೆ ಪಡೆದು ಕ್ರಮಕ್ಕೈಗೊಂಡಿದ್ದಾರೆ. ಬಂಡೀಪುರ ಹುಲಿ ಯೋಜನೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನಿರ್ದೇಶಕ ಎಸ್.ಪ್ರಭಾಕರನ್ ಸೂಚನೆಯಂತೆ ಗುಂಡ್ಲುಪೇಟೆ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಜಿ. ರವೀಂದ್ರ, ಬಂಧಿತ ಆರೋಪಿಯನ್ನು ವಿಚಾರಣೆ ನಡೆಸಿದ್ದಾರೆ.

ಬಂಧಿತ ಆರೋಪಿಯನ್ನು ವಿಚಾರಣೆ ಬಳಿಕ ನ್ಯಾಯಾಧೀಶರ ಬಳಿಗೆ ಹಾಜರು ಪಡಿಸಲಾಗಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ ಎಂದು ಎಸಿಎಫ್ ಜಿ.ರವೀಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



## 20 ದಿನ ಪೂರೈಸಿದ ಅಂಬೇಡ್ಕರ್ ಭವನಧರಣಿ ಸತ್ಯಾಗ್ರಹ




**ವಿಜಯಪುರ:** ನಗರದ ಮನಗೂಳಿ ಅಗಸಿ ಹತ್ತಿರದಡಾ. ಬಿ.ಆರ್. ಅಂಬೇಡ್ಕರ ಸಮುದಾಯ ಭವನ ನಿರ್ಮಾಣಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳ ಕಚೇರಿ ಮುಂದೆಡಾ ಬಿ ಆರ್‌ಅಂಬೇಡ್ಕರ್ ಯುವಕ ಸಂಘದಿಂದ ಹಮ್ಮಿಕೊಂಡಿರುವಅಹೋರಾತ್ರಿಧರಣಿ ಸತ್ಯಾಗ್ರಹರವಿವಾರ20ನೇ ದಿನ ಪೂರೈಸಿದೆ.

ಈ ಸಂದರ್ಭದಲ್ಲಿ ಸಂಘಟನೆಯ ಮುಖಂಡರವಿ ಕಾಖಂಡಕಿಅವರು ಮಾತನಾಡಿಡಾ ಬಿ ಆರ್‌ಅಂಬೇಡ್ಕರ್ ಭವನ ನಿರ್ಮಾಣಕ್ಕೆಜಾಗಕ್ಕಾಗಿ ಆಗ್ರಹಿಸಿ 20 ದಿನಗಳಿಂದ ಅಹೋರಾತ್ರಿಧರಣಿ ಸತ್ಯಾಗ್ರಹ ನಡೆಸುತ್ತಿದ್ದರುಕೂಡಾ ವಿಜಯಪುರ ಜಿಲ್ಲಾಡಳಿತ ಸಮಸ್ಯೆ ಬಗೆಹರಿಸಲು ವಿಫಲವಾಗಿದೆ. ಜಿಲ್ಲಾಧಿಕಾರಿಗಳು ಜಾಣಕುರುಡನಂತೆ ವರ್ತಿಸುವ ಮೂಲಕ ದಲಿತರಿಗೆಅನ್ಯಾಯವೆಸಗುತ್ತಿದ್ದಾರೆಎಂದು ಆಕ್ರೋಶವ್ಯಕ್ತಪಡಿಸಿದ ಅವರುಕೂಡಲೇ ಜಿಲ್ಲಾಡಳಿತ ಅಂಬೇಡ್ಕರ್ ಭವನ ನಿರ್ಮಾಣಕ್ಕೆಜಾಗ ಮಂಜೂರು ಮಾಡಿ ಸಮಸ್ಯೆಇತ್ಯರ್ಥಪಡಿಸಬೇಕುಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಚಿನಯಕ್ಕುಂಡಿ, ರಮೇಶ ವಾಲಿಕಾರ ಶ್ರೀಶೈಲ ಕಾಖಂಡಕಿ, ಸತೀಶಕಾಖಂಡಕಿ, ಮಲ್ಲಿಕಾರ್ಜುನಯಕ್ಕುಂಡಿ, ಮಂಜುನಾಥ ಶಿವಶರಣ, ಸುನೀಲ ಕಾಖಂಡಕಿ, ಕುಮಾರ ಕಾಂಬಳೆ, ಕೀರ್ತಿಕಾಖಂಡಕಿ,ಬಸವಕುಮಾರ ಕಾಂಬಳೆ ಸಚಿನಕಾಖಂಡಕಿ, ಬಸವರಾಜಕಾಖಂಡಕಿ, ಆಕಾಶ ಚಲವಾದಿ, ಕೃ?ಣಾ ಚಲವಾದಿ, ಚೇತನ ಜವಳಿ, ಪ್ರದೀಪ ಚಲವಾದಿ, ಪ್ರತಾಪಚಿಕ್ಕಲಕ್ಕಿ, ರೋಹಿತ ಮಲಕಣ್ಣವರ, ವಿಶಾಲ ಮಲಕಣ್ಣವರ, ಸಾಗರಕಾಖಂಡಕಿ, ರಾಜರತನ ಕಾಂಬಳೆ, ಉಮೇಶ ಕಾಂಬಳೆ, ಅರವಿಂದಕಾಖಂಡಕಿ, ಕೀರ್ತಿಕುಮಾರಕಾಖಂಡಕಿ, ಕಿರಣಕಾಖಂಡಕಿ, ಬಸವರಾಜಕುಬಕಡ್ಡಿ,ರಾಜು ವಾಲಿಕಾರ, ಸತೀಶಕುಬಕಡ್ಡಿ, ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ರಾಮಸಮುದ್ರ ಹೊಸದುರ್ಗಿ ಬಡಾವಣೆಯಲ್ಲಿ ತಪ್ಪಿದ ಭಾರಿ ಅನಾಹುತ

**ಚಾಮರಾಜನಗರ:** ರಾಮಸಮುದ್ರ- ಇಲ್ಲಿನ ಹೊಸದುರ್ಗಿ ಬೀದಿ ಬಡಾವಣೆಯೊಂದರಲ್ಲಿ ಇಂದು ಮದ್ಯಾಹ್ನ 1ಗಂಟೆಯಲ್ಲಿ ಇದ್ದಕ್ಕಿದ್ದ ಹಾಗೆ ನೋಡ ನೋಡುತ್ತಿದ್ದಂತೆ ವಿದ್ಯುತ್ ಕಂಬವೊಂದು ಕೆಳಗಡೆ ಉರುಳಿ ಬೀಳುತ್ತಿರುವುದನ್ನು ಗಮನಿಸಿದ ನಿವಾಸಿಗಳು ಕೆಇಬಿ ಇಂಜಿನಿಯರ್ ಮಂಜುನಾಥ ಅವರಿಗೆ ಕರೆ ಮಾಡಿದ್ದಕ್ಕೆ ತಕ್ಷಣ ಕಾರ್ಯಪ್ರವೃತ್ತರಾದ ಅಧಿಕಾರಿಗಳು ಸಿಬ್ಬಂದಿಗಳನ್ನು ಕರೆಸಿ ಎಲ್ಲಾ ವಿದ್ಯುತ್ ತಂತಿಯನ್ನು ಕತ್ತರಿಸಿ ಸಮಯ ಪ್ರಜ್ಞೆಯನ್ನು ಮೆರೆದು ಮುಂದೆ ಆಗಬಹುದಾಗಿತ್ತ ಭಾರಿ ದೊಡ್ಡ ಅನಾಹುತವನ್ನು ತಪ್ಪಿಸಿದ ಮಂಜುನಾಥ್ ರವರಿಗೆ ಓಂ ಶಾಂತಿ ನ್ಯೂಸ್ ಸರ್ವಿಸ್ನ ಬಿಕೆ ಆರಾಧ್ಯ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಹಾಗೆ ಮಂಜುನಾಥ್ ರವರೂ ಸಹ ನಿವಾಸಿಗಳನ್ನು ಅಬಿನಂದಿಸಿದ್ದಾರೆ. ಮಳೆಗಾಲದಲ್ಲಿ ಇದು ಸರ್ವೆಸಾಮಾನ್ಯವಾಗಿರುತ್ತದೆ. ಎಲ್ಲೇ ವಿದ್ದ್ಯುತ್ ತಂತಿಗಳು ತುಂಡಾಗಿ ಬಿದ್ದಿದ್ದರೆ, ಕಂಬಗಳು ಬೀಳುವ ಸ್ತಿತಿಯಲ್ಲಿದ್ದರೆ, ತಂತಿಗಳ ಮೇಲೆ ಮರದ ರೆಂಬೆ ಕೊಂಬೆಗಳು ಮುರಿದು ಬಿದ್ದಿದ್ದರೆ ತಕ್ಷಣ ವಿದ್ಯುತ್ ಮಂಡಳಿಗೆ ಮಾಹಿತಿ ತಿಳಿಸುವಂತೆ ತಿಳಿಸಿದ್ದಾರೆ



# ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಿ

## ನಿಷ್ಠಿ ಕಡ್ಲೆಪ್ಪನವರ ವಿರಕ್ತ ಮಠದ ಪ್ರಭುಲಿಂಗ ಸ್ವಾಮೀಜಿ ಸಲಹೆ

**ಸುರಪುರ:** ಶಿಕ್ಷಣ ರಂಗ ತುಂಬಾ ಕೆಳಮಟ್ಟಕ್ಕೆ ತಲುಪುತ್ತಿದೆ,ಇದರಲ್ಲಿ ಮಕ್ಕಳಲ್ಲಿ ಕಲಿಯುವ ಆಸಕ್ತಿಯೂ ಕಡಿಮೆಯಾಗುತ್ತಿದೆ,ಜೊತೆಗೆ ಶಿಕ್ಷಕರು ಕೂಡ ಕಲಿಸುವಲ್ಲಿ ಹೆಚ್ಚಿನ ಆಸಕ್ತಿ ಕಾಣುತ್ತಿಲ್ಲ,ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡುವ ಜವಬ್ದಾರಿ ಶಿಕ್ಷಕರ ಮೇಲಿದೆ ಎಂದು ನಗರದ ನಿಷ್ಠಿ ಕಡ್ಲೆಪ್ಪನವರ ವಿರಕ್ತ ಮಠದ ಪೂಜ್ಯ ಶ್ರೀ ಪ್ರಭುಲಿಂಗ ಮಹಾಸ್ವಾಮೀಜಿ ತಿಳಿಸಿದರು.

ನಗರದ ರಿಕ್ರಿಯೇಷನ್ ಕ್ಲಬ್ ಆವರಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಹಮ್ಮಿಕೊಂಡಿದ್ದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಅಂಗವಾಗಿ ಎಸ್.ಎಸ್. ಎಲ್.ಸಿ ಪರೀಕ್ಷೆಯಲ್ಲಿ ಕನ್ನಡ ವಿಷಯಕ್ಕೆ ಪ್ರತಿಶತ ಅಂಕ ಪಡೆದ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾ ಗುಣಾಗ್ರಣಿ ಪ್ರಶಸ್ತಿ ಹಾಗೂ ಭೀಮಬಾಯಿ ನಾರಾಯಣಪ್ಪ ಭಂಡಾರೆ ಸ್ಮರ್ಣಾರ್ಥ ಪ್ರತಿಭಾ ನಗದು ಪುರಸ್ಕಾರ ಸಮಾರಂಭದ ಸಾನಿಧ್ಯವಹಿಸಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಬೆಳೆದು ನಡೆದು ಬಂದ ಹಾದಿಯ ಕುರಿತು ಸಾಹಿತಿ ಮಹಾಂತೇಶ ಗೋನಾಲ ಮಾತನಾಡಿ,ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ,ಜಗತ್ತಿನ ಮೇರು ಭಾಷೆಗಳಲ್ಲಿ ಕನ್ನಡವೂ ಅಗ್ರಗಣ್ಯ ಭಾಷೆಗಳಲ್ಲಿ ಒಂದಾಗಿದೆ,ಇಂತಹ ಭಾಷೆ ನಮ್ಮೆಲ್ಲರ ಮನೆ,ಮನದ ಭಾಷೆಯಾಗಿದೆ.ಆದರೆ ಇಂದು ಕನ್ನಡ ಭಾಷೆಯಲ್ಲಿ ನೂರಕ್ಕೆ ನೂರರಷ್ಟು ಅಂಕ ಪಡೆದವರಿಗೆ ಸನ್ಮಾನಿಸುವ ಮಟ್ಟಕ್ಕೆ ನಾವು ಬಂದಿರುವುದು ಖೇದದ ಸಂಗತಿಯಾಗಿದೆ ಎಂದರು.ಅಲ್ಲದೆ ಕನ್ನಡ ಸಾಹಿತ್ಯ ಪರಿಷತ್ ಕೇಂದ್ರ ಕಚೇರಿ ಬೆಂಗಳೂರಿಗೆ ಸೀಮಿತವಾಗದೆ,ಸಂಚಾರಿ ಹೈಕೋರ್ಟ್ ಪೀಠಗಳನ್ನು ಆರಂಭಿಸಿದಂತೆ ಕಸಾಪ ಪ್ರಾದೇಶಿಕ ಕಚೇರಿಗಳನ್ನು ಆರಂಭಿಸಬೇಕು ಎಂದರು. ಇದೇ ಸಂದರ್ಭದಲ್ಲಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜೀವನ ಮತ್ತು ಸಾಧನೆ ಕುರಿತು ಕಕ್ಕೇರಾ ಪಟ್ಟಣದ ಶಿಕ್ಷಕ ಸಾಹಿತಿ ಬಸ್ಸಯ್ಯಸ್ವಾಮಿ ಮಾತನಾಡಿ,ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಾವೊಬ್ಬ ರಾಜನೆಂದು ಕೇವಲ ವೈಭೋಗದ ಜೀವನಕ್ಕೆ ಅಂಟಿಕೊಳ್ಳದೆ ಜನರ ಜೀವನ ಸುಧಾರಣೆಗಾಗಿ ಕೃಷ್ಣಾರಾಜ ಸಾಗರ ಆಣೆಕಟ್ಟು ನಿರ್ಮಿಸಿ ರೈತರಿಗೆ ನೆರವಾದರು,ಭದ್ರಾವತಿ ಉಕ್ಕಿನ ಕಾರ್ಖಾನೆ,ಶಹಬಾದ್ ಸಿಮೆಂಟ್ ಕಾರ್ಖಾನೆ ಆರಂಭ ಸೇರಿದಂತೆ ಅನೇಕ ಕೈಗಾರಿಕೆಗಳ ಸ್ಥಾಪಿಸಿ ಜನರಿಗೆ ಉದ್ಯೋಗ ನೀಡಿದರು,ಅಲ್ಲದೆ ಅಸ್ಪೃಶ್ಯತೆ ನಿವಾರಣೆ,ಮಹಿಳೆಯರಿಗಾಗಿ ವಿಧವಾ ಪುನರ್ವಿವಾಹ ಕಾನೂನು,ಶೋಷಿತರ ಸಬಲೀಕರಣದಂತ ಸಮಾಜಮುಖಿ ಯೋಜನೆಗಳನ್ನು ಜಾರಿಗೊಳಿಸಿ ಮಾದರಿಯಾಗಿದ್ದಾರೆ ಎಂದರು.



### ಪ್ರತಿಭಾ ಪುರಸ್ಕಾರ

**ವಿದ್ಯಾರ್ಥಿಗಳಾದ ವಿನೋದ ದೇವತ್ಕಲ್,ಸಫಿಯಾ ಏವೂರ,ರಾಜೇಶ್ವರಿ ಸುರಪುರ,ಚಂದ್ರಕಲಾ ಸುರಪುರ,ಭವಾನಿ ಕಕ್ಕೇರಾ, ತಾರಾ ಮಾಲಗತ್ತಿ ಇವರಿಗೆ ಕನ್ನಡ ಭಾಷಾ ಗುಣಾಗ್ರಣಿ ಪ್ರಸಸ್ತಿ ಹಾಗೂ ಭೀಮಬಾಯಿ ನಾರಾಯಣಪ್ಪ ಭಂಡಾರೆ ಸ್ಮರ್ಣಾರ್ಥ ಪ್ರತಿಭಾ ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು.**

**ಕಡ್ಲೆಪ್ಪನವರ ನಿಷ್ಠಿ ವಿರಕ್ತಮಠದ ಶ್ರೀ ಪ್ರಭುಲಿಂಗ ಸ್ವಾಮೀಜಿಗೆ ಅರವತ್ತು ವರ್ಷಗಳಾದ ಹಿನ್ನೆಲೆಯಲ್ಲಿ ಸಾಹಿತಿ ಶ್ರೀನಿವಾಸ ಜಾಲವಾದಿ ನೇತೃತ್ವದಲ್ಲಿ ವಿಶೇಷವಾಗಿ ವೇದಿಕೆ ಮೇಲಿನ ಎಲ್ಲ ಗಣ್ಯರು ಸನ್ಮಾನಿಸಿ ಗೌರವಿಸಿದರು.**

ಕಾರ್ಯಕ್ರಮದ ಆರಂಭದಲ್ಲಿ ಸುರಪುರ ಅರಸು ಮನೆತನದ ರಾಜಾ ಪಿಡ್ಡ ನಾಯಕ ಸಸಿಗೆ ನೀರೆರೆದು ಕಾರ್ಯಾಕ್ರಮ ಉದ್ಘಾಟಿಸಿದರು,ಕಸಾಪ ತಾ.ಗೌರವಾಧ್ಯಕ್ಷ ರಾಜಾ ಮುಕುಂದ ನಾಯಕ ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಗೌರವಿಸಿದರು.ನಂತರ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ 125 ಅಂಕ ಪಡೆದ 6 ಜನ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾ ಗುಣಾಗ್ರಣಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಬಿಇಓ ಕಚೇರಿಯ ಇಸಿಓ ಬಸವರಾಜ,ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಸಾಪ ತಾ.ಅಧ್ಯಕ್ಷ ಶರಣಬಸಪ್ಪ ಯಾಳವಾರ ಮಾತನಾಡಿದರು.ವೇದಿಕೆಯಲ್ಲಿ ಕಸಾಪ ನಿಕಟಪೂರ್ವ ಅಧ್ಯಕ್ಷ ಶ್ರೀನಿವಾಸ ಜಾಲವಾದಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಹೋರಾಟಗಾರ ಮಲ್ಲಿಕಾರ್ಜುನ ಸತ್ಯಂಪೇಟೆ,ಸಾಹಿತಿ ನಬಿಲಾಲ ಮಕಾಂದಾರ,ಬಸವರಾಜ ಜಮದ್ರಖಾನಿ,ಸೋಮರಡ್ಡಿ ಮಂಗಿಹಾಳ,ಶ್ರೀಶೈಲ ಯಂಕಂಚಿ,ಶಿವಕುಮಾರ ಮಸ್ಕಿ,ರಾಘವೇಂದ್ರ ಭಕ್ರಿ ಸೇರಿದಂತೆ ಅನೇಕರಿದ್ದರು.ಕನಕಪ್ಪ ವಾಗಣಗೇರ ಪ್ರಾಸ್ತಾವಿಕವಾಗಿ ಮಾತನಾಡಿದರು,ಹೆಚ್. ರಾಠೋಡ ಸ್ವಾಗತಿಸಿದರು,ದೇವು ಹೆಬ್ಬಾಳ ನಿರೂಪಿಸಿದರು,ರಜಾಕ್ ಬಾಗವಾನ ವಂದಿಸಿದರು.

## ಮುರಾರ್ಜಿ ದೇಸಾಯಿ ವಸತಿ ಶಾಲೆಗೆ ಶ್ರೀನಿವಾಸನ್ ಭೇಟಿ

**ಕೋಲಾರ:** ಬಂಗಾರಪೇಟೆ ತಾಲೂಕಿನ ಎಳೆಸಂದ್ರದ ಮುರಾರ್ಜಿ ದೇಸಾಯಿ ವಸತಿ ಶಾಲೆಗೆ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಶ್ರೀನಿವಾಸನ್ .ಎಂ ಅವರು ಭೇಟಿ ನೀಡಿ ವಸತಿ ಶಾಲೆಗೆ ಹಮ್ಮಿಕೊಂಡಿರುವ ಯೋಜನೆ ಶಾಲಾ ಪೂರ್ವ ಸಿದ್ಧತೆ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಿದರು.

ಈ ಸಾಲಿನ 6ನೇ ತರಗತಿಯ ದಾಖಲಾತಿಗೆ ಸಂಬಂಧಿಸಿದಂತೆ ಸೂಕ್ತ ಮಾಹಿತಿಯನ್ನು ಪ್ರಾಂಶುಪಾಲರಿಂದ ನೀಡಲಾಯಿತು. ಇದೇ ಸಂದರ್ಭದಲ್ಲಿ ವಸತಿ ಶಾಲೆಯಲ್ಲಿ ಹಾಜರಿದ್ದ ವಿದ್ಯಾರ್ಥಿಗಳೊಂದಿಗೆ ಮುಕ್ತ ಚರ್ಚೆಯನ್ನು ನಡೆಸಿದರು. 2024-25ನೇ ಶೈಕ್ಷಣಿಕ ವರ್ಷದಲ್ಲಿ ಎಸ್ ಎಸ್ ಎಲ್ ಸಿ ವಾರ್ಷಿಕ ಪರೀಕ್ಷೆಯಲ್ಲಿ ಗುಣಾತ್ಮಕ ಫಲಿತಾಂಶದೊಂದಿಗೆ ಶೇಕಡ ನೂರರಷ್ಟು ಫಲಿತಾಂಶವನ್ನು ಪಡೆಯಲು, ಜೂನ್ ಮಾಹೆ ಇಂದಲೇ ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡು ಉತ್ತಮ ಅಭ್ಯಾಸ ಮಾಡಲು ವಿದ್ಯಾರ್ಥಿಗಳಿಗೆ ಸೂಚಿಸಿದರು.

ವಸತಿ ಶಾಲೆ ಸಿಬ್ಬಂದಿಗಳ ಸಭೆಯಲ್ಲಿ ಕಳೆದ ವರ್ಷದ ವಾರ್ಷಿಕ ಪರೀಕ್ಷೆಯ ಫಲಿತಾಂಶವನ್ನು ವಿಶ್ಲೇಷಣೆ ಮಾಡುತ್ತಾ ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳು ದಿನದ 24 ಗಂಟೆಯೂ ಸಹ ವಸತಿ ಶಾಲೆಯಲ್ಲಿ ಇರುವುದರಿಂದ ಶಾಲಾ ಪ್ರಾರಂಭದಿಂದಲೇ ಸೂಕ್ತ ಕಾರ್ಯ ಯೋಜನೆಗಳನ್ನು ರೂಪಿಸಿಕೊಂಡು ಪ್ರತಿ ವಿದ್ಯಾರ್ಥಿಯ ಪ್ರಗತಿಯ ವಿಶ್ಲೇಷಣೆಯನ್ನು ಮಾಡುತ್ತ, ಬರುವ ಶೈಕ್ಷಣಿಕ ವರ್ಷದಲ್ಲಿ ಗುಣಾತ್ಮಕ ಫಲಿತಾಂಶ ದೊಂದಿಗೆ ಶೇಕಡ ನೂರರಷ್ಟು ಫಲಿತಾಂಶವನ್ನು ನೀಡಲು ಈ ಮೂಲಕ ಬೋಧಕ ಸಿಬ್ಬಂದಿಗಳಿಗೆ ಆದೇಶಿಸಿದರು. ವಸತಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಅತಿಥಿ ಶಿಕ್ಷಕರು ಹಾಗೂ ಹೊರ ಸಂಪನ್ಮೂಲ ಸಿಬ್ಬಂದಿಗಳಿಗೆ ವಸತಿ ಶಾಲೆಯಲ್ಲಿ ಮತ್ತು ಕರ್ತವ್ಯದ ಸಮಯದಲ್ಲಿ ಸಮಯ ಪಾಲನೆಯನ್ನು ಸ್ವಚ್ಛತೆಯನ್ನು ಹಾಗೂ ವಿದ್ಯಾರ್ಥಿಗಳಿಗೆ ನೀಡುವ ಊಟು?ಪಚಾರದಲ್ಲಿ ರುಚಿ ಶುಚಿಯಾದ ಊಟವನ್ನು ನೀಡಲು ಸೂಚಿಸಿದರು. ವಸತಿ ಶಾಲೆಯಲ್ಲಿ ಯಾವುದೇ ಕಾರಣಕ್ಕೂ ಗುಂಪುಗಾರಿಕೆಯನ್ನು ಮಾಡದೆ ಎಲ್ಲರೂ ಅನ್ನುನ್ಯತೆ ಯಿಂದ ಕರ್ತವ್ಯ ನಿರ್ವಹಿಸುವಂತೆ ಸೂಚಿಸಿದರು. ವಸತಿ ಶಾಲೆ ವಿಶೇಷವಾಗಿ ಪುರುಷ ಸಿಬ್ಬಂದಿ ಶಾಲೆಯ ಆವರಣದ ಒಳಗೆ ಯಾವುದೇ ಕಾರಣಕ್ಕೂ ಧೂಮಪಾನವನ್ನು ಮಧ್ಯಪಾನವನ್ನು ಮಾಡಬಾರದಾಗಿ ಎಚ್ಚರಿಸಿದರು.

ಒಂದು ವೇಳೆ ಈ ರೀತಿಯಾದ ಘಟನೆಗಳು ವಸತಿ ಶಾಲೆಯ ಆವರಣದಲ್ಲಿ ಒಂದು ವೇಳೆ ಈ ರೀತಿಯಾದ ಘಟನೆಗಳು ನಡೆದಲ್ಲಿ ಸೂಕ್ತ ಕ್ರಮ ಜರಗಿಸಲಾಗುವುದೆಂದು ಆದೇಶಿಸಿದರು. ವಸತಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಅತಿಥಿ ಶಿಕ್ಷಕರಿಂದ 2024-25ನೇ ಸಾಲಿಗೆ ಸಂಬಂಧಿಸಿದಂತೆ ವಿದ್ಯಾರ್ಹತೆ ಮಾಹಿತಿಯನ್ನು ಪಡೆದು ಡೆಮೋ ತರಗತಿಗಳನ್ನು ನಡಿಸಿ ಮುಂದಿನ ಸೂಕ್ತ ಕ್ರಮ ವಹಿಸಲು, ವಸತಿ ಶಾಲಾ ಕಾಲೇಜಿನ ಪ್ರಾಂಶುಪಾಲರಿಗೆ ಸೂಚಿಸಿದರು.






**ಪೂಜಾ ಕಾರ್ಯಕ್ರಮ**

**ಕೋಲಾರ ತಾಲೂಕಿನ ನಾಗನಾಳ ಗ್ರಾಮದಲ್ಲಿ ಭಾನುವಾರ ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ನಾಗನಾಳ ಸೋಮಣ್ಣ ಅವರ ಮಾಲೀಕತ್ವದ ಶ್ರೀ ದಾಕ್ಷಾಯಿಣಿ ಕ್ರಷರ್ ಉದ್ಘಾಟನಾ ಪೂಜಾ ಕಾರ್ಯಕ್ರಮದಲ್ಲಿ ಶಾಸಕ ಕೊತ್ತೂರು ಮಂಜುನಾಥ್, ಎಂಎಲ್ಸಿ ಎಂ.ಎಲ್ ಅನಿಲ್ ಕುಮಾರ್, ಕೆಪಿಸಿಸಿ ಸದಸ್ಯ ನಂದಿನಿ ಪ್ರವೀಣ್, ಬಂಗಾರಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೀಸಂದ್ರ ಗೋಪಾಲಗೌಡ, ಪಿಎಲ್ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಚಂಜಿಮಲೆ ರಮೇಶ್, ಮುಖಂಡರಾದ ಖಾಜಿಕಲ್ಲಹಳ್ಳಿ ಮುನಿರಾಜು, ಮೈಲಾಂಡಹಳ್ಳಿ ಮುರಳಿ, ಜನಪನಹಳ್ಳಿ ನವೀನ್, ಮಲೇಷಿಯಾ ರಾಜಕುಮಾರ್, ಸೇರಿದಂತೆ ಮುಂತಾದವರು ಇದ್ದರು**

## ಲಕ್ಷ್ಮೀವೆಂಕಟರಮಣಸ್ವಾಮಿ ದೇವಾಲಯದಲ್ಲಿ ಪೂಜೆ

**ವಿಜಯಪುರ:** ಮೂರನೇ ಬಾರಿಗೆ ಪ್ರಧಾನಿಯಾಗಿ ನರೇಂದ್ರ ಮೋದಿಜೀ ಪ್ರಮಾಣ ವಚನ ಸ್ವೀಕರಿಸುತ್ತಿರುವ ಹಿನ್ನಲೇ ಬಿಜೆಪಿ ಕಾರ್ಯಕರ್ತರು ಪಟ್ಟಣದ ಹಾರ್ಡಿಪುರದ ಶ್ರೀ ಕ್ಷೇತ್ರ ಶ್ರೀಲಕ್ಷ್ಮೀವೆಂಕಟರಮಣಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆಯನ್ನು ಸಲ್ಲಿಸಿದರು.

ಈ ವೇಳೆ ಬಿಜೆಪಿ ಮುಖಂಡ ನಾಗನಾಯಕನಹಳ್ಳಿ ನಾಗರಾಜುಗೌಡ ಮಾತನಾಡಿದ ಅವರು ಸತತ ಮೂರನೇ ಅವಧಿಗೆ ಎನ್ ಡಿಎ ಸಂಸದೀಯ ನಾಯಕರಾಗಿ ಆಯ್ಕೆಯಾಗಿರುವ ನರೇಂದ್ರ ಮೋದಿಜೀ ದೇಶದ ಶಕ್ತಿಯಾಗಿದ್ದಾರೆ. ದೇಶವು ವಿಶ್ವದಲ್ಲಿ ಐದನೇ ಸ್ಥಾನದಲ್ಲಿದೆ. ದೇಶದ ಅರ್ಥಿಕತೆಯು ಅಭಿವೃದ್ಧಿ ಹೊಂದಿದೆ. ದೇಶವನ್ನು ಪ್ರಗತಿಯ ಪಥದಲ್ಲಿ ಸಾಧಿಸಲು, ಜನರ ಜೀವನ ಮಟ್ಟ ಸುಧಾರಣೆ, ಬಡವರು, ರೈತರು, ಯುವಕರು ಹಾಗೂ ಮಹಿಳೆಯರ ಸಬಲೀಕರಣಕ್ಕೆ ಹಲವು ಯೋಜನೆಗಳನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ. ಇದರಲ್ಲಿ ಪ್ರಧಾನಮಂತ್ರಿ ಆವಾಸ ಯೋಜನಾ, ಪ್ರತಿ ಮನೆಗೂ ವಿದ್ಯುತ್, ನೀರು ಹಾಗೂ ಎಲ್‌ಪಿಜಿ, ಆಯುಷ್ಮಾನ್ ಭಾರತದ ಮೂಲಕ ಉಚಿತ ವೈದ್ಯಕೀಯ ಚಿಕಿತ್ಸೆ, ರೈತರಿಗೆ ಆರ್ಥಿಕ ನೆರವು, ಮಾತೃ ವಂದನಾ ಯೋಜನೆ ಮೂಲಕ ಮಹಿಳೆಯರಿಗೆ ನೆರವು ನೀಡಲಾಗುತ್ತಿದೆ ಎಂದಿದ್ದರು.



ಮುಖಂಡ ಜಯರಾಮ್ ಮಾತನಾಡಿ, ಶ್ರೀಮಂತ ಪರಂಪರೆ ಹಾಗೂ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಿ ಈಗ ಮುಂದೆ ಸಾಗಬೇಕಿದೆ. ಈ ನಿಟ್ಟಿನಲ್ಲಿ ಜಿಎಸ್‌ಟಿ ಜಾರಿ, 370ನೇ ವಿಧಿಯಡಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾದ ವಿಶೇಷ ಸ್ಥಾನಮಾನ ರದ್ದು, ತ್ರಿವಳಿ ತಲಾಖ್ ಕಾನೂನು ರದ್ದು, ನಾರಿ ಶಕ್ತಿ ವಂದನಾ ಮುಂತಾದ ಕ್ರಮಗಳನ್ನು ಕೈಗೊಂಡಿದ್ದು ಮುಂದಿನ ದಿನಗಳಲ್ಲಿ ಎನ್ನೂ ಹೆಚ್ಚಿಗೆ ಅಭಿವೃದ್ಧಿ ಮಾಡಲ್ಲಿದ್ದಾರೆ ಎಂದರು. ಈ ಸಂದರ್ಭದಲ್ಲಿ ಮೋದಿಜೀ ಅವರ ಅಭಿಮಾನಿಗಳು ಹಾಗೂ ಕಾರ್ಯಕರ್ತರು ಹಾಜರಿದ್ದರು.

## ಅನುದಾನ ಬಿಡುಗಡೆಗೊಳಿಸಿ

**ವಿಜಯಪುರ:** ನಗರೋತ್ಥಾನ ಯೋಜನೆಯಡಿ ವಿಜಯಪುರ ಪಟ್ಟಣದ ಪುರಸಭೆಗೆ ಬಿಡುಗಡೆಯಾಗಬೇಕಾಗಿ ರುವ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಿ ಕೊಡುವ ಮೂಲಕ ಅಭಿವೃದ್ಧಿಗೆ ಸಹಕಾರ ನೀಡಬೇಕು ಎಂದು ಪುರಸಭೆ ಮಾಜಿ ಅಧ್ಯಕ್ಷರು ಹಾಲಿ ಸದಸ್ಯದ ಎಂ. ಸತೀಶ್ ಕುಮಾರ್ ಒತ್ತಾಯಿಸಿದ್ದಾರೆ.



ವಿಜಯಪುರ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ರಸ್ತೆಗಳ ಅಭಿವೃದ್ಧಿ ಸೇರಿದಂತೆ ವಿವಿಧ ಕಾಮಗಾರಿ ಗಳನ್ನು ನಗರೋತ್ಥಾನ ಯೋಜನೆಯಡಿ ಮಾಡುವುದಕ್ಕೆ ಕ್ರಿಯಾ ಯೋಜನೆ ಮಾಡಿ ಸಲ್ಲಿಸಿ, ಒಂದು ವರ್ಷ ಕಳೆದರೂ ಇದು ವರೆಗೂ ಅನುದಾನದ ಬಿಡುಗಡೆಯ ಮಾಡಿಲ್ಲ ನಾವು ವಾರ್ಡುಗಳಿಗೆ ಹೋಗುವುದಕ್ಕೆ ಸಾಧ್ಯವಾಗು ತ್ತಿಲ್ಲ. ಅಭಿ ವೃದ್ಧಿ ಕಾಣದ ವಾರ್ಡುಗಳಲ್ಲಿ ಜನರು ರೊಚ್ಚಿಗೇಳುತ್ತಿದ್ದಾರೆ. ಆದ್ದರಿಂದ ಶೀಘ್ರವಾಗಿ ಅನುದಾನ ಬಿಡುಗಡೆ ಮಾಡಿ ಕೊಟ್ಟು ವಾರ್ಡುಗಳ ಏಳಿಗೆಗೆ ಸಹಕಾರ ನೀಡಬೇಕೆಂದು ಒತ್ತಾಯಿಸಿದರು. ಇದೇ ಸಂದರ್ಭದಲ್ಲಿ 19 ವಾಡ9 ಪುರಸಭೆ ಸದಸ್ಯ ರವಿ ಮಾತನಾಡಿ ವಾರ್ಡಿನಿಂದ ಆಯ್ಕೆಯಾಗಿದ್ದು, ಸಾರ್ವ ಜನಿಕರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಲು ಸಾಧ್ಯವಾಗಿಲ್ಲ. ನಮ್ಮ ವಾರ್ಡಿಗೂ ನಗರೋ ತ್ಥಾನ ಯೋಜನೆಯಡಿಯಲ್ಲಿ ಕಾಮಗಾರಿ ಗಳು ಪಟ್ಟಿ ಮಾಡಿ, ಕ್ರಿಯಾ ಯೋಜನೆ ಮಾಡಿಕೊಂಡೆವು. ಬೇರೆ ವಾರ್ಡುಗಳಲ್ಲಿ 1. ನೇ ಹಣಕಾಸು ಯೋಜನೆ ಸೇರಿದಂತೆ ಬೇರೆ ಬೇರೆ ಯೋಜನೆಗಳಲ್ಲಿ ಸಿ.ಸಿ.ರಸ್ತೆಗಳು, ಚರಂಡಿ ಕಾಮಗಾರಿಗಳು, ಆಗಿವೆ. ನಮ್ಮ ವಾರ್ಡುಗಳಲ್ಲಿ ನಾವು ಕೈಯಿಂದ ಬಂಡ 'ವಾಳ ಹಾಕಿ ಬೀದಿದೀಪಗಳು ಹಾಕಿಸಿದ್ದೇವೆ. ಜನರು ಆಕ್ರೋಶ ಭರಿತರಾಗಿದ್ದಾರೆ. ನಗರಾಭಿವೃದ್ಧಿ ಯೋಜನಾ ಧಿಕಾರಿಗೂ ಅನೇಕ ಬಾರಿ ಮನವಿ ಮಾಡಿದ್ದೇವೆ ಏನೂ ಪ್ರಯೋಜನವಾಗಿಲ್ಲ ಎಂದರು.

## ರಸ್ತೆ ಸುರಕ್ಷತೆ ನಿಯಮ ಪಾಲಿಸಿ

**ವಿಜಯಪುರ:** ಪ್ರತಿಯೊಬ್ಬರೂ ಆಗತ್ಯವಾಗಿ ರಸ್ತೆ ಸುರಕ್ಷತೆ ನಿಯಮಗಳನ್ನು ಅರಿತು ಕಡ್ಡಾಯವಾಗಿ ಪಾಲಿಸಬೇಕು ಎಂದು ವಿಜಯಪುರ ಸಿ.ಪಿ.ಐ ಸುರೇಶನಾಯಕ್ ಹೇಳಿದರು.

ವಿಜಯಪುರ ಪೊಲೀಸ್ ಠಾಣೆಯ ಆವರಣದಲ್ಲಿ ಸಾರ್ವಜನಿಕರ ಕುರಿತು ಮಾತನಾಡಿ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮದಲ್ಲಿ ಮಾತನಾಡಿ, ರಸ್ತೆ ಸುರಕ್ಷತಾ ಬಗ್ಗೆ ನಿರ್ಲಕ್ಷ್ಯ ಬೇಡ, ಸುರಕ್ಷಾ ಬೆಲ್ಟ್ ಮತ್ತು ಹೆಲ್ಮೆಟ್ ಕಡ್ಡಾಯವಾಗಿ ಧರಿಸಿ ಜೀವ ಉಳಿಸಿ, ಪಾದಚಾರಿಗಳು ರಸ್ತೆಯ ಬಲಬದಿಯಲ್ಲಿ ನಡೆಯಬೇಕು ಹಾಗೂ ಸುರಕ್ಷತಾ ನಡಿಗೆ ನಿಯಮ ಪಾಲಿಸಬೇಕು ಎಂದು ಹೇಳಿದರು.

ಜೀವ ಅಮೂಲ್ಯವಾಗಿದ್ದು, ಇದನ್ನು ಅರಿತು ಪ್ರತಿಯೊಬ್ಬರು ವಾಹನ ಚಲಿಸುವಾಗ ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ನೀವು ಗಳು ದುಡುಕಿ ಮಾಡುವ ಒಂದು ಸಣ್ಣ ತಪ್ಪಿ ನಿಂದ ಒಂದು ಜೀವ ಹೋಗುವುದರ ಜತೆಗೆ ಅವರ ಸಂಸಾರ ಬೀದಿಗೆ ಬರುತ್ತದೆ ಇದಕ್ಕೆ ಹೊಣೆ ಗಾರರು ನೀವೆ ಆಗುತ್ತಿರಿ. ಶಾಲಾ ಕಾಲೇಜುಗಳ ಸುತ್ತಮುತ್ತ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಗಾಂಜಾ ಮತ್ತು ಅಮಲು ಪದಾರ್ಥಗಳನ್ನು ಮಾರಾಟ ಮಾಡುವುದು ಮತ್ತು ಸೇವಿಸುವುದು ಕಂಡುಬಂದಲ್ಲಿ ಕೂಡಲೇ ಪೊಲೀಸ್ ಇಲಾಖೆಗೆ ಮಾಹಿತಿ ನೀಡಬೇಕು ಎಂದರು

ವಿಜಯಪುರ ಠಾಣೆಯ ಪಿಎಸ್ ಐ ಸುನೀಲ್ ಕುಮಾರ್ ಮಾತನಾಡಿ, ಯಾವುದೇ ವಾಹನ ಚಲಾಯಿಸುವಾಗ ಮೊಬೈಲ್‌ನಲ್ಲಿ ಮಾತನಾಡದೆ ರಸ್ತೆಯ ಮೇಲೆ ಗಮನವಿಟ್ಟು ವಾಹನ ಚಲಾಯಿಸಬೇಕು. ದ್ವಿಚಕ್ರ ವಾಹನದಲ್ಲಿ 3 ರಿಂದ 4 ಜನ ಸಂಚಾರ ಮಾಡುವುದು ನಿಷೇಧ ವಾಗಿದ್ದು, ಆದರೂ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಇದನ್ನು ಗಮನಿಸದೆ ವಾಹನ ಚಲಾಯಿಸಿ ಅಪಘಾತಕ್ಕೀಡಾಗುತ್ತಿದ್ದಾರೆ. ಚಾಲಕರು ಈ ಬಗ್ಗೆ ಸಂಚಾರ ನಿಯಮದ ಅರಿವು ಪಡೆದುಕೊಳ್ಳಬೇಕು ಎಂದರು




ಠಾಣೆಯ ಪಿ.ಎಸ್.ಐ ಸಾಧಿಕಪಾಷ ಮಾತನಾಡಿ, ಮದ್ಯಪಾನ ಮಾಡಿ ವಾಹನ ಚಲಾಯಿಸುವುದು ಕಾನೂನು ಪ್ರಕಾರ ಅಪರಾಧವಾಗಿದೆ. ವಾಹನ ಸವಾರರು ವಿಮೆ ಇಲ್ಲದೆ ವಾಹನಗಳನ್ನು ಚಲಾ ಯಿಸುವುದು ತಪ್ಪು, ಪ್ರತಿಯೊಬ್ಬರೂ ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ ವಾಹನ ಚಲಾಯಿಸಬೇಕು ಎಂದರು. ಈ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿ, ಆಟೋ ಚಾಲಕರು ಸಾರ್ವಜನಿಕರು ಮುಂತಾದವರು ಉಪಸ್ಥಿತರಿದ್ದರು.

## ಡಾ.ಪಾಟೀಲ ಗೆಲುವಿಗೆ, ಕಾರ್ಯಕರ್ತರಿಂದ ವಿಜಯೋತ್ಸವ

**ಶಹಾಬಾದ:** ಈಶಾನ್ಯ ಪದವಿಧರ ಮತಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ.ಚಂದ್ರಶೇಖರ ಪಾಟೀಲ ಅವರು ಗೆಲುವು ಸಾಧಿಸಿದ್ದರಿಂದ ಪಕ್ಷದ ಕಾರ್ಯಕರ್ತರು ಶನಿವಾರ ಸಂಜೆ ನೆಹರೂ ವೃತ್ತದಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ, ಜಯಘೋಷದೊಂದಿಗೆ ವಿಜಯೋತ್ಸವ ಆಚರಿಸಿದರು. ನೆಹರೂ ವೃತ್ತದಲ್ಲಿ ಬಿಸಿಸಿ, ಕಾಡಾ ಅಧ್ಯಕ್ಷ ಡಾ.ಎಂ.ಎ.ರಶೀದ, ಆನಂದ ಪಾಟೀಲ, ಜಿಲ್ಲಾವಕ್ತಾರ ಪೀರಪಾಶಾ ನೇತೃತ್ವದಲ್ಲಿ ಕಾರ್ಯಕರ್ತರು ಜಯಘೋಷದೊಂದಿಗೆ, ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯತೋತ್ಸವ ಆಚರಿಸಿದರು. ವಿಜಯೋತ್ಸವದಲ್ಲಿ ಪಕ್ಷದ ಮುಖಂಡರಾದ ಮೃತ್ಯುಂಜಯ ಸ್ವಾಮಿ ಹಿರೇಮಠ, ಶರಣಗೌಡ ಪೊಲೀಸ್ ಪಾಟೀಲ, ಮರಲಿಂಗ ಕಮರವಾಡಿ,ಡಾ.ಅಹ್ಮದ ಪಟೇಲ,ಸೂರ್ಯಕಾಂತ ಕೋಬಾಳ, ಶಂಕರ ಕೋಟನೂರ ಮ.ಮಸ್ತಾನ, ಶೇರ ಅಲಿ, ಅನ್ವರ ಪಾಶಾ ನಸಿರೋದ್ದಿನ್, ನಾಗಣ್ಣಾ ರಾಂಪೂರೆ, ಕಿರಣ ಚವ್ಹಾಣ, ನಿಂಗಣ್ಣ ಪೂಜಾರಿ, ಮ. ಇಮ್ರಾನ್,ಮ.ಅಜರ್ ಸೇರಿದಂತೆ ನೂರಾರು ಜನ ಕಾರ್ಯಕರ್ತರು ಪಾಲ್ಗೊಂಡಿದ್ದರು.



ಸಂಜೆ ಮುಗಿಲು
ಸೋಮವಾರ
10.6.2024



# ಪ್ರಸಕ್ತ ದಿನಮಾನದಲ್ಲಿ ಮೀತಿಮೀರಿದ ರಸಗೊಬ್ಬರ ಬಳಕೆ ಬೇಡ

**ಬೇಲೂರು:** ಪ್ರಸಕ್ತ ದಿನಮಾನದಲ್ಲಿ ಮೀತಿಮೀರಿದ ರಸಗೊಬ್ಬರ ಮತ್ತು ಕ್ರಿಮಿಕೀಟನಾಶಗಳ ಬಳಕೆಯಿಂದ ಭೂಮಿ ಹಾಗೂ ಮನುಷ್ಯನ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಉಂಟು ಮಾಡುತ್ತಿರುವ ಹಿನ್ನಲೆಯಲ್ಲಿ ರೈತರು ಸುಸ್ಥಿರ ಸಾವಯವ ಕೃಷಿ ಕಡೆ ಗಮನ ನೀಡುವ ಮೂಲಕ ಉತ್ತಮ ಆರೋಗ್ಯದ ಕಡೆ ಗಮನ ನೀಡಬೇಕಿದೆ ಎಂದು ಪುಷ್ಪಗಿರಿ ಮಹಾಸಂಸ್ಥಾನದ ಪರಮಪೂಜ್ಯ ಜಗದ್ಗುರು ಸೋಮಶೇಖರ ಶಿವಾಚಾರ್ಯ ಮಹಾಸ್ವಾಮೀಜಿಗಳು ಕರೆ ನೀಡಿದರು.

ಚಿಲ್ಲೂರು ಗ್ರಾಮದಲ್ಲಿ ಹಾಸನ ಆಕಾಶವಾಣಿ ಮತ್ತು ಪುಷ್ಪಗಿರಿ ಮಹಾಸಂಸ್ಥಾನದ ವತಿಯಿಂದ ಹಮ್ಮಿಕೊಂಡ ಹಳ್ಳಿಧ್ವನಿ ಕಾರ್ಯಕ್ರಮದ ಉದ್ಘಾಟನೆ ನಡೆಸಿ ಮಾತನಾಡಿದ ಅವರು, ಕೃಷಿಕರು ಸಾವಯವ ಕೃಷಿ ಜೊತೆಯಲ್ಲಿ ಬಹು ಬೆಳೆಗೆ ಅಧ್ಯತೆ ನೀಡಬೇಕಿದೆ ಮತ್ತು ಬಹುವಾರ್ಷಿಕ ಬೆಳೆಗಳನ್ನು ತಮ್ಮ ಭೂಮಿಯನ್ನು ಹಾಕಬೇಕು, ಕೃಷಿ ಜೊತೆಗೆ ಉಪಕಸುಬುಗಳನ್ನು ಕೈಗೊಂಡರೆ ಮಾತ್ರ ಬೇಸಾಯದಲ್ಲಿ ಉತ್ತಮ ವರಮಾನವನ್ನು ಗಳಿಸಬಹುದು, ಈ ನಿಟ್ಟಿನಲ್ಲಿ ಹಾಸನ ಆಕಾಶವಾಣಿ ಕೃಷಿರಂಗದ ಮುಖ್ಯಸ್ಥರಾದ ಡಾ.ವಿಜಯ ಅಂಗಡಿರವರು ಕಳೆದ ಮೂರು ದಶಕದಿಂದ ರೈತರಿಗೆ ಸೂಕ್ತ ಮಾಹಿತಿ ನೀಡುತ್ತಾ ಹಳ್ಳಿಧ್ವನಿ ಕಾರ್ಯಕ್ರಮ ನಡೆಸುತ್ತಿರುವುದು ಸಂತೋಷ ತಂದಿದೆ ಎಂದರು.

ಪುಷ್ಪಗಿರಿ ಮಹಾಸಂಸ್ಥಾನ ಮಠದ ಕಾರ್ಯದರ್ಶಿ ಗ್ರಾನೈಟ್ ರಾಜಶೇಖರ್ ಮಾತನಾಡಿ, ಪುಷ್ಪಗಿರಿ ಶ್ರೀಗಳು ಕೇವಲ ಧಾರ್ಮಿಕ ಕ್ಷೇತ್ರವಲ್ಲದೆ ಕೃಷಿ, ನೀರಾವರಿ ಕ್ಷೇತ್ರದಲ್ಲಿ ಅದ್ವಿತೀಯ ಕೆಲಸ ಮಾಡಿದ್ದಾರೆ. ಮಠದ ಸುಮಾರು 80 ಎಕ್ಕರೆ ಭೂಮಿಯಲ್ಲಿ ವಾರ್ಷಿಕ, ಬಹುವಾರ್ಷಿಕ ಬೆಳೆಗಳನ್ನು ಸ್ವಯಂ ಕೃಷಿಯಿಂದ ಬೆಳೆದು ಮಾದರಿಯಾಗಿದ್ದಾರೆ. ಹಳ್ಳಿಧ್ವನಿ ಕಾರ್ಯಕ್ರಮ ಒಂದು ಹಳ್ಳಿಗೆ ಸೀಮಿತವಾಗದೆ ಎಲ್ಲಾ ಗ್ರಾಮಗಳಿಗೆ ತಲುಪುವ ಅಂದೋಲವಾಗಬೇಕಿದೆ ಎಂದು ತಿಳಿಸಿದರು. ಹಾಸನ ಆಕಾಶವಾಣಿ ಕೃಷಿರಂಗ ಮುಖ್ಯಸ್ಥ ಡಾ.ವಿಜಯ ಅಂಗಡಿ ಮಾತನಾಡಿ, ಈಗಾಗಲೇ 10 ಹಳ್ಳಿಧ್ವನಿ ಕಾರ್ಯಕ್ರಮ ಜಿಲ್ಲೆ ನಾನಾ ಕಡೆಯಲ್ಲಿ ನಡೆದಿದ್ದು, ಸದ್ಯ ಐತಿಹಾಸಿಕ ಮತ್ತು ಮಠದ ಪರಂಪರೆವುಳ್ಳ ಚಿಲ್ಕೂರಿನಲ್ಲಿ ನಡೆಸುತ್ತಿರುವುದು ನಿಜಕ್ಕೂ ಹರ್ಷ ತಂದಿದೆ. ಹಳ್ಳಿಧ್ವನಿ ಕಾರ್ಯಕ್ರಮ ಅಯಾ ಗ್ರಾಮದ ಆಚಾರ-ವಿಚಾರ, ಉಡುಗೆ-ತೊಡುಗೆ, ಕೃಷಿ ಚಟುವಟಿಕೆ, ಐತಿಹಾಸಿಕ ಹಿನ್ನಲೆ, ಧಾರ್ಮಿಕ ಪರಂಪರೆ ಹಾಗೇಯೆ ಇಲ್ಲಿನ ಜಾನಪದ ಸೇರಿದಂತೆ ಹತ್ತಾರು ಸಂಗತಿಗಳನ್ನು ಜನತೆಗೆ ತಿಳಿಸುವ ಪ್ರಯತ್ನಕ್ಕೆ ಆಕಾಶವಾಣಿ ಮುಂದಾಗಿದೆ. ಚಿಲ್ಕೂರು ಗ್ರಾಮ ಹೊಯ್ಸಳ ಕಾಲದಲ್ಲಿ ಕೂಡ ಆಸ್ಥಿತ್ವದಲ್ಲಿತ್ತು ಎಂಬ ಬಗ್ಗೆ ಐತಿಹ್ಯವಿದೆ ಎಂದ ಅವರು ಗ್ರಾಮದಲ್ಲಿನ ಮಠದ ಗದ್ದುಗೆ ಮತ್ತು ವೀರಗಲ್ಲುಗಳ ಬಗ್ಗೆ ಹೆಚ್ಚಿನ ಅಧ್ಯಯನ ನಡೆಯಬೇಕು ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿ ಸದಸ್ಯ ಸಚ್ಚೀನ್, ಆಕಾಶವಾಣಿ ಮಧುಸೂದನ್, ಯೋಗ ಶಿಕ್ಷಕ ಚೇತನ್ ಗುರೂಜಿ, ಕೃಷಿ ನಿರ್ದೇಶಕ ರಂಗಸ್ವಾಮಿ, ವಿಜಯಕುಮಾರ್, ಗುತ್ತಿಗೆದಾರ ಚಂದ್ರೇಗೌಡ, ರವಿಕುಮಾರ್, ಪುಟ್ಟೇಗೌಡ, ಯಶೋಧರ್, ನಿವೃತ್ತ ಪೊಲೀಸ್ ಅಧಿಕಾರಿ ನಾಗರಾಜ್ ಸೇರಿದಂತೆ ಇನ್ನು ಮುಂತಾದವರು ಹಾಜರಿದ್ದರು.



ಬೇಲೂರು ತಾಲ್ಲೂಕಿನ ಚಿಲ್ಲೂರು ಗ್ರಾಮದಲ್ಲಿ ಹಾಸನ ಆಕಾಶವಾಣಿ ಕೇಂದ್ರದಲ್ಲಿ ನಡೆದ ಹಳ್ಳಿಧ್ವನಿ ಕಾರ್ಯಕ್ರಮವನ್ನು ಪುಷ್ಪಗಿರಿ ಜಗದ್ಗುರುಗಳು ಗಿಡಕ್ಕೆ ನೀರು ಹಾಕಿ ಉದ್ಘಾಟನೆ ನಡೆಸಿದರು.

## ಕೃಷಿಕರಿಗೆ ಮಾದರಿಯಾಗಲಿ

**ರೈತರು ಸಮತೋಲದಿಂದ ಕೂಡಿದ ಸಂಯುಕ್ತ ರಸಗೊಬ್ಬರಗಳ ಬಳಕೆಯನ್ನು ಇಲಾಖೆಯ ಶಿಪಾರಸ್ಸು ರೀತಿಯಲ್ಲಿ ಉಪಯೋಗಿಸಬೇಕಿದೆ. ಏಕದಳ ಬೆಳೆಯೊಂದಿಗೆ ದ್ವಿದಳ ಬೆಳೆಗಳಿಗೆ ಹೆಚ್ಚಿನ ಮಹತ್ವ ನೀಡಬೇಕಿದೆ. ಮುಂದಿನ ದಿನದಲ್ಲಿ ಪುಷ್ಪಗಿರಿ ಶ್ರೀಗಳ ಸ್ವಯಂ ಕೃಷಿ ಪದ್ದತಿ ಕೃಷಿಕರಿಗೆ ಮಾದರಿಯಾಗಲಿ ಎಂದು ಬೇಲೂರು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ರಂಗಸ್ವಾಮಿ ಹೇಳಿದರು.**

# ಕಮರಿಗೆ ಬಿದ್ದು ರಿಯಲ್ ಎಸ್ಟೇಟ್ ಉದ್ಯಮಿ ಆತ್ಮಹತ್ಯೆ

**ಚಾಮರಾಜನಗರ:** ಜಿಲ್ಲೆಯ ಯಳಂದೂರು ತಾಲೂಕಿನ ಬಿಳಿಗಿರಿರಂಗನ ಬೆಟ್ಟದ ಮೇಲಿಂದ ಜಿಗಿದು ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೆಳಕಿಗೆ ಬಂದಿದೆ. ಮಹದೇವ ನಾಯಕ ಎಂಬ ರಿಯಲ್ ಎಸ್ಟೇಟ್ ಉದ್ಯಮಿ ಆತ್ಮಹತ್ಯೆ ಮಾಡಿಕೊಂಡ ದುರ್ದೈವಿ. ಬೆಟ್ಟದ ಕಡಿದಾದ ಪ್ರದೇಶದಲ್ಲಿ ಸಿಲುಕಿದ್ದ ಮಹದೇವನಾಯಕ ಅವರ ಶವವನ್ನು ಶನಿವಾರ ಡ್ರೋನ್ ಮೂಲಕ ಪತ್ತೆ ಹಚ್ಚಿದ್ದಾರೆ. ಕಮರಿಯ ನಡುವೆ ಶವ ಸಿಲುಕಿರುವುದು ಪತ್ತೆಯಾಗಿದ್ದು, ಶವದ ಮೇಲಿನ ಬಟ್ಟೆಯನ್ನು ಸಂಬಂಧಿಕರು ಗುರುತಿಸಿದ್ದಾರೆ. ಮೂಲತಃ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಕವಲಂದೆಯ ಕುಂಬಾರಹಳ್ಳಿಯ ರಿಯಲ್ ಎಸ್ಟೇಟ್ ಉದ್ಯಮಿಯಾಗಿದ್ದರು ಮಹದೇವನಾಯಕ. ಇವರು ಮೇ.5 ರಂದು ನಾಪತ್ತೆಯಾಗಿದ್ದರು. ಈ ಸಂಬಂಧ ಕವಲಂದೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಇನ್ನು ಇವರ ಬೈಕ್ ಜೂನ್.6 ರಂದು ಬಿಳಿಗಿರಿರಂಗನ ಬೆಟ್ಟದ ಬಳಿ ಪತ್ತೆಯಾಗಿತ್ತು. ಇದರ ಜಾಡು ಹಿಡಿದು ಹೊರ ಪೊಲೀಸರಿಗೆ ಬೆಟ್ಟದ ಕಮರಿಯಲ್ಲಿ ಅವರ ದೇಹ ಪತ್ತೆಯಾಗಿರುವುದು ಕಂಡುಬಂದಿದೆ..ಇವರ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ನಿಖರ ಕಾರಣ ಕಂಡುಬಂದಿಲ್ಲ. ಈ ಸಂಬಂಧ ಯಳಂದೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಶಿಕ್ಷಕರ ವೃತ್ತಿ ಶ್ರೇಷ್ಠವಾದ ವೃತ್ತಿ

**ಶಹಾಬಾದ್:** ಮಕ್ಕಳ ಭವಿಷ್ಯ ರೂಪಿಸುವುದು ಮತ್ತು ಅಕ್ಷರ ಜ್ಞಾನ ನೀಡುವುದು ಶಿಕ್ಷಕರ ವೃತ್ತಿ ಅತ್ಯಂತ ಶ್ರೇಷ್ಠವಾದದ್ದು ಎಂದು ನಿವೃತ್ತ ಮುಖ್ಯ ಗುರು ಬಸವಂತಪ್ಪ ಹೇಳಿದರು. ನಗರದ ಶೆಮ್ಸ ಫಂಕ್ಷನ್ ಹಾಲ್ ನಲ್ಲಿ ಆದಿ ಜಾಂಬವ ಕಲ್ಯಾಣ ಸಂಘದ ಹನುಮಾನ ನಗರದ ಕರ್ನಾಟಕ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಶಂಕರ ಹಯ್ಯಾಳಕರ ಅವರ ವಯ್ಯೋ ನಿವೃತ್ತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮಕ್ಕಳಿಗೆ ಶಿಕ್ಷಣದ ಜೊತೆಗೆ ಅವರಲ್ಲಿ ಮೌಲ್ಯ, ಆದರ್ಶಗಳು ಜೀವನದ ಅರಿವನ್ನು ಮೂಡಿಸುವಂಥ ಕೆಲಸ ಶಿಕ್ಷಕರು ಮಾಡುತ್ತಾರೆ, ಅಂತಹ ಕೆಲಸವನ್ನು ನಿರ್ವಹಿಸಿ ನೂರಾರು ಮಕ್ಕಳ ಭವಿಷ್ಯಕ್ಕೆ ಆದರ್ಶ ಶಿಕ್ಷಕರಾಗಿ ನಿವೃತ್ತಿ ಆಗಿರುವ ಶಂಕರ ಹಯ್ಯಾಳಕರ ಮತ್ತು ಅವರ ಪತ್ನಿ ಜಯಶ್ರೀ ಅವರಿಗೆ ಆಯಸ್ಸು ಆರೋಗ್ಯ ನೀಡಲಿ ಎಂದು ಹಾರೈಸಿ ಸನ್ಮಾನಿಸಿ ಮಾತನಾಡಿದರು. ವೇದಿಕೆ ಮೇಲೆ ನಾಗಪ್ಪ ಬೆಳಮಗಿ, ಗುರುನಾಥ ಪೊಲೀಸ ಪಾಟೀಲ, ಮಲ್ಲಿಕಾರ್ಜುನ ಹಿರೇನೂರ, ಶಿವರಾಜ ಕೋರೆ, ಉಪಸ್ಥಿತರಿದದರು. ಕಾರ್ಯಕ್ರಮದಲ್ಲಿ ತಿಮ್ಮಾರೆಡ್ಡಿ ಮಾನೆ, ಹನುಮಂತ ಜಾಧವ ರಾಜೇಶ್ ಅಲ್ಲಿಪುರ, ಶಿವಕುಮಾರ ಕುಸಾಳೆ, ನೀಲಕಂಠ ಹುಲಿ, ಜಗನ್ನಾಥ್ ಎಸ್ ಹೆಚ್, ಆಂಜನೇಯ ಗುರಜಾಲಕರ, ಸೇರಿದಂತೆ ಶಾಲೆಯ ಶಿಕ್ಷಕ ವೃಂದದವರು, ಹಳೆ ವಿದ್ಯಾರ್ಥಿಗಳು, ಸಂಬಂಧಿಕರು ಮತ್ತು ಸ್ನೇಹಿತರು ಪಾಲ್ಗೊಂಡಿದ್ದರು.



# ಅರಸಿಕೆರೆಯಲ್ಲಿ ಕೆಟ್ಟು ನಿಂತ ಬೀದಿ ದೀಪಗಳು

**ಅರಸೀಕೆರೆ:** ಹಾಸನ ರಸ್ತೆಯ ಅಯ್ಯಪ್ಪ ಸ್ವಾಮಿ ವೃತ್ತದದಲ್ಲಿ ಸರಿಸುಮಾರು ಆರು ತಿಂಗಳಿನಿಂದ ಕೆಟ್ಟು ನಿಂತ ಬೀದಿ ದೀಪಗಳು ಈ ಬೀದಿ ದೀಪಗಳ ಬಗ್ಗೆ ಚೆಸ್ಕಾಂ ಅಧಿಕಾರಿಗಳಾಗಲಿ ಅಥವಾ ನಗರಸಭೆ ಅಧಿಕಾರಿಗಳಾಗಲಿ ಗಮನಹರಿಸದೆ ಇರುವುದು ವಿಪರ್ಯಾಸವೇ ಸರಿ ಇದೇ ರೀತಿ ಅರಸೀಕರ ಬಿ ಎಚ್ ರಸ್ತೆ ಇನ್ನೂ ಕೆಲವು ರಸ್ತೆಗಳಲ್ಲಿ ಬೀದಿ ದೀಪದಕಂಬಗಳು ಮುರಿದಿದ್ದು ಬೀದಿ ದೀಪಗಳು ಕೆಟ್ಟು ನಿಂತಿದ್ದು ಇತ್ತ ಇದುವರೆಗೂ ಗಮನ ಹರಿಸಿಲ್ಲ ಹಾಗೂ ಸರಿಪಡಿಸಿರುವುದಿಲ್ಲ ರಾತ್ರಿ ವೇಳೆಯಲ್ಲಿ ವಾಹನಗಳು ಚಲಿಸುವಾಗ ಕತ್ತಲು ಇರುವುದರಿಂದ ಅಪಘಾತವಾಗುವ ಸಂಭವ ಹೆಚ್ಚಾಗಿದೆ ಪಾದಚಾರಿಗಳು ಓಡಾಡಲು ತೊಂದರೆಯಾಗುತ್ತಿದೆ ಹಾಗೂ ಅಪಘಾತಗಳು ಆಗಿರುವ ನಿದರ್ಶನಗಳು ಕೂಡ ಇವೆ ಈ ಒಂದು ತಿಂಗಳ ಹಿಂದೆ ಅಯ್ಯಪ್ಪ ಸ್ವಾಮಿ ವೃತ್ತದ ಬಳಿ ಇರುವ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ರಾತ್ರಿ ವೇಳೆ ಕಳ್ಳತನ ವಾಗಿದ್ದು ಈ ವೃತ್ತದಲ್ಲಿರುವ ಬೀದಿ ದೀಪವು ಕೆಟ್ಟು ನಿಂತಿರುವುದು ಹಾಗೂ ಹಾಸನ ಮೈಸೂರು ಕಡೆ ಚಲಿಸುವ ಎಲ್ಲಾ ವಾಹನಗಳು ಈ ವೃತ್ತದ ಮುಖಾಂತರ ಹಾದು ಹೋಗುವುದರಿಂದ ಈ ವೃತ್ತದ ದೀಪದ ಬೆಳಕು ಅತಿ ಮುಖ್ಯವಾಗುತ್ತದೆ ವಾಹನಗಳು ಚಲಿಸಲು ಅನುಕೂಲವಾಗುತ್ತದೆ ಮುಂದಾಗುವ ಅನಾಹುತವನ್ನು ತಪ್ಪಿಸಬಹುದು ಆದ್ದರಿಂದ ಇನ್ನಾದರೂ ಇದಕ್ಕೆ ಸಂಬಂಧಪಟ್ಟ ಚಸ್ಕಂ ಅಧಿಕಾರಿಗಳಾಗಲಿ ಅಥವಾ ನಗರಸಭೆ ಅಧಿಕಾರಿಗಳಾಗಲಿ ಇತ್ತ ಗಮನ ಹರಿಸಬೇಕೆಂದು ಮತ್ತು ಸರಿಪಡಿಸಬೇಕೆಂದು ಅರಸೀಕೆರೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.



## ಡಿವೈಎಸ್ ಪಿ ಕರೀಂ ರಾವ್ ತರ್ ನೇತೃತ್ವದಲ್ಲಿ ನೂರಾರು ಪೊಲೀಸರ ನಿಯೋಜನೆ

# ನಾಲ್ವರ ಆತ್ಮಹತ್ಯೆ: ಶವವಿಟ್ಟು ಪ್ರತಿಭಟನೆ

**ಕೆ.ಆರ್.ನಗರ:** ನಾಲ್ವರ ಆತ್ಮಹತ್ಯೆಯಲ್ಲಿ ಅಪ್ರಾಪ್ತೆ ಸಂತ್ರಸ್ತೆಯ ಅಜ್ಜ ಮಹದೇವನಾಯಕ (65) ಸಾವನ್ನಪ್ಪಿದ್ದು ಅವರ ಶವವನ್ನು ಚಾಮರಾಜನಗರದಿಂದ ಮರಣೋತ್ತರ ಪರೀಕ್ಷೆ ನಂತರ ಅಂಬ್ಯುಲೆನ್ಸ್ ಮೂಲಕ ಕೆ.ಆರ್.ನಗರ ಪೊಲೀಸ್ ಠಾಣೆ ಎದುರು ಶವವಿಟ್ಟು ಪ್ರತಿಭಟನೆ ಮಾಡಲು ಸಜ್ಜಾಗಿದ್ದ ಕುಟುಂಬದವರು, ಗ್ರಾಮಸ್ಥರು ಹಾಗೂ ಮುಖಂಡರನ್ನು ಇಲವಾಲ ಬಳಿ ತಡೆದ ಪೊಲೀಸರು, ಮಾರ್ಗ ಬದಲಿಸಿ ಕೊನೆಗೆ ಚಂದಗಾಲು ಗ್ರಾಮಕ್ಕೆ ಪೊಲೀಸ್ ಪಡೆಗಳೊಂದಿಗೆ ತರುವಾಗ ಪಟ್ಟಣದ ಹಳೆ ಎಡತೊರೆಯ ಹಾಸನ-ಮೈಸೂರು ಹೆದ್ದಾರಿಯಲ್ಲಿ ಜಮಾವಣೆಗೊಂಡಿದ್ದ ಜನರು ಶವವಿದ್ದ ವಾಹನ ತಡೆದು ನ್ಯಾಯ ಒದಗಿಸಿ ಎಂದು ಒತ್ತಾಯ ಕೂಡ ಮಾಡಿದರು, ಈ ವೇಳೆ ಜಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನಂದಿನಿ ಅವರು ಗ್ರಾಮಸ್ಥರ ಜೊತೆ ಮಾತುಕತೆ ನಡೆಸಿ ಶವವನ್ನು ಅಂತ್ಯಕ್ರಿಯೆಗೆ ಚಂದಗಾಲು ಗ್ರಾಮಕ್ಕೆ ಕೊಂಡೊಯ್ಯಲಾಯಿತು. ಈ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಡಿವೈಎಸ್ ಪಿ ಕರೀಂ ರಾವ್ ತರ್ ನೂರಾರು ಪೊಲೀಸರನ್ನು ನಿಯೋಜಿಸಲಾಗಿತ್ತು.

## ದೂರು ದಾಖಲಿಸಿ

**ಕೆ ಆರ್ ನಗರ ತಾಲೂಕಿನ ಚಂದಗಾಲು ಗ್ರಾಮದ ಆಪ್ರಾಪ್ತೆ ಸಂತ್ರಸ್ತೆಯ ಕುಟುಂಬಕ್ಕೆ ಸರ್ಕಾರ ಸೂಕ್ತ ಪರಿಹಾರ ಕೊಡಬೇಕು, ಹಾಗೂ ಕೆ.ಆರ್.ನಗರ ಪೊಲೀಸರ ವಿರುದ್ದ ಎಸ್.ಸಿ., ಎಸ್.ಟಿ ದೌರ್ಜನ್ಯ ಕಾಯ್ದೆಯಡಿ ದೂರು ದಾಖಲಿಸಿ ಬೇಕೆಂದು ಒತಾಯ ಮಾಡದ್ದಾರೆ.**



## ಮೂವರು ಪೊಲೀಸರ ತಲೆದಂಡ

ಕೆ.ಆರ್.ನಗರ ತಾಲ್ಲೂಕಿನ ಚಂದಗಾಲು ಗ್ರಾಮದ ಒಂದೇ ಕುಟುಂದಸ ನಾಲ್ವರು ಆತ್ಮಹತ್ಯೆ ಯತ್ನ, ಒರ್ವ ಸಾವು ಪ್ರಕರಣದ ಹಿನ್ನೆಲೆಯಲ್ಲಿ ಆಪ್ರಾಪ್ತೆ ಸಂತ್ರಸ್ತೆ ನೀಡಿದ ದೂರು ದಾಖಲಿಸಿ ಕೊಳ್ಳದ ಕೆ ಆರ್ ನಗರ ಪೊಲೀಸ್ ಠಾಣೆ ಪೊಲೀಸ್ ಇನ್ಸ್ ಪೆಕ್ಟರ್ ಪಿ.ಪಿ. ಸಂತೋಷ್, ಸಹಾಯಕ ಸಬ್ ಇನ್ ಸ್ಪೆಕ್ಟರ್ ಗಿರೀಶ್ , ಮುಖ್ಯಪೇದೆ ರಾಘವೇಂದ್ರ ಅವರುಗಳನ್ನು ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷಾಧಿಕಾರಿ ನಂದಿನಿ ಅಮಾನತು ಮಾಡಿದ್ದಾರೆ. ಆಪ್ರಾಪ್ತೆ ಸಂತ್ರಸ್ತೆ ನೀಡಿದ ದೂರನ್ನು ಎಸ್.ಸಿ., ಎಸ್.ಟಿ ದೌರ್ಜನ್ಯ ಕಾಯ್ದೆ, ಪೋಕ್ಸೋ ಆಕ್ಟ್, ಹಾಗೂ ಖಕಅ 370 ಸೆಕ್ಷನ್ ದಾಖಲು ಮಾಡಿ ಕೊಳ್ಳದೇ ಪೊಲೀಸರ ನಿರ್ಲಕ್ಷ್ಯ ಕಾರಣ ಎಂದು ತನಿಖೆ ಮೂಲಕ ವರದಿ ಪಡೆದ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿ?ಾಧಿಕಾರಿ ನಂದಿನಿ ಅವರು ಈ ಅಮಾನತು ಆದೇಶ ಹೊರಡಿಸಿದ್ದಾರೆ. ನಾಲ್ವರಲ್ಲಿ ಆಪ್ರಾಪ್ತೆ ಸಂತ್ರಸ್ತೆಯ ತಾತ ಮಹದೇವನಾಯಕ (65) ಸ್ಥಳದಲ್ಲಿ ಸಾವನ್ನಪ್ಪಿದ್ದು ಇವರ ಸಾವಿಗೆ ಕೆ.ಆರ್.ನಗರ ಪೊಲೀಸರೇ ಕಾರಣ ಎಂದು ವಾಲ್ಮೀಕಿ ಸಮುದಾಯದ ಹಲವಾರು ರಾಜಕಾರಿಣಿಗಳು ಜಿಲ್ಲಾ ಪೊಲೀಸರ ವಿರುದ್ದ ಕಿಡಿ ಕಾರಿದ್ದರು ಹಾಗೂ ಪೊಲೀಸ್ ಠಾಣೆ ಎದುರು ಮೃತಪಟ್ಟ ಮಹದೇವನಾಯಕನ ಶವವಿಟ್ಟು ಪ್ರತಿಭಟನೆ ಮಾಡಲು ರಾಜ್ಯ ವಾಲ್ಮೀಕಿ ಸಮುದಾಯದ ಮುಖಂಡರು ನಿರ್ಧಾರ ಮಾಡಿದ್ದರು ಹಾಗೂ ಈ ನಾಲ್ವರ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಸಾ.ರಾ.ಮಹೇಶ್ ದೆಹಲಿಯಿಂದ ಪತ್ರಿಕೆಯೊಂದಿಗೆ ಮಾತನಾಡಿ ಜಿಲ್ಲಾ ಪೊಲೀಸರ ನಿರ್ಲಕ್ಷ್ಯದ ಬಗ್ಗೆ ಹಾಗೂ ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲಿ ಇಂತಹ ಅಮಾನವೀಯ ಘಟನೆ ನಡೆದರು ಕ್ರಮ ಕೈಗೊಳ್ಳದಿರುವ ಬಗ್ಗೆ ಉಗ್ರ ಪ್ರತಿಭಟನೆ ಮಾಡಿವುದಾಗಿ ಎಚ್ಚರಿಕೆ ನೀಡಿದ್ದರು.

# ತುಂಬಿ ಹರಿದ ನಾರಿಹಳ್ಳ

**ಬಳ್ಳಾರಿ:** ನಗರ ಸೇರಿದಂತೆ ಜಿಲ್ಲೆಯಾದ್ಯಂತ ಕಳೆದ ಎರಡು ದಿನಗಳಿಂದ ಉತ್ತಮ ಮಳೆಯಾಗುತ್ತಿದ್ದು, ಜಿಲ್ಲೆಯ ಸಂಡೂರು ತಾಲೂಕಿನ ನಾರಿಹಳ್ಳ ಭರ್ತಿಯಾಗಿ, ಹರಿಯಲಾರಂಭಿಸಿದೆ. ಸಂಡೂರಿನ ಈ ಭಾಗದ ಜನರಿಗೆ ಸಾಕಷ್ಟು ಅನುಕೂಲವಾಗಿದೆ, ನಾರಿಹಳ್ಳ ಜಲಾಶಯ ಭರ್ತಿಯಾಗಿ ಹರಿದರೆ ಈ ಭಾಗದ ಸುಮಾರು ಎಕರೆ ಜಮೀನುಗಳಿಗೆ ನೀರುಣಿಸಲಿದೆ, ಜೊತೆಗೆ ಈ ಭಾಗದ ಕೊಳವೆಬಾವಿಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚಾಗಲಿದೆ. ಸಮೀಪದ ಕುರೆಕೊಪ್ಪ ಭಾಗದಲ್ಲಿ 32 ಮಿ.ಮೀ. ಮಳೆಯಾಗಿದ್ದು, ನಾರಿಹಳ್ಳ ತುಂಬಿ ಹರಿಯಲಾರಂಭಿಸಿದೆ. ಉತ್ತಮ ಮಳೆಯಾದ ಹಿನ್ನೆಲೆ ಸಂಡೂರ ಸೇರಿ ಜಿಲ್ಲೆಯಾದ್ಯಂತ ಬಿತ್ತನೆ ಕಾರ್ಯ ಚುರುಕುಗೊಂಡಿದ್ದು, ಸಂಡೂರಿನಲ್ಲಿ ನಾರಿಹಳ್ಳ ಹಳ್ಳ ಭರ್ತಿಯಾದ ಹಿನ್ನೆಲೆ ವ್ಯಾಪ್ತಿಯ ಜಮೀನುಗಳಿಗೆ ನೀರು ನುಗ್ಗಿದ್ದು, ರೈತರು ಅಪಾರ ನಷ್ಟ ಎದುರಿಸುವಂತಾಗಿದೆ. ತುಮಟಿ ಗ್ರಾಮದಲ್ಲಿ ತಿಮ್ಮಪ್ಪ ಎನ್ನುವವರ ಮನೆ ಬಿದ್ದು, ಅನಾಹುತ ಸಂಭವಿಸಿದೆ. ಆದರೆ, ಯಾವುದೇ ಪ್ರಾಣಹಾನಿಯಾಗಿಲ್ಲ. ತೋರಣಗಲ್ಲು ಹೋಬಳಿಯ ಅನೇಕ ಗ್ರಾಮಗಳಲ್ಲಿ ಹೆಚ್ಚು ಮಳೆಯಾಗಿದ್ದು, ಹಳ್ಳಕೊಳ್ಳಗಳು ತುಂಬಿ ಹರಿಯುತ್ತಿದ್ದು, ವಿಠಲಾಪುರ, ದರೋಜಿ ಕೆರೆಗಳಿಗೆ ನೀರು ಸಂಗ್ರಹವಾಗುತ್ತಿದೆ. ಚೋರನೂರು ಹೋಬಳಿಯ ಯಶವಂತನಗರ, ಸೋಮಲಪುರ, ಬಂಡ್ರಿ ಭಾಗದಲ್ಲಿ ಉತ್ತಮ ಮಳೆಯಾಗುತ್ತಿದ್ದು, ನಾರಿ ಹಳ್ಳಕ್ಕ ಸಂಗ್ರಹವಾಗುತ್ತಿದೆ. ಕಳೆದ ವರ್ಷ ವರುಣ ಮುನಿಸಿಕೊಂಡ ಹಿನ್ನಲೆ ದೇಶಕ್ಕೆ ಅನ್ನ ನೀಡುವ ರೈತರು ಅನೇಕ ಸಂಕಸ್ಟ ಎದುರಿಸಿದ್ದರು. ಪ್ರಸಕ್ತ ವರ್ಷ ಮುಂಗಾರು ಚುರುಕುಗೊಂಡಿದ್ದು, ರೈತರ ಮೊಗದಲ್ಲಿ ಮಂದಹಾಸ ಮೂಡಿಸಿದೆ.



# ರಾಯಚೂರು ಉತ್ಸವಕ್ಕೆ ಅದ್ದೂರಿ ಚಾಲನೆ

**ರಾಯಚೂರು:** ಶಾಮೀಯಾನ ಡೆಕೋರೇಷನ್ ವೃತ್ತಿ ಬಾಂಧವರಿಗೆ ಕಾರ್ಮಿಕ ಇಲಾಖೆಯಲ್ಲಿ ನೊಂದಣಿ ಮಾಡಿಸಿ ಅವರಿಗೆ ಸೌಲಭ್ಯ ಒದಗಿಸಿಕೊಡುವ ಉದ್ದೇಶದಿಂದ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ರಾಜ್ಯ ಶಾಮಿಯಾನ್ ಡೆಕೋರೇಷನ್ ಧ್ವನಿ ಮತ್ತು ಬೆಳಕು ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಆರ್. ಲಕ್ಷ್ಮಣ ಹೇಳಿದರು.

ನಗರದ ಮಾ ಅಶಾಪೂರು ಕಲ್ಯಾಣ ಮಂಟಪದಲ್ಲಿ ಶಾಮಿಯಾನ್ ಡೆಕೋರೇಷನ್ ಧ್ವನಿ ಮತ್ತು ಬೆಳಕು ಕ್ಷೇಮಾಭಿವೃದ್ಧಿ ಸಂಘ ಅಖಿಲ ಭಾರತ ಟೆಂಟ್ ಆಂಡ್ ಡೆಕೋರೇಟ್ ವೆಲ್ಫೇರ್ ಅಸೋಸಿಯೇಷನ್ ಹಾಗೂ ಜಿಲ್ಲಾ ಶಾಮಿಯಾನ ಡೆಕೋರೇಟ್ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ 4ನೇ ಮಹಾಅಧಿವೇಷನ ಮತ್ತು ರಾಯಚೂರು ಉತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ಹಾಗೂ ಮಳಿಗೆಗಳ ಉದ್ಘಾಟಿಸಿ ಚಾಲನೆ ನೀಡಿ ಮಾತನಾಡಿದರು.

ಮೂರು ದಿನಗಳವರೆಗೆ ನಡೆಯುವ ಕಾರ್ಯಕ್ರಮದಲ್ಲಿ ಮೊದಲನೇ ದಿನ ಧ್ವಜಾರೋಹಣ ನೆರವೇರಿಸಿದ್ದು, ಸಂಜೆ ಉದ್ಘಾಟನೆ ನಡೆಯಲಿದೆ ಎಂದರು. ರಾಜ್ಯದ ಎಲ್ಲಾ ಜಿಲ್ಲೆಗಳಿಂದ ವೃತ್ತಿ ಬಾಂಧವರು ಆಗಮಿಸಿದ್ದು ಮಳಿಗೆಗಳಲ್ಲಿ ಶಾಮಿಯಾನ ಡೆಕೋರೇಟ್ಗಳಿಗೆ ಬೇಕಾಗಿರುವ ವಸ್ತುಗಳ ಮಾರಾಟ ಮತ್ತು ಪ್ರದರ್ಶನವನ್ನು ಏರ್ಪಡಿಸಿದೆ, ಸುಮಾರು 100 ಮಳಿಗೆಗಳಿದ್ದು, ಖರೀದಿ ಮತ್ತು ಮಾರಾಟ ನಡೆಯಲಿದೆ, ಕಾರ್ಯಕ್ರಮದಲ್ಲಿ ವೃತ್ತಿ ಬಾಂಧವರಿಗೆ ಅವಕಾಶ ನೀಡಲಾಗಿದೆ, ತಮಗೆ ಬೇಕಿರುವ ವಸ್ತುಗಳನ್ನು ಕಡಿಮೆ ಧರದಲ್ಲಿ ಖರೀದಿ ಮಾಡಬಹುದಾಗಿದೆ ಎಂದರು. ಡೆಕೋರೇಟ್ ಶಾಮಿಯಾನಗಳನ್ನು ಬೇರೆ ರಾಜ್ಯಗಳಿಗೆ ಹೋಗಿ ಖರೀದಿ ಮಾಡಲು ಆಗುವುದಿಲ್ಲ, ಒಂದೆಡೆ ಖರೀದಿ ಮಾಡಲು ಅವಕಾಶ ನೀಡಿದಂತಾಗುತ್ತದೆ ಜೊತೆಗೆ ವೃತ್ತಿ ಬಾಂಧವರನ್ನು ಒಂಡೆದೆ ಸೇರಿಸಿ ಕಾರ್ಯಕ್ರಮ ನಡೆಸಿ ಸರಕಾರದ ನಮಗೆ ಸಿಗುವ ಸೌಲಭ್ಯಗಳು ಕುರಿತು ಸಭೆ ಚರ್ಚೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಅರುಣ ಜೋಷಿ, ಸಂಸ್ಥಾಪಕ ಅಧ್ಯಕ್ಷ ಮಹಿಬೂಬ್ ಮುಲ್ಲಾ ವಿರೂಪಾಕ್ಷಪ್ಪ, ಸೈಯದ್ ಜಾಫರ್ ಖಾದ್ರಿ, ಹುಲಿಗೆಪ್ಪ, ಶ್ರೀಧರ, ಅನಿಲ್ ರಾವ್, ಪಂಕಜ್ ಸೋಫಿಯಾ, ಅಜೀಜ್ ಅಹ್ಮದ್, ಅಶೋಕ ಚಾವ್ಲಾ, ಸೂರತ್ ಸಿಂಗ್ ಮಲ್ಹೋತ್ರಾ, ಮಂಜುನಾಥ, ಗುಂಡಯ್ಯ ಸ್ವಾಮಿ ಇದ್ದರು.



# ಮಸ್ಕಿ ಪಟ್ಟಣದಲ್ಲಿ ಸಂಭ್ರಮಾಚರಣೆ

**ಮಸ್ಕಿ:** ನರೇಂದ್ರ ಮೋದಿ ಅವರು ಸತತ 3ನೇ ಬಾರಿ ಪ್ರಧಾನಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ನಗರದ ಎಲ್ಲಡೆ ಸಂಭ್ರಮಾಚರಣೆ ನಡೆಯಿತು. ಬಿಜೆಪಿ ಮುಖಂಡರು ಬೆಳಗ್ಗೆ ಸಿಹಿ ಹಂಚುವ ಮೂಲಕ ಸಂಭ್ರಮಾಚರಣೆ ಮಾಡಿದರೆ, ಸಂಜೆ ನಗರದಲ್ಲಿ ಕಾರ್ಯಕತರು ಅಲ್ಲಲ್ಲಿ ಚಹ ವಿತರಿಸುವ ಮೂಲಕ ಮೋದಿಯ ಪದಗ್ರಹಣ ಸಮಾರಂಭವನ್ನು ಸಂಭ್ರಮಿಸಿದರು. ಇನ್ನು ಪಟ್ಟಣದ ದೈವದ ಕಟ್ಟಿ ಹತ್ತಿರ , 3ನೇ ಬಾರಿ ಪ್ರಧಾನಿ ಮೋದಿ ಪ್ರಮಾಣ ವಚನ ಕಾರ್ಯಕ್ರಮವನ್ನು ಸಾರ್ವಜನಿಕರಿಗೆ ನೇರ ಪ್ರಸಾರದಲ್ಲಿ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗಿತ್ತು. ನೂರಾರು ಜನರು ಆಗಮಿಸಿ ಬಿಗ್ ಸ್ಕೀನ್ನಲ್ಲಿ ಮೋದಿ ಪ್ರಮಾಣ ವಚನ ಕಾರ್ಯಕ್ರಮವನ್ನು ವೀಕ್ಷಿಸಿ ಸಂಭ್ರಮಿಸಿದರು.



# ಸಮಾಜಮುಖಿ ಚಿಂತನೆಯಡಿ ನಿವೃತ್ತಿ ಜೀವನ ಸಾಗಲಿ

**ಅಫಜಲಪುರ:** ಮೌಲ್ಯಯುತ ಶಿಕ್ಷಣ ನೀಡುತ್ತಾ ಶಿಕ್ಷಣ ರಂಗದಲ್ಲಿ ಹಲವಾರು ಚೇತನಗಳಿಗೆ ಸ್ಫೂರ್ತಿಯಾಗಿ ಸೇವೆ ಸಲ್ಲಿಸಿ ನಿವೃತ್ತಿಯಾಗುವ ಶಿಕ್ಷಕರು ತಮ್ಮ ನಿವೃತ್ತಿ ಜೀವನವನ್ನು ಸಮಾಜಮುಖೀ ಚಿಂತನೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಬದುಕು ಸಾರ್ಥಕ ಪಡಿಸಿಕೊಳ್ಳಬೇಕು ಎಂದು ಮುಖ್ಯಗುರುಗಳಾದ ಮಹಿಬೂಬ ಗುಲ್ಯಾಳ್ ತಿಳಿಸಿದರು.

ತೆಲ್ಲೂಣಗಿ ಗ್ರಾಮದ ಸರ್ಕಾರಿ ಕನ್ನಡ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುವ ಶಿಕ್ಷಕ ಮಲ್ಲಿಕಾರ್ಜುನ ಭತಗುಣಗಿ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ಬೋಧನಾ ಕೌಶಲ್ಯದಿಂದ ಶಿಕ್ಷಣ ರಂಗದಲ್ಲಿ ಸುದೀರ್ಘ ಸೇವೆ ಸಲ್ಲಿಸಿ ಸರ್ವರೊಂದಿಗೆ ಉತ್ತಮ ಬಾಂಧವ್ಯದೊಂದಿಗೆ ಸಾರ್ಥಕ ಸೇವೆ ಸಲ್ಲಿಸಿದ ಮಲ್ಲಿಕಾರ್ಜುನ ಭತಗುಣಗಿ ಅವರ ಸೇವೆ ಇಲಾಖೆಗೆ ತೃಪ್ತಿ ತಂದಿದೆ. ಅತ್ಯಂತ ಶಿಸ್ತಿನ ಶಿಕ್ಷಕರಾದ ಮಲ್ಲಿಕಾರ್ಜುನ ಎಂದರೆ ಮಕ್ಕಳಿಗೆ ಅಚ್ಚುಮೆಚ್ಚು, ಅಲ್ಲದೆ ಸುತ್ತಮುತ್ತಲಿನ ಹಳ್ಳಿಗಳಲ್ಲೂ ಅತ್ಯಂತ ಪ್ರೀತಿಗೆ ಪಾತ್ರರಾದ ಶಿಕ್ಷಕರಾಗಿದ್ದರು. ಶಾಲೆಯಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಒತ್ತು ಕೊಟ್ಟು ಪ್ರತಿವರ್ಷ ಶಾಲೆಯಲ್ಲಿ ಉತ್ತಮ ಫಲಿತಾಂಶ ಬರುವಂತೆ ನೋಡಿಕೊಳ್ಳುತ್ತಿದ್ದರು ಎಂದು ತಿಳಿಸಿದರು.

ನಿವೃತ್ತಿ ಹೊಂದಿರುವ ಶಿಕ್ಷಕ ಸನ್ಮಾನ ಸ್ವೀಕರಿಸಿ ಮಲ್ಲಿಕಾರ್ಜುನ ಭತಗುಣಗಿ ಮಾತಾನಾಡಿ, ಮಕ್ಕಳೊಂದಿಗೆ ಕಳೆದ ದಿನಗಳು, ಅವರನ್ನು ಶೈಕ್ಷಣಿಕವಾಗಿ ಸಾಮಾಜಿಕವಾಗಿ ತಿದ್ದಿ ಬೆಳೆಸಿದ ಸಾರ್ಥಕ ಸೇವೆ ಸಲ್ಲಿಸಿದ ತೃಪ್ತಿ ನನಗಿದೆ ಎಂದು ತಮ್ಮ ಸೇವೆಯ ದಿನಗಳನ್ನು ಸ್ಮರಿಸಿಕೊಂಡರು.

ಈ ಸಂದರ್ಭದಲ್ಲಿ ಚಂದ್ರಕಾಂತ ಬನಸೋಡಿ, ವಂಸತರಾವ್ ಚಿತಪೂರ, ಸಂಜಯಕುಮಾರ, ಶ್ರೀಶೈಲ್ ಹೂಗಾರ, ಮಹಾದೇವಪ್ಪ ಚಿತಪೂರ, ಸಿದ್ದಯ್ಯ ಸ್ವಾಮಿ, ಮಹ್ಮದ್ ಹನೀಫ್, ಗಾಲೀಬಸಾಬ ಮಸಾಲೆವಾಲೆ, ಶ್ರೀಶೈಲ್ ಮಾಗಣಗೇರಿ, ಪಿಂಟು ಕರಜೋಳ, ಅರವಿಂದ್ ಕರಜೋಳ, ಶ್ರೀಶೈಲ್ ಕೋಳಿ, ಸಿದ್ದಮ್ಮ ಬೆಂಗಾಲಿ, ಸುರೇಶ್ ಪಾಟೀಲ್ , ಶ್ರೀಮಂತ ಬಗಲಿ, ಶಿವಾನಂದ ರೇವೂರ, ಮಹ್ಮದ್ ಹನೀಫ್ ಸೇರಿಕಾರ, ಸದಾಶಿವ ಹೊಸಮನಿ, ಯಲ್ಲಪ್ಪ ಚಿಂಚೋಳಿ, ಶರಣು ಕಣ್ಣಿ, ಶಿವಕುಮಾರ್ ಬಿರಾದಾರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



# ಮೋದಿ ಮೂರನೇ ಬಾರಿ ಪ್ರಧಾನಿ ನಗರದಲ್ಲಿ ಬಿಜೆಪಿ ಜೆಡಿಎಸ್ ಕಾರ್ಯಕರ್ತರಿಂದ ವಿಜಯೋತ್ಸವ

ಆದೇಶದಲ್ಲಿ ಸತತವಾಗಿ ಮೂರನೇ ಬಾರಿಗೆ ಪ್ರಧಾನ ಮಂತ್ರಿಯಾಗಿ ನರೇಂದ್ರ ಮೋದಿ ಅವರು ಭಾನುವಾರ ಸಂಜೆ ಪ್ರಮಾಣವಚನ ಸ್ವೀಕರಿಸುತ್ತಿದ್ದಂತೆ ನಗರದ ಡೂಂಲೈಟ್ ವೃತ್ತದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಓಂ ಶಕ್ತಿ ಚಲಪತಿ ಮಾತನಾಡ ಕಳೆದ ಹತ್ತು ವರ್ಷದಿಂದ ದೇಶದಲ್ಲಿ ಮೋದಿಯ ಆಡಳಿತದಿಂದ ಮತ್ತೆ ಮೂರನೇ ಬಾರಿಗೆ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಮೋದಿ ಆಡಳಿತವನ್ನು ದೇಶದ ಜನರು ಮೆಚ್ಚಿ ಮತ್ತೊಮ್ಮೆ ಬಿಜೆಪಿಗೆ ಅವಕಾಶವನ್ನು ದೇಶದ ಜನರು ನೀಡಿದ್ದಾರೆ ಕಾಂಗ್ರೆಸ್ ಪಕ್ಷದ ದುರಾಡಳಿತ ಕೊನೆಗಾಣಿಸಬೇಕಾಗಿದೆ ಜೆಡಿಎಸ್ ಮತ್ತು ಬಿಜೆಪಿ ನೇತೃತ್ವದಲ್ಲಿ ಮುಂದಿನ ಎಲ್ಲಾ ಚುನಾವಣೆಗಳನ್ನು ಎದುರಿಸಲಿದೆ ಎಂದರು.

ಈ ಸಂದರ್ಭದಲ್ಲಿ ಜೆಡಿಎಸ್ ಜಿಲ್ಲಾ ಕಾರ್ಯಾಧ್ಯಕ್ಷ ಬಣಕನಹಳ್ಳಿ ನಟರಾಜ್ ಮಾತನಾಡಿ, ದೇಶ ಮುನ್ನಡೆಯಲು ಮೋದಿಯವರು ಪ್ರಧಾನಿಯಾಗಬೇಕು ಎನ್ನುವ ಆಕಾಂಕ್ಷೆಯನ್ನು ದೇಶದ ಜನರು ಇಟ್ಟುಕೊಂಡಿದ್ದರು ಅದರ ಭಾಗಿವಾಗಿ ಮೂರನೇ ಬಾರಿಗೆ ಮೋದಿ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ ಮುಂಬರುವ ಸ್ಥಳಿಯ ಸಂಸ್ಥೆಗಳಗೆ ನಡೆಯುವ ಚುನಾವಣೆಯಗಳಲ್ಲಿ ಎನ್.ಡಿ.ಎ ಮೈತ್ರಿ ಅಭ್ಯರ್ಥಿಗಳನ್ನು ಗೆಲ್ಲಿಸುವ ಭರವಸೆ ನೀಡಿದರಲ್ಲದೆ ಕೇಂದ್ರದಲ್ಲಿ ಜೆಡಿಎಸ್ ಪಕ್ಷದ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಮೋದಿಯವರ ಸಂಪುಟದಲ್ಲಿ ಸಚಿವ ಸ್ಥಾನ ನೀಡುತ್ತಿರುವುದು ಹೆಮ್ಮೆಯ ವಿಚಾರವಾಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಸಾರ್ವಜನಿಕರಿಗೆ ಪರದೆಯೊಂದರ ಮೇಲೆ ಪ್ರಮಾಣವಚನದ ನೇರ ಪ್ರಸಾರ ವೀಕ್ಷಿಸುವ ವ್ಯವಸ್ಥೆ ಮಾಡಲಾಗಿತ್ತು ವಿಜಯೋತ್ಸವದಲ್ಲಿ ಜೆಡಿಎಸ್ ತಾಲೂಕು ಅಧ್ಯಕ್ಷ ಬಾಬು ಮೌನಿ, ಟಿಎಪಿಸಿಎಂಎಸ್ ಅಧ್ಯಕ್ಷ ವಡಗೂರು ರಾಮು, ಕುಡಾ ಮಾಜಿ ಅಧ್ಯಕ್ಷ ವಿಜಯಕುಮಾರ್, ಎರಡು ಪಕ್ಷದ ಮುಖಂಡರಾದ ಅರುಣಮ್ಮ, ರಾಕೇಶ್, ಸಾ.ಮಾ ಬಾಬು, ನಾಮಲ್ ಮಂಜು, ಬಾಲಾಜಿ, ಅಪ್ಪಿ, ಚಂಬೆ ರಾಜೇಶ್, ದಿಂಬ ನಾಗರಾಜಗೌಡ, ಶಿವಕುಮಾರ್, ಮುಂತಾದವರು ಇದ್ದರು.



ಸಂಜೆ ಟಿಪ್ಸ್




## ಪೊಕೊದಿಂದ ಎಫ್6 5ಜಿ ಸ್ನಾಪ್ ಡ್ರ್ಯಾಗನ್ 8ಎಸ್ ಜೆನ್ 3 ಪ್ರೊಸೆಸರ್ ಬಿಡುಗಡೆ

**ಬೆಂಗಳೂರು:** ಮಧ್ಯಮ ಹಂತದ ವಲಯದಲ್ಲಿ ಯುವಜನರ(ಜೆನ್ ಝೀ) ಟ್ರೆಂಡ್ ಸೆಟ್ಟರ್ ಗಳಿಗೆ ಮುಂಚೂಣಿಯ ಸ್ಮಾರ್ಟ್‌ಫೋನ್ ಅನುಭವವನ್ನು ಕ್ರಾಂತಿಕಾರಕಗೊಳಿಸಲು ಬದ್ಧವಾಗಿರುವ ಪೊಕೊ ಇಂದು ನವದೆಹಲಿಯಲ್ಲಿ ನಡೆದ ಆಕರ್ಷಕ ಕಾರ್ಯಕ್ರಮದಲ್ಲಿ ತನ್ನ ಎಫ್ ಸೀರೀಸ್ ಅನ್ನು ಎಫ್6 5ಜಿ ಮೂಲಕ ಭಾರತದಲ್ಲಿ ಅಪ್ಗ್ರೇಡ್ ಮಾಡಿದೆ. ಪೊಕೊ ಎಫ್6 5ಜಿ ಭಾರತದ ಪ್ರವೇಶವು ಅತ್ಯಂತ ನಿರೀಕ್ಷೆಯ ಸ್ನಾಪ್ ಡ್ರ್ಯಾಗನ್ 8ಎಸ್ ಜೆನ್ 3 ಪ್ರೊಸೆಸರ್ ಮೂಲಕ ಆಗುತ್ತಿದೆ ಮತ್ತು ಇದನ್ನು ಜೆನ್ ಝೀ ಗೇಮರ್ ಗಳು, ಛಾಯಾಗ್ರಹಣದ ಆಸಕ್ತರು ಮತ್ತು ತಂತ್ರಜ್ಞಾನ ಪ್ರಿಯರಿಗೆ ವಿಶೇಷವಾಗಿ ರೂಪಿಸಲಾಗಿದೆ. ಪೊಕೊ ಇಂಡಿಯಾದ ಕಂಟ್ರಿ ಹೆಡ್ ಹಿಮಾಂಶು ಟಂಡನ್ ಈ ಬಿಡುಗಡೆ ಕುರಿತು ತಮ್ಮ ಉತ್ಸಾಹ, ''ನಾವು ಸ್ಮಾರ್ಟ್ ಫೋನ್ ಗಿಂತಲೂ ಹೆಚ್ಚಾದ ಡಿವೈಸ್ ಪೊಕೊ ಎಫ್6 5ಜಿ ಪರಿಚಯಿಸಲು ಬಹಳ ಸಂತೋಷ ಹೊಂದಿದ್ದೇವೆ. ಇದು ಗೇಮ್-ಚೇಂಜರ್, ಪಾಕೆಟ್ ಗಾತ್ರದ ಕ್ರಾಂತಿಯಾಗಿದ್ದು ಸ್ನಾಪ್ ಡ್ರ್ಯಾಗನ್ 8ಎಸ್ ಜೆನ್ 3 ಪ್ರೊಸೆಸರ್ ನಿಂದ ಸನ್ನದ್ಧವಾಗಿದೆ. ಪೊಕೊ ಎಫ್6 5ಜಿಯೊಂದಿಗೆ ನಾವು ಮಧ್ಯಮ ಹಂತದ ಸ್ಮಾರ್ಟ್ ಫೋನ್ ವಲಯದ ನಿಯಮಗಳನ್ನು ಮರು ಬರೆಯಲು ಸಜ್ಜಾಗಿದ್ದು ದಿಟ್ಟ, ಭಯರಹಿತ ಮತ್ತು ಯುವ ಹೃದಯದವರಿಗೆ ಪೂರೈಸುತ್ತದೆ. ಹೊಚ್ಚಹೊಸ ಐಡಿಸಿ ವರದಿಯ ಪ್ರಕಾರ ಭಾರತದಲ್ಲಿ ಮುಂಚೂಣಿಯ ನಂ.6 ಆಂಡ್ರಾಯಿಡ್ ಬ್ರಾಂಡ್ ಗಳಲ್ಲಿ ಒಂದಾಗಿ ನಮ್ಮ ಸ್ಥಾನ ಉತ್ತಮಗೊಂಡಿರುವುದು ನಮ್ಮ ಅಸಾಧಾರಣ ಯಶೋಗಾಥೆಯನ್ನು ತೋರಿಸುತ್ತದೆ. ಆದರೆ ನಾವು ಇಲ್ಲಿಗೇ ನಿಲ್ಲುವುದಿಲ್ಲ. ಪೊಕೊ ಎಫ್6 5ಜಿ ಬಿಡುಗಡೆಯು ಗಡಿಗಳನ್ನು ವಿಸ್ತರಿಸುವ ನಮ್ಮ ಪ್ರಯಾಣದಲ್ಲಿ ಗಮನಾರ್ಹ ಮೈಲಿಗಲ್ಲಾಗಿದೆ ಮತ್ತು ನಾವು ನಿರೀಕ್ಷೆಗಳನ್ನು ಮೀರಲು ಸಿದ್ಧವಾಗಿದ್ದೇವೆ'' ಎಂದರು.

## ಪನ್ನೀರ್ ಜಾಲ್ಫ್ರೆಜಿ

ಪಾಕ ಶಾಲೆ



### ಮಾಡುವ ವಿಧಾನ

ಒಂದು ಪ್ಯಾನ್‌ಗೆ ಎಣ್ಣೆ ಹಾಕಿ ಮಧ್ಯಮ ಜ್ವಾಲೆಯಲ್ಲಿ ಬಿಸಿ ಮಾಡಿ. ಇದಕ್ಕೆ ಜೀರಿಗೆ ಹಾಕಿ ಹುರಿದುಕೊಳ್ಳಿ. ನಂತ್ರ ಕತ್ತರಿಸಿಟ್ಟ ಈರುಳ್ಳಿ ಹಾಕಿ ಫ್ರೈ ಮಾಡಿ. ನಂತ್ರ ಶುಂಠಿ ಬೆಳ್ಳುಳ್ಳಿ ಪೇಸ್ಟ್ ಹಾಕಿ. ಕ್ಯಾರೆಟ್, ಮೆಣಸಿನ ಕಾಯಿ ಹಾಕಿ 2 ನಿಮಿಷ ಫ್ರೈ ಮಾಡಿ. ನಂತ್ರ ಟೋಮೋಟೋ ಹಾಗೂ ಡೊಳ್ಳು ಮೆಣಸು ಹಾಕಿ. ಟೋಮೋಟೋ ಕೆಚಪ್, ಕೆಂಪು ಮೆಣಸಿನ ಪುಡಿ, ಅರಿಶಿನ ಪುಡಿ, ಕೊತ್ತಂಬರಿ ಪುಡಿ, ಗರಂ ಮಸಾಲೆ ಪುಡಿ ಹಾಗೂ ಉಪ್ಪನ್ನು ಹಾಕಿ. ಇದಾದ ನಂತ್ರ ಒಂದರಿಂದ ಮೂರು ಕಪ್ ನೀರು ಹಾಕಿ. ಎರಡು ನಿಮಿಷಗಳ ಕಾಲ ಕುದಿಸಿ. ನಂತ್ರ ಪನ್ನೀರ್ ಹಾಕಿ ಬೇಯಲು ಬಿಡಿ. ಗ್ರೇವಿಯಂತಾದ ಮೇಲೆ ಗ್ಯಾಸ್ ಬಂದ್ ಮಾಡಿ. ಕೊತ್ತಂಬರಿ ಸೊಪ್ಪನ್ನು ಅಲಂಕರಿಸಿ ಸರ್ವ್ ಮಾಡಿ.

### ಬೇಕಾಗಿರುವ ಪದಾರ್ಥ

150 ಗ್ರಾಂ ಪನ್ನೀರ್, ಕಪ್ ಕ್ಯಾರೆಟ್, 1 ಮಧ್ಯಮ ಗಾತ್ರದ ಈರುಳ್ಳಿ, 1 ಹಸಿರು ಮೆಣಸಿನ ಕಾಯಿ, 1 ಡೊಳ್ಳು ಮೆಣಸು, 1 ಟೋಮೋಟೋ, 1/4 ಕಪ್ ಟೋಮೋಟೋ ಪ್ಯೂರಿ, 1 ಟೀ ಸ್ಪೂನ್ ಜೀರಿಗೆ, 1 ಟೀ ಸ್ಪೂನ್ ಟೋಮೋಟೋ ಕೆಚಪ್, 1 ಚಮಚ ಕೆಂಪು ಮೆಣಸಿನ ಪುಡಿ, 1 ಚಮಚ ಬೆಳ್ಳುಳ್ಳಿ-ಶುಂಠಿ ಪೇಸ್ಟ್, 1/8 ಚಮಚ ಅರಿಶಿನ ಪುಡಿ, 1 ಚಮಚ ಕೊತ್ತಂಬರಿ ಪುಡಿ, 1/4 ಚಮಚ ಮಸಾಲಾ ಪುಡಿ, ರುಚಿಗೆ ತಕ್ಕಷ್ಟು ಉಪ್ಪು, 2 ಚಮಚ ಎಣ್ಣೆ, ಸ್ವಲ್ಪ ಕೊತ್ತಂಬರಿ ಸೊಪ್ಪು ಅಲಂಕಾರಕ್ಕೆ.

## Kalki 2898 AD ಹೊಸ ಪೋಸ್ಟರ್ ಹಂಚಿಕೊಂಡ ದೀಪಿಕಾ ಪಡುಕೋಣೆ



'ಪಠಾಣ್' ಬೆಡಗಿ ದೀಪಿಕಾ ಪಡುಕೋಣೆ ಮೊದಲ ಮಗು ಆಗಮನವಾಗುತ್ತಿರುವ ಖುಷಿಯಲ್ಲಿದ್ದಾರೆ. ಸದ್ಯ ದೀಪಿಕಾ ಮತ್ತು ಪ್ರಭಾಸ್ ನಟಿಸಿರುವ 'ಕಲ್ಕಿ 2898 ಎಡಿ' ಸಿನಿಮಾ ಕೂಡ ರಿಲೀಸ್‌ಗೆ ಸಿದ್ಧವಾಗಿದೆ. ಚಿತ್ರದ ಹೊಸ ಪೋಸ್ಟರ್‌ವೊಂದನ್ನು ನಟಿ ಹಂಚಿಕೊಂಡಿದ್ದಾರೆ.

'ಕಲ್ಕಿ 2898 ಎಡಿ' ಸಿನಿಮಾದಲ್ಲಿ ಮಲ್ಟಿ ಸ್ಟಾರ್‌ಗಳು ನಟಿಸಿದ್ದಾರೆ. ದೀಪಿಕಾ ಪಡುಕೋಣೆ ಕೂಡ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಚಿತ್ರದಲ್ಲಿನ ತಾವು ನಟಿಸಿರುವ ಪಾತ್ರದ ಲುಕ್ ಅನ್ನು ನಟಿ ಹಂಚಿಕೊಂಡಿದ್ದಾರೆ. ಪತ್ನಿಯ ಪೋಸ್ಟ್‌ಗೆ ಸ್ಟನರ್ ಎಂದು ರಣ್‌ವೀರ್ ಸಿಂಗ್ ಕಾಮೆಂಟ್ ಮಾಡಿದ್ದಾರೆ.

ಜೂನ್ 10ರಂದು ಕಲ್ಕಿ ಸಿನಿಮಾದ ಟ್ರೈಲರ್ ಬಿಡುಗಡೆಯಾಗಲಿದೆ. ಈಗಾಗಲೇ ಚಿತ್ರದ ಪೋಸ್ಟರ್‌ಗೆ ಉತ್ತಮ ರೆಸ್ಪಾನ್ಸ್ ಸಿಕ್ಕಿದ್ದು, ಟ್ರೈಲರ್‌ಗಾಗಿ ಫ್ಯಾನ್ಸ್ ಎದುರು ನೋಡ್ತಿದ್ದಾರೆ.

ಇನ್ನೂ ಈ ವರ್ಷದ ಬಹು ನಿರೀಕ್ಷಿತ ಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಕಲ್ಕಿ 2898 ಎಡಿ ಚಿತ್ರದಲ್ಲಿ ಅಮಿತಾಬ್ ಬಚ್ಚನ್, ಕಮಲ್ ಹಾಸನ್, ಪ್ರಭಾಸ್, ದೀಪಿಕಾ ಪಡುಕೋಣೆ, ದಿಶಾ ಪಠಾಣಿ ಮುಂತಾದವರು ನಟಿಸಿದ್ದಾರೆ. 'ಕಲ್ಕಿ 2898 ಎಡಿ' ಚಿತ್ರವು ಜಗತ್ತಿನಾದ್ಯಂತ ಜೂನ್ 27ರಂದು ಬಿಡುಗಡೆ ಆಗಲಿದೆ.

## ಬಾದಾಮಿ ಸೇವನೆಯಿಂದ ಆರೋಗ್ಯಕ್ಕೆ

ಹೆಲ್ತ್ ಟಿಪ್ಸ್



ಮೂರು ಬಾದಾಮಿಗಳು ಸುಮಾರು 40 ಗ್ರಾಂ ತೂಗಬಹುದು ಪೌಷ್ಟಿಕಾಂಶಗಳು ವೇಗವಾಗಿ ಸಕ್ರಿಯಗೊಳ್ಳಲು ನೀವು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಮೂರು ಬಾದಾಮಿಯನ್ನು ತಿನ್ನಬೇಕು ಅದರಲ್ಲಿ ರಾತ್ರಿ ನೆನೆಸಿಟ್ಟು ಬೆಳಗ್ಗೆ ಎದ್ದು ಸವಿಯಬೇಕು. ಫೈಟಿಕ್ ಆಮ್ಲದಿಂದ ಕೂಡಿರುವ ಬಾದಾಮಿಯು ಆಂಟಿಆಕ್ಸಿಡೆಂಟ್ಗಳಲ್ಲಿ ಅಧಿಕವಾಗಿದ್ದು ಅದು ನಿಮ್ಮ ದೇಹದಲ್ಲಿ ರೋಗನಿರೋಧಕ ಮಟ್ಟವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

ಉತ್ಕರ್ಷಣ ನಿರೋಧಕಗಳು ಆಕ್ಸಿಡೇಟಿವ್ ಒತ್ತಡದಿಂದ ರಕ್ಷಿಸುತ್ತದೆ, ಇದು ನಿಮ್ಮ ಜೀವಕೋಶಗಳಲ್ಲಿನ ಅಣುಗಳನ್ನು ಹಾನಿಗೊಳಿಸುತ್ತದೆ ಮತ್ತು ಉರಿಯೂತ, ವಯಸ್ಸಾದ ಮತ್ತು ಕ್ಯಾನ್ಸರ್‌ನಂತಹ ಮಾರಣಾಂತಿಕ ಕಾಯಿಲೆಗಳಿಗೆ ಕೊಡುಗೆ ನೀಡುತ್ತದೆ. ಈ ಶಕ್ತಿಯುತ ಉತ್ಕರ್ಷಣ ನಿರೋಧಕಗಳು ತಮ್ಮ ಚರ್ಮದ ಕಂದು ಪದರದಲ್ಲಿ ಹೆಚ್ಚಾಗಿ ಕೇಂದ್ರೀಕೃತವಾಗಿರುತ್ತವೆ.

ಬಾದಾಮಿಯು ಆರೋಗ್ಯಕರ ಕೊಬ್ಬುಗಳು, ಪ್ರೋಟೀನ್ ಮತ್ತು ಫೈಬರ್‌ನಿಂದ ತುಂಬಿರುತ್ತದೆ, ಇದು ಮಧುಮೇಹ ಇರುವವರಿಗೆ ಸವಿಯಲು ಅತ್ಯುತ್ತಮ ಆಯ್ಕೆಯಾಗಿರಲಿದೆ. ಜೊತೆಗೆ ಇದರಲ್ಲಿ ಹೆಚ್ಚು ಪ್ರಮಾಣದ ಮೆಗ್ನಿಷಿಯಂ ಸಿಗಲಿದೆ. ಇದು ನಿಮ್ಮ ದೇಹದಲ್ಲಿ ಸಕ್ಕರೆ ಮಟ್ಟ ನಿಯಂತ್ರಣ ಮಾಡಲಿದೆ. ಟೈಪ್ 2 ಮಧುಮೇಹ ಹೊಂದಿರುವವರು ಮೆಗ್ನೀಸಿಯಮ್ ಕೊರತೆಯನ್ನು ಹೊಂದಿರುತ್ತಾರೆ ಮತ್ತು ಸಾಕಷ್ಟು ಮೆಗ್ನೀಸಿಯಮ್ ಸೇವನೆಯು ಅಪಾಯವನ್ನು ಕಡಿಮೆ ಮಾಡಲು ಮತ್ತು ರಕ್ತದಲ್ಲಿನ ಸಕ್ಕರೆಯ ನಿರ್ವಹಣೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ.

ಇನ್ನು ಈ ಬಾದಾಮಿಯನ್ನು ಬೆಳಗ್ಗೆ ಸೇವಿಸುದರಿಂದ ರಕ್ತದಲ್ಲಿ ಹೆಚ್ಚಿನ ಮಟ್ಟದ ಎಲ್ಡಿಎಲ್ ಅನ್ನು ಕಡಿಮೆ ಮಾಡುತ್ತದೆ. ಜೊತೆಗೆ ಒಳ್ಳೆಯ ಫೈಬರ್ ಹೊಂದಿರುವ ಕಾರಣ ಜೀರ್ಣಕ್ರಿಯೆಗೂ ಇದು ಉತ್ತಮವಾಗಿದೆ. ಬಾದಾಮಿಯಲ್ಲಿ ಪ್ರೋಟೀನ್ ಮತ್ತು ಫೈಬರ್ ಅಧಿಕವಾಗಿದೆ. ಇವೆರಡೂ ಪೂರ್ಣತೆಯ ಭಾವನೆಗಳನ್ನು ಹೆಚ್ಚಿಸುತ್ತದೆ ಮತ್ತು ಅತಿಯಾಗಿ ತಿನ್ನುವುದನ್ನು ತಡೆಯುತ್ತದೆ. ಅಧ್ಯಯನಗಳ ಪ್ರಕಾರ, ಪ್ರತಿದಿನ 40 ಗ್ರಾಂ ಬಾದಾಮಿಯನ್ನು ಸೇವಿಸುವುದರಿಂದ ಹಸಿವು ಮತ್ತು ತಿನ್ನುವ ಬಯಕೆ ಗಮನಾರ್ಹವಾಗಿ ಕಡಿಮೆಯಾಗುತ್ತದೆ. ಇದರಿಂದ ನಿಮ್ಮ ತೂಕ ನಿರ್ವಹಣೆಗೆ ಇದೊಂದು ಮನೆ ಮದ್ದಾಗಿ ಬಳಕೆಯಾಗಬಹುದು.

## ಅರ್ಜುನ್ ಸರ್ಜಾ ಕುಟುಂಬದಲ್ಲಿ ಕಳೆಗಟ್ಟಿದ ಮಗಳ ಮದುವೆ ಸಂಭ್ರಮ

ಬಹುಭಾಷಾ ನಟ ಅರ್ಜುನ್ ಸರ್ಜಾ ಪುತ್ರಿ ಐಶ್ವರ್ಯಾ ಸರ್ಜಾ ಮದುವೆಗೆ ಭರ್ಜರಿ ತಯಾರಿ ನಡೆಯುತ್ತಿದೆ. ಇದೇ ಜೂನ್ 10ರಂದು ಚೆನ್ನೈ ಹನುಮಾನ್ ದೇವಸ್ಥಾನದಲ್ಲಿ ಐಶ್ವರ್ಯಾ ಮತ್ತು ಉಮಾಪತಿ ಮದುವೆ ಜರುಗಲಿದೆ. ಸದ್ಯ ಹಳದಿ ಶಾಸ್ತ್ರ ಮತ್ತು ಮೆಹಂದಿ ಸಮಾರಂಭ ಅದ್ದೂರಿಯಾಗಿ ನಡೆದಿದೆ. ಅರ್ಜುನ್ ಸರ್ಜಾ ಪುತ್ರಿ ಹಳದಿ ಬಣ್ಣದ ಉಡುಗೆಯಲ್ಲಿ ಮುದ್ದಾಗಿ ಕಾಣಿಸಿಕೊಂಡಿದ್ದಾರೆ. ಮದುವೆ ಸಂಭ್ರಮದಲ್ಲಿರುವ ಪುತ್ರಿಗೆ ಅರ್ಜುನ್ ಸರ್ಜಾ ಮುತ್ತು ಕೊಟ್ಟು ಮುದ್ದು ಮಾಡಿರೋದು ಎಲ್ಲರ ಗಮನ ಸೆಳೆದಿದೆ. ಐಶ್ವರ್ಯಾ ಮದುವೆ ಶಾಸ್ತ್ರದ ಫೋಟೋ ಇದೀಗ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗುತ್ತಿವೆ.

ಐಶ್ವರ್ಯಾ ಮತ್ತು ತಮಿಳು ನಟ ಉಮಾಪತಿ ರಾಮಯ್ಯ ಹಲವು ವರ್ಷಗಳಿಂದ ಪ್ರೀತಿಸುತ್ತಿದ್ದರು. ಇಬ್ಬರ ಪ್ರೀತಿಗೆ ಎರಡು ಕುಟುಂಬದ ಸಮ್ಮತಿಯ ಮೇರೆಗೆ ಇತ್ತೀಚೆಗೆ ಅದ್ದೂರಿಯಾಗಿ ಎಂಗೇಂಜ್‌ಮೆಂಟ್ ನಡೆದಿತ್ತು. ಈಗ ಜೂನ್ 10ಕ್ಕೆ ದಾಂಪತ್ಯ ಜೀವನಕ್ಕೆ ಕಾಲಿಡಲು ನಟಿ ರೆಡಿಯಾಗಿದ್ದಾರೆ. ಜೂನ್ 10ರ ಮಗಳ ಮದುವೆಗೆ ಮತ್ತು ಜೂನ್ 14ರಂದು ನಡೆಯಲಿರುವ ಆರತಕ್ಷತೆಗೆ ಕನ್ನಡದ ಹೆಸರಾಂತ ನಟ ಜಗ್ಗೇಶ್ ಸೇರಿದಂತೆ ಅನೇಕರಿಗೆ ಆಮಂತ್ರಣ ನೀಡಿದ್ದಾರೆ ಅರ್ಜುನ್ ಸರ್ಜಾ ದಂಪತಿ. ಸ್ಯಾಂಡಲ್‌ವುಡ್ ಮತ್ತು ಸೌತ್‌ನ ಅನೇಕ ನಟ, ನಟಿಯರಿಗೆ ಮತ್ತು ರಾಜಕೀಯ ಕ್ಷೇತ್ರದಲ್ಲಿರುವ ಗಣ್ಯರಿಗೆ ಮದುವೆ ಆಹ್ವಾನ ನೀಡಿದ್ದಾರೆ.





## ಏರ್‌ಟೆಲ್ ವಿಶ್ವದ ಅತಿ ದೊಡ್ಡ 20 ಕ್ರಿಕೆಟ್ ಟೂರ್ನಮೆಂಟ್‌ಗಾಗಿ ಹೊಸ ಪ್ಲಾನ್ ಬಿಡುಗಡೆ

ಭಾರತದ ಪ್ರಮುಖ ಟೆಲಿಕಾಂ ಸೇವಾ ಪೂರೈಕೆದಾರರಾದ ಭಾರ್ತಿ ಏರ್ಟೆಲ್ ವಿಶ್ವದ ಅತಿದೊಡ್ಡ T20 ಕ್ರಿಕೆಟ್ ಪಂದ್ಯಾವಳಿಯ ದೃಷ್ಟಿಯಿಂದ ತನ್ನ ಗ್ರಾಹಕರಿಗೆ ವಿಶೇಷ ಪ್ಯಾಕ್ಗಳನ್ನು ಪರಿಚಯಿಸಿದೆ. ತಡೆರಹಿತ ಮತ್ತು ಅಡೆತಡೆಯಿಲ್ಲದ ವೀಕ್ಷಣೆಯ ಅನುಭವವನ್ನು ಖಚಿತಪಡಿಸಿಕೊಳ್ಳಲು, ಏರ್ಟೆಲ್ ತನ್ನ ಪ್ರಿಪೇಯ್ಡ್, ಪೋಸ್ಟ್‌ಪೇಯ್ಡ್, ಇಂಟರ್ನ್ಯಾಷನಲ್ ರೋಮಿಂಗ್, ಹೋಮ್ ಬ್ರಾಡ್‌ಬ್ಯಾಂಡ್ ಮತ್ತು ಏರ್ಟೆಲ್ ಡಿಜಿಟಲ್ ಟಿವಿ ಬಳಕೆದಾರರಿಗೆ ಭಾರತದಲ್ಲಿನ ವಿಶ್ವದ ಅತಿದೊಡ್ಡ T20 ಕ್ರಿಕೆಟ್ ಟೂರ್ನಮೆಂಟ್ನ ಅಧಿಕೃತ ಸ್ಟ್ರೀಮಿಂಗ್ ಪಾಲುದಾರ ಡಿಸ್ನಿ+ ಹಾಟ್‌ಸ್ಟಾರ್ಗೆ ಮೂರು ತಿಂಗಳ ಸಬ್ಸ್ಕ್ರಿಪ್ಷನ್ ಅನ್ನು ನೀಡುತ್ತಿದೆ.

T20 ಕ್ರಿಕೆಟ್ ಟೂರ್ನಮೆಂಟ್‌ಗಾಗಿ ಪ್ರಿಪೇಯ್ಡ್ ಪ್ಲಾನ್ ರೂ 499 ರಿಂದ ಪ್ರಾರಂಭ, ಇದು ಡಿಸ್ನಿ+ ಹಾಟ್‌ಸ್ಟಾರ್‌ಗೆ ಮೂರು ತಿಂಗಳ ಸಬ್‌ಸ್ಕ್ರಿಪ್ಷನ್ ನೊಂದಿಗೆ 28 ದಿನಗಳವರೆಗೆ ಹೆಚ್ಚಿನ ಸ್ಪೀಟ್‌ಬ 3ಜಿ ಡೇಟಾವನ್ನು ಒಳಗೊಂಡಿರುತ್ತದೆ. ಈ ಪ್ಲಾನ್, ಏರ್ಟೆಲ್ ಎಕ್ಸ್‌ಸ್ಟ್ರೀಮ್ ಪ್ಲೇನಲ್ಲಿ 20+ OTTಗಳನ್ನು ಉಚಿತವಾಗಿ ಅನ್ಲಾಕ್ ಮಾಡುತ್ತದೆ. ಆಫರ್‌ನಲ್ಲಿ 839 ಗಾಗಿ 84- ದಿನಗಳ ಪ್ಲಾನ್ ಸಹ ಇದೆ, ಅದು ದಿನಕ್ಕೆ 2ಜಿ ಡೇಟಾದೊಂದಿಗೆ ಇದೇ ರೀತಿಯ ಪ್ರಯೋಜನಗಳನ್ನು ಒದಗಿಸುತ್ತದೆ. ರೂ 3359 ರ ವಾರ್ಷಿಕ ಪ್ಲಾನ್ ಡಿಸ್ನಿ + ಹಾಟ್ ಸ್ಟಾರ್‌ಗೆ ಒಂದು ವರ್ಷದ ಚಂದಾದಾರಿಕೆಯನ್ನು ನೀಡುತ್ತದೆ ಜೊತೆಗೆ ಎಕ್ಸ್‌ಸ್ಟ್ರೀಮ್ ಆಪ್‌ನಲ್ಲಿ OTT ಪ್ಲಾಟ್ಫಾರ್ಮ್‌ಗೆ ಪ್ರವೇಶ ಮತ್ತು ದಿನಕ್ಕೆ 2.5ಜಿ ಡೇಟಾವನ್ನು ಸಹ ನೀಡುತ್ತದೆ.




ಪೋಸ್ಟ್‌ಪೇಯ್ಡ್ ಪ್ಲಾನ್ ಒಂದು ವರ್ಷದ ಡಿಸ್ನಿ+ ಹಾಟ್‌ಸ್ಟಾರ್ ಚಂದಾದಾರಿಕೆ ಜೊತೆಗೆ ಎಕ್ಸ್‌ಸ್ಟ್ರೀಮ್ ಆಪ್‌ನಲ್ಲಿ 20 OTT ಪ್ಲಾಟ್ಫಾರ್ಮ್ ಗಳಿಗೆ ಪ್ರವೇಶ, ಅನಿಯಮಿತ 5ಜಿ ಡೇಟಾ ಮತ್ತು ಫ್ಯಾಮಿಲಿ ಆಡ್-ಆನ್ ಪ್ರಯೋಜನಗಳೊಂದಿಗೆ ಬರುತ್ತವೆ. ರೂ 999, ರೂ 1498 ಮತ್ತು ರೂ 3999 ನಲ್ಲಿ ಹೆಚ್ಚಿನ ಸ್ಪೀಡ್ ಇಂಟರ್ನೆಟ್, ಮನರಂಜನೆ, ವೃತ್ತಿಪರ ಮತ್ತು ಇನ್ಫಿನಿಟಿ ಪ್ಲಾನ್ಗಳನ್ನು ಹುಡುಕುತ್ತಿರುವ ದೇಶೀಯ ಗ್ರಾಹಕರಿಗೆ ವ್ಯಾಪಕ ಶ್ರೇಣಿಯ ಸ್ಪೀಡ್ ಆಯ್ಕೆಗಳನ್ನು ನೀಡುತ್ತದೆ. ಹೆಚ್ಚುವರಿಯಾಗಿ, ಪ್ಲಾನ್ ಗಳು ಅನಿಯಮಿತ ಡಿಸ್ನಿ + ಹಾಟ್ ಸ್ಟಾರ್ ಚಂದಾದಾರಿಕೆ ಮತ್ತು ಇತರ ಪ್ರಯೋಜನಗಳನ್ನು ಸಹ ಒಳಗೊಂಡಿವೆ.

ಯುಎಸ್ ಮತ್ತು ಕೆನಡಾಕ್ಕೆ ಪ್ರಯಾಣಿಸುವ ಫ್ಯಾನ್ಸ್‌ಗಳಿಗೆ ಲೈವ್ ಪಂದ್ಯಗಳನ್ನು ವೀಕ್ಷಿಸಲು ಕಂಪನಿಯು ವಿಮಾನದೊಳಗಿನ ಸಂಪರ್ಕದೊಂದಿಗೆ ಅಂತರರಾಷ್ಟ್ರೀಯ ರೋಮಿಂಗ್ ಪ್ಯಾಕ್ಗಳನ್ನು ಸರಳಗೊಳಿಸಿದೆ, ಆದ್ದರಿಂದ ಅಭಿಮಾನಿಗಳು ಲೈವ್ ಸ್ಟ್ರೀಮ್ ಪಂದ್ಯಗಳನ್ನು ಅನುಮತಿಸಲು ಮತ್ತು ಅಂತರರಾಷ್ಟ್ರೀಯ ರೋಮಿಂಗ್ ಅನ್ನು ದಿನಕ್ಕೆ 133 ರಂತೆ ಆನಂದಿಸಲು, ದೇಶದಲ್ಲಿರುವ ಇತರೆ ಸಿಮ್‌ಗಳಿಗೆ ಹೋಲಿಸಿದರೆ ವೀಕ್ಷಣೆಯನ್ನು ಕೈಗೆಟುಕುವಂತೆ ಮಾಡಿದೆ.

## ತಲೆ ಹೊಟ್ಟಿನ ನಿವಾರಣೆಗೆ 'ಉಪಾಯ'

ಬ್ಯೂಟಿ ಟಿಪ್ಸ್



ತಲೆ ಹೊಟ್ಟನ್ನು ನಿವಾರಿಸಲು ಜನರು ಮಾಡುವ ಸರ್ಕಸ್ ಒಂದೆರಡಲ್ಲ. ಎಲ್ಲಾ ತರಹದ ರಾಸಾಯನಿಕ ವಸ್ತುಗಳನ್ನು ಬಳಸಿ ಇನ್ನಷ್ಟು ತೊಂದರೆಗೊಳಗಾಗುತ್ತಾರೆ. ಅದನ್ನು ಬಿಟ್ಟು ಸುಲಭವಾಗಿ ಮನೆಯಲ್ಲಿಯೇ ನೈಸರ್ಗಿಕವಾಗಿ ತಲೆ ಹೊಟ್ಟನ್ನು ನಿವಾರಿಸಿಕೊಳ್ಳಬಹುದು. ಸಾಮಾನ್ಯವಾಗಿ ಕೂದಲಿನ ಬುಡ ಒಣಗಿದಾಗ ತಲೆ ಹೊಟ್ಟಿನ ಸಮಸ್ಯೆ ಕಾಣಿಸಿಕೊಳ್ಳುತ್ತದೆ.ಆಗ ಕೂದಲಿಗೆ ಚೆನ್ನಾಗಿ ಎಣ್ಣೆ ಮಸಾಜ್ ಮಾಡುವುದರಿಂದ ತಲೆ ಹೊಟ್ಟು ನಿವಾರಣೆಯಾಗುತ್ತದೆ. ವಾರಕ್ಕೊಮ್ಮೆ ಮೊಟ್ಟೆಯ ಹಳದಿ ಭಾಗವನ್ನು ತಲೆಗೆ ಹಚ್ಚಿಕೊಂಡು 1 ಗಂಟೆಯ ನಂತರ ತೊಳೆಯುವುದರಿಂದ ತಲೆ ಹೊಟ್ಟು ನಿವಾರಣೆಯಾಗುವುದಲ್ಲದೇ ತಲೆ ಕೂದಲೂ ಸಹ ಸೊಂಪಾಗಿ ಬೆಳೆಯುತ್ತದೆ. ವಾರಕ್ಕೊಮ್ಮೆ ಲೋಳೆ ರಸವನ್ನು ತಲೆಗೆ ಹಚ್ಚಿ ಶ್ಯಾಂಪೂ ಬಳಸದೇ ಹಾಗೆಯೇ ತೊಳೆಯುವುದರಿಂದಲೂ ಸಹ ತಲೆಹೊಟ್ಟು ನಿವಾರಣೆಯಾಗುತ್ತದೆ. ತೆಂಗಿನಕಾಯಿಯ ರಸಕ್ಕೆ ಸ್ವಲ್ಪ ಬಿಸಿ ನೀರು ಮತ್ತು ನಿಂಬೆ ರಸವನ್ನು ಬೆರೆಸಿ ಹಚ್ಚುವುದರಿಂದ ತಲೆಹೊಟ್ಟು ನಿವಾರಣೆಯಾಗುತ್ತದೆ. ಮೆಂತ್ಯ ಸೊಪ್ಪಿನ ಪೇಸ್ಟ್ ನ್ನು ತಲೆಗೆ ಹಚ್ಚಿ 15 ನಿಮಿಷ ಬಿಟ್ಟು ತೊಳೆಯುವುದರಿಂದ ತಲೆಹೊಟ್ಟು ನಿವಾರಣೆಯಾಗಬಹುದು. 1 ಚಮಚ ಅಡುಗೆ ಸೋಡಾವನ್ನು ನೀರಿನಲ್ಲಿ ಬೆರೆಸಿ 5 ನಿಮಿಷದ ನಂತರ ಉಗುರು ಬೆಚ್ಚಗಿನ ನೀರಿನಲ್ಲಿ ತೊಳೆಯುವುದರಿಂದ ತಲೆಹೊಟ್ಟು ನಿವಾರಣೆಯಾಗುತ್ತದೆ. ಕೇವಲ ನಿಂಬೆ ರಸವನ್ನು ಕೂದಲ ಬುಡಕ್ಕೆ ಹಚ್ಚಿ ಸ್ನಾನ ಮಾಡುವುದರಿಂದ ತಲೆಹೊಟ್ಟು ನಿವಾರಣೆಯಾಗುತ್ತದೆ. ತಲೆಕೂದಲಿಗೆ ಮೆಹೆಂದಿ ಹಾಕುವುದರಿಂದಲೂ ತಲೆ ಹೊಟ್ಟಿನ ಸಮಸ್ಯೆ ನಿವಾರಣೆಯಾಗುತ್ತದೆ. ಹುಳಿ ಮೊಸರನ್ನು ತಲೆಬುಡಕ್ಕೆ ಹಚ್ಚಿ ಅರ್ಧ ಗಂಟೆಯ ನಂತರ ಸ್ನಾನ ಮಾಡುವುದರಿಂದ ತಲೆಹೊಟ್ಟು ನಿವಾರಣೆಯಾಗುತ್ತದೆ.



ಜಯಶ್ರೀ.ಬಿ.ಆರ್
ಖ್ಯಾತ ಜ್ಯೋತಿಷಿ
ದೂರವಾಣಿ–9964739507
www.jyotishyavaastu.com

## ರಾಶಿ ಭವಿಷ್ಯ

**ಮೇಷ:** ಪುಣ್ಯಕ್ಷೇತ್ರ ದರ್ಶನ, ಸೇವಕರಿಂದ ಸಹಾಯ, ಯತ್ನ ಕಾರ್ಯಾನುಕೂಲ, ಕಾರ್ಯಕ್ಷೇತ್ರದಲ್ಲಿ ಉತ್ತಮ ಬಾಂಧವ್ಯ.

**ವೃಷಭ:** ಸ್ವಯಂಕೃತ ಅಪರಾಧ, ರೋಗಭಾದೆ, ಬಂಧುಗಳಿಂದ ಕಿರಿಕಿರಿ, ಪರಸ್ಥಳವಾಸ, ನಾನಾ ರೀತಿಯ ಚಿಂತೆ.

**ಮಿಥುನ:** ಖರ್ಚುಗಳಿಗೆ ಕಡಿವಾಣ ಹಾಕಿ, ಮನಶಾಂತಿ, ಮಂಗಳ ಕಾರ್ಯಗಳಲ್ಲಿ ಭಾಗಿ, ಪ್ರಗತಿ.

**ಕಟಕ:** ವಾದ ವಿವಾದಗಳಲ್ಲಿ ಸೋಲು, ಯತ್ನಕಾರ್ಯ ಭಂಗ, ಧನವ್ಯಯ, ಅಕಾಲ ಭೋಜನ, ಚೋರಾಗ್ನಿ ಭೀತಿ.

**ಸಿಂಹ:** ಹೊಸ ವ್ಯಕ್ತಿಗಳ ಪರಿಚಯ,ಮನಸ್ಸಿನಲ್ಲಿ ಸಂಕಟ, ವಿನಾಕಾರಣ ನಿಷ್ಠುರ, ಕೆಟ್ಟ ಆಲೋಚನೆಯಿಂದ ಮೈಗಳ್ಳತನ.

**ಕನ್ಯಾ:** ಗೆಳತಿಗೆ ಸಹಾಯ ಮಾಡುವಿರಿ, ಕೆಲಸವನ್ನು ತಾಳ್ಮೆಯಿಂದ ನಿಭಾಯಿಸಿ, ಉದ್ಯೋಗದಲ್ಲಿ ಪ್ರಗತಿ

**ತುಲಾ:** ಅಧಿಕಾರಿಗಳಿಂದ ಪ್ರಶಂಸೆ, ದುಷ್ಟ ಜನರಿಂದ ದೂರವಿರಿ, ಸಲ್ಲದ ಅಪವಾದ, ಅನರ್ಥ

**ವೃಶ್ಚಿಕ :** ದೈನಂದಿನ ಕೆಲಸಗಳಲ್ಲಿ ಉತ್ಸಾಹ, ಅತಿಯಾದ ತಿರುಗಾಟ, ಮಿತ್ರರಲ್ಲಿ ಸ್ನೇಹ ವೃದ್ಧಿ, ವೈರಿಗಳಿಂದ ದೂರವಿರಿ.

**ಧನಸ್ಸು:** ಸಾಲ ಕೊಟ್ಟ ಹಣ ಬರುವುದು ಕಷ್ಟ,ಮನಕ್ಲೇಶ, ಅಪರಿಚಿತರ ಬಗ್ಗೆ ಜಾಗೃತರಾಗಿರಿ.

**ಮಕರ :** ಸ್ತ್ರೀ ಸಂಬಂಧ ಅಪವಾದಗಳಿಂದ ಮುಕ್ತಿ,ಮನಶಾಂತಿ, ಗೊಂದಲಗಳಿಂದ ಆದಷ್ಟು ದೂರವಿರಿ.

**ಕುಂಭ:** ಕೆಲಸ ಕಾರ್ಯಗಳಲ್ಲಿ ಅಡೆತಡೆ, ಅಭಿವೃದ್ಧಿ ಕುಂಠಿತ, ವಿಪರೀತ ಕೋಪ, ಹಿತಶತ್ರುಗಳಿಂದ ದೂರವಿರಿ.

**ಮೀನ:** ವ್ಯಾಪಾರದಲ್ಲಿ ನಷ್ಟ, ಕೈ ಕಾಲು ನೋವು, ನಿರುದ್ಯೋಗಿಗಳಿಗೆ ಉದ್ಯೋಗ, ಬಾಕಿ ಹಣ ಕೈ ಸೇರುವುದು.

## ಮೊಟ್ಟೆರೋಲ್



ಮೊಟ್ಟೆ ರೋಲ್ ದಿನವು ಪ್ರತಿ ವರ್ಷ ಜೂನ್ 10 ರಂದು ನಡೆಯುತ್ತದೆ. ಮೇನ್ಲ್ಯಾಂಡ್ ಚೈನೀಸ್ ಸ್ಪ್ರಿಂಗ್ ರೋಲ್ಗಳಂತೆಯೇ ಇದ್ದರೂ, ಎಗ್ ರೋಲ್ ಅದರ ವಿಷಯಗಳನ್ನು ಗರಿಗರಿಯಾದ, ದಪ್ಪವಾದ, ಮೊಟ್ಟೆ-ಮುಳುಗಿದ ಪೇಸ್ಟ್ರಿಯಲ್ಲಿ ಸುತ್ತಿ, ಎಲೆಕೋಸು, ಮಾಂಸ ಮತ್ತು ಭರ್ತಿ ಮಾಡುವ ಇತರ ಪದಾರ್ಥಗಳನ್ನು ಹೆಚ್ಚುವರಿ ರುಚಿಕರವಾಗಿಸುತ್ತದೆ! ಅದರ ಏಷ್ಯನ್ ಪರಂಪರೆಯೊಂದಿಗೆ, ಮೊಟ್ಟೆಯ ರೋಲ್ಗಳು ಪ್ರತಿ ವಿಯೆಟ್ನಾಮೀಸ್ ಮತ್ತು ಚೈನೀಸ್-ಅಮೇರಿಕನ್ ರೆಸ್ಟೊರೆಂಟ್ಗಳಲ್ಲಿ ತಮ್ಮ ದಾರಿಯನ್ನು ಕಂಡುಕೊಂಡಿವೆ. ವ್ಯಾನ್ಸ್ ಕಿಚನ್, ವ್ಯಾನ್ ಮತ್ತು ಕಿಮ್ ನ್ಗುಯೆನ್ ಅವರ ಸ್ಥಾಪಕರ ಗೌರವಾರ್ಥವಾಗಿ 2019 ರಲ್ಲಿ ಸ್ಥಾಪಿಸಲಾಯಿತು, ರಾಷ್ಟ್ರೀಯ ಮೊಟ್ಟೆ ರೋಲ್ ದಿನವು ತುಲನಾತ್ಮಕವಾಗಿ ಹೊಸ ಆಹಾರ ರಜಾದಿನವಾಗಿದೆ. ವ್ಯಾನ್ಸ್ ಕಿಚನ್ 1986 ರಲ್ಲಿ ಟೆಕ್ಸಾಸ್ನ ಡಲ್ಲಾಸ್ನಲ್ಲಿ ವಿಯೆಟ್ನಾಮೀಸ್-ವಿಷಯದ ರೆಸ್ಟೋರೆಂಟ್ನೊಂದಿಗೆ ಪ್ರಾರಂಭವಾಯಿತು, ಇದು ಕುಟುಂಬದ 'ಅಮೆರಿಕನ್ ಕನಸಿನ' ಅನ್ವೇಷಣೆಯ ಆರಂಭವನ್ನು ಪ್ರತಿನಿಧಿಸುತ್ತದೆ. ಇತರ ಅನೇಕ ವಲಸೆ ಕುಟುಂಬಗಳಂತೆ, ವ್ಯಾನ್ ಮತ್ತು ಕಿಮ್ ವಿಯೆಟ್ನಾಂನಿಂದ ಆಹಾರದ ಮೂಲಕ ತಮ್ಮ ಸಂಸ್ಕೃತಿಯನ್ನು ಹಂಚಿಕೊಳ್ಳುವ ಉತ್ಸಾಹದಿಂದ ಬಂದರು, ವಿಶೇಷವಾಗಿ ಅವರ ಅಧಿಕೃತ ಮೊಟ್ಟೆಯ ರೋಲ್ಗಳು – ಚೂರುಚೂರು ಎಲೆಕೋಸು, ಕೊಚ್ಚಿದ ಮಾಂಸ (ಸಾಮಾನ್ಯವಾಗಿ ಹಂದಿಮಾಂಸ), ಬಿದಿರಿನ ಚಿಗುರು, ಈರುಳ್ಳಿಗಳು ಮತ್ತು ಇತರವುಗಳನ್ನು ಒಳಗೊಂಡಿರುತ್ತದೆ. ಹೊಸದಾಗಿ ರುಬ್ಬಿದ ಮಸಾಲೆಗಳು ಎಲ್ಲಾ ಒಂದು ರುಚಿಕರವಾದ ಭರ್ತಿಯಾಗಿ ಮಿಶ್ರಣವಾಗಿದೆ. ತಾಜಾ ಪದಾರ್ಥಗಳನ್ನು ಮಾತ್ರ ಬಳಸಿಕೊಂಡು ತಮ್ಮ ಮೊಟ್ಟೆಯ ರೋಲ್ಗಳ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಅವರು ಶ್ರಮಿಸುತ್ತಾರೆ. ಭಕ್ಷ್ಯದ ಮೂಲವು ತಿಳಿದಿಲ್ಲವಾದರೂ, ಇದು ದಕ್ಷಿಣ ಚೀನಾದ ಕ್ಯಾಂಟೋನೀಸ್ ಪಾಕಪದ್ಧತಿಗೆ ಹಿಂತಿರುಗಬಹುದು. ಆದಾಗ್ಯೂ, ಅನೇಕ ಏಷ್ಯನ್ ದೇಶಗಳು ವಿನಮ್ರ ಮೊಟ್ಟೆಯ ರೋಲ್ನ ವಿಭಿನ್ನ ಮಾರ್ಪಾಡುಗಳನ್ನು ಹೊಂದಿವೆ ಎಂದು ಹೇಳಿಕೊಳ್ಳುತ್ತವೆ. ಚಾಪ್ ಸೂಯ್: ಯುನೈಟೆಡ್ ಸ್ಟೇಟ್ಸ್ನಲ್ಲಿ ಚೈನೀಸ್ ಆಹಾರದ ಸಾಂಸ್ಕೃತಿಕ ಇತಿಹಾಸ ದ ಲೇಖಕ ಆಂಡ್ರ್ಯೂ ಕೋ ಪ್ರಕಾರ, ಆಧುನಿಕ ಮೊಟ್ಟೆಯ ರೋಲ್ ಅನ್ನು 1930 ರ ದಶಕದಲ್ಲಿ ನ್ಯೂಯಾರ್ಕ್ನಲ್ಲಿ ಹೆಚ್ಚಾಗಿ ಕಂಡುಹಿಡಿಯಲಾಯಿತು. ಪ್ರಾಚೀನ ದಕ್ಷಿಣ ಚೀನೀ ಸಾಂಪ್ರದಾಯಿಕ ರೋಲ್ಗಳಿಗೆ ಹೋಲಿಸಿದರೆ, 1800 ರ ದಶಕದ ಮಧ್ಯಭಾಗದಿಂದ ಅಮೆರಿಕನ್ನರು ಮೊಟ್ಟೆಯ ರೋಲ್ ತರಹದ ಆಹಾರವನ್ನು ಸೇವಿಸುತ್ತಿದ್ದಾರೆ. ವಿಶಿಷ್ಟವಾದ ಅಮೇರಿಕನ್-ಶೈಲಿಯ ಎಗ್ ರೋಲ್ ರೆಸಿಪಿಯನ್ನು ಮೊದಲು 1938 ರಲ್ಲಿ ಬಾಣಸಿಗ ಹೆನ್ರಿ ಲೋ ಪ್ರಕಟಿಸಿದರು.

ಸಂಜೆ ಮುಗಿಲು
ಸೋಮವಾರ
10.6.2024



## ಗಾಝಾ ಮೇಲೆ ಇಸ್ರೇಲ್ ಅತಿದೊಡ್ಡ ಕಾರ್ಯಾಚರಣೆ: ಮಕ್ಕಳು ಸೇರಿದಂತೆ 210 ಫೆಲೆಸ್ತೀನೀಯರು ನಿಧನ



**ಗಾಜಾ:** ಹಮಾಸ್ ಜೊತೆಗಿನ ಯುದ್ಧ ಪ್ರಾರಂಭವಾದ ಬಳಿಕ ಒತ್ತೆಯಾಳುಗಳನ್ನು ರಕ್ಷಿಸಲು ಇಸ್ರೇಲ್ ಅತಿದೊಡ್ಡ ಕಾರ್ಯಾಚರಣೆಯನ್ನು ಪ್ರಾರಂಭಿಸಿತು. ಮಧ್ಯ ಗಾಝಾದಲ್ಲಿ ನಡೆದ ಭೀಕರ ಹೋರಾಟದ ಮಧ್ಯೆ ಅಪಹರಣಕಾರರ ಬಂಧನದಿಂದ ನಾಲ್ವರು ಇಸ್ರೇಲಿಗಳನ್ನು ರಕ್ಷಿಸಲಾಗಿದೆ.

ಗಾಜಾದ ಆರೋಗ್ಯ ಸಚಿವಾಲಯದ ಪ್ರಕಾರ, ಒತ್ತೆಯಾಳುಗಳನ್ನು ರಕ್ಷಿಸಿದ ಕೇಂದ್ರ ಗಾಜಾದ ಸ್ಥಳದಲ್ಲಿ ಶನಿವಾರ ನಡೆದ ಭೀಕರ ಹೋರಾಟದಲ್ಲಿ ಮಕ್ಕಳು ಸೇರಿದಂತೆ ಕನಿಷ್ಠ 210 ಪ್ಯಾಲೆಸ್ಟಿನಿಯಾದವರು ಸಾವನ್ನಪ್ಪಿದ್ದಾರೆ.

ಅಕ್ಟೋಬರ್ 7ರಂದು ಫೆಲೆಸ್ತೀನ್ ಉಗ್ರಗಾಮಿ ಗುಂಪು ಹಮಾಸ್ ದಾಳಿ ನಡೆಸಿ ಈ ವ್ಯಕ್ತಿಗಳನ್ನು ಅಪಹರಿಸಿತ್ತು. ನುಸಿರಾತ್ನಲ್ಲಿ ನಡೆದ ಸಂಕೀರ್ಣ ಕಾರ್ಯಾಚರಣೆಯಲ್ಲಿ ನೋವಾ ಅರ್ಗಮಾನಿ (25), ಅಲ್ಮೋಗ್ ಮಿರ್ (21), ಆಂಡ್ರೆ ಕೊಜ್ಲೋವ್ (27) ಮತ್ತು ಶ್ಲೋಮಿ ಜಿವ್ (40) ಅವರನ್ನು ಬಿಡುಗಡೆ ಮಾಡಲಾಗಿದೆ ಎಂದು ಇಸ್ರೇಲ್ ಸೇನೆ ತಿಳಿಸಿದೆ.

ನುಸ್ಸೀರತ್ ನ ಮಧ್ಯಭಾಗದಲ್ಲಿರುವ ಎರಡು ಪ್ರತ್ಯೇಕ ಸ್ಥಳಗಳಿಂದ ಒತ್ತೆಯಾಳುಗಳನ್ನು ರಕ್ಷಿಸಲಾಗಿದೆ ಮತ್ತು ಅವರೆಲ್ಲರೂ ಚೆನ್ನಾಗಿದ್ದಾರೆ ಎಂದು ಅದು ಹೇಳಿದೆ.

ರಕ್ಷಿಸಲಾದ ನಾಲ್ವರು ಒತ್ತೆಯಾಳುಗಳನ್ನು ವೈದ್ಯಕೀಯ ಪರೀಕ್ಷೆಗಳಿಗಾಗಿ ಹೆಲಿಕಾಪ್ಟರ್ ಮೂಲಕ ಕರೆದೊಯ್ಯಲಾಯಿತು ಮತ್ತು 246 ದಿನಗಳ ಸೆರೆವಾಸದ ನಂತರ ಪ್ರೀತಿಪಾತ್ರರೊಂದಿಗೆ ಮತ್ತೆ ಸೇರಿದರು ಎಂದು ಇಸ್ರೇಲ್ ಮಿಲಿಟರಿ ತಿಳಿಸಿದೆ.

## ಛತ್ತೀಸಗಢದಲ್ಲಿ ಎನ್‌ಕೌಂಟರ್‌ಗೆ ಮಹಿಳೆಯರೂ ಸೇರಿ 6 ನಕ್ಸಲರ ಬಲಿ

ರಾಯಪುರ: ನಕ್ಸಲ್ಪೀಡಿತ ಛತ್ತೀಸಗಢ ರಾಜ್ಯದಲ್ಲಿ ಸತತ ಮೂರು ದಿನಗಳಿಂದ ನಕ್ಸಲರು ಹಾಗೂ ಭದ್ರತಾ ಪಡೆಯ ನಡುವೆ ನಡೆಯುತ್ತಿರುವ ಘರ್ಷಣೆಯಲ್ಲಿ ಆರು ಮಂದಿ ನಕ್ಸಲರು ಹತರಾಗಿದ್ದಾರೆ. ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಕೂಡ ಗಾಯಗೊಂಡಿದ್ದಾರೆ. ನಕ್ಸಲ್ ಸಮಸ್ಯೆಯಿಂದ ಬಾಧಿತವಾಗಿರುವ ಬಸ್ತಾರ್ ವಿಭಾಗದ ನಾರಾಯಣಪುರ ಜಿಲ್ಲೆಯಲ್ಲಿ ಶುಕ್ರವಾರದಿಂದ ನಡೆದಿದ್ದ ಘರ್ಷಣೆ ಭಾನುವಾರವೂ ಮುಂದುವರಿದಿದೆ.

ಈ ವೇಳೆ ಭದ್ರತಾ ಸಿಬ್ಬಂದಿಯ ಗುಂಡೇಟಿಗೆ ಮೂವರು ಮಹಿಳಾ ನಕ್ಸಲ್ ಕಾರ್ಯಕರ್ತರೂ ಸೇರಿ ಆರು ಮಂದಿ ಹತರಾಗಿದ್ದಾರೆ. ಅವರ ದೇಹಗಳನ್ನು ಪಡೆಯಲಾಗಿದೆ. ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಾಗಿದೆ.

ನಾರಾಯಣಪುರ ಜಿಲ್ಲೆಯ ಹಲವು ಭಾಗ ಅರಣ್ಯ ಪ್ರದೇಶದಿಂದ ಕೂಡಿದೆ. ಈ ಭಾಗದಲ್ಲಿ ಕೈಗೊಂಡಿರುವ ಗಣಿಗಾರಿಕೆ, ಅರಣ್ಯ ನಾಶ, ಗಿರಿಜನರ ಒಕ್ಕಲೆಬ್ಬಿಸುವಿಕೆ ಸೇರಿದಂತೆ ಹಲವಾರು ವಿಷಯಗಳಲ್ಲಿ ಹೋರಾಟಗಳು ನಡೆದಿವೆ. ಆದರೆ ಪೀಪಲ್ಸ್ ಲಿಬರೇಷನ್ ಗೊರಿಲ್ಲಾ ಆರ್ಮಿ ಹಲವಾರು ವರ್ಷಗಳಿಂದ ಹೋರಾಟ ನಡೆಸುತ್ತಿದೆ. ಇದು



ನಕ್ಸಲ್ ಚಟುವಟಿಕೆ ತೀವ್ರಗೊಳ್ಳಲು ಕಾರಣವಾಗಿದೆ. ಆಗಾಗ ಸಂಘರ್ಷಗಳು ನಡೆದುಕೊಂಡು ಬಂದಿವೆ.

ಈ ನಡುವೆ ನಕ್ಸಲರು ನಾರಾಯಣಪುರ ಜಿಲ್ಲೆಯ ಗೋಬೆಲ್ ಹಾಗೂ ತುಲ್ತುಲಿ ಎಂಬ ಹಳ್ಳಿಗಳ ಸಮೀಪದಲ್ಲಿ ಹಣ ಹಾಗೂ ಶಸ್ತ್ರಾಸ್ತ್ರ ಸಾಗಿಸುತ್ತಿದ್ದಾರೆ ಎನ್ನುವ ಮಾಹಿತಿ ಮೇರೆಗೆ ಭದ್ರತಾ ಸಿಬ್ಬಂದಿ ದಾಳಿ ನಡೆಸಿದ್ದರು. ಆರ್ಚಾ ಠಾಣೆ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ಚುರುಕುಗೊಂಡಿತ್ತು. ಈ ವೇಳೆ ಇಂಡೋ ಟಿಬೆಟಿಯನ್ ಬಾರ್ಡರ್ ಪೊಲೀಸ್ ಹಾಗೂ ಸಿಆರ್‌ಪಿಎಫ್ನ ಪೊಲೀಸರು ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ದಾಳಿ ನಡೆಸಿದ್ದರು

## ಮೋದಿ ನಾಯಕತ್ವದಲ್ಲಿ ಅಭಿವೃದ್ಧಿ ಕಂಡ ಭಾರತ: ಭೂತಾನ್ ಪ್ರಧಾನಿ ತೊಬ್ಗೇ



**ದೆಹಲಿ:** ಕಳೆದ 10 ವರ್ಷಗಳಲ್ಲಿ ಭಾರತವು ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಅದ್ಭುತವಾಗಿ ಮುಂದುವರಿದಿದೆ ಎಂದು ಭೂತಾನ್ ಪ್ರಧಾನಿ ತ್ಶೆರಿಂಗ್ ತೊಬ್ಗೇ ಶ್ಲಾಘಿಸಿದ್ದಾರೆ. ಮೋದಿಯವರ ಪ್ರಮಾಣ ವಚನ ಸಮಾರಂಭದಲ್ಲಿ ಪಾಲ್ಗೊಳ್ಳಲು ಭಾರತಕ್ಕೆ ಬಂದಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು. ವಿದೇಶಾಂಗ ನೀತಿಯನ್ನು ಪ್ರಧಾನಿ ಮೋದಿಯವರ ನಾಯಕತ್ವದ ದೊಡ್ಡ ಸಾಧನೆಗಳಲ್ಲಿ ಒಂದು. ಅದೇ ರೀತಿ ಮೂಲಸೌಕರ್ಯಗಳಾದ ವಿಮಾನ ನಿಲ್ದಾಣಗಳು, ರಸ್ತೆಗಳು, ರೈಲುಗಳು ಮತ್ತು ಸಮುದ್ರಮಾರ್ಗಗಳಲ್ಲಿ ಅಭೂತಪೂರ್ವ ಅಭಿವೃದ್ಧಿಯನ್ನು ಕಂಡಿದೆ ಎಂದು ಭೂತಾನ್ ಪ್ರಧಾನಿ ತ್ಶೆರಿಂಗ್ ತೊಬ್ಗೇ ಹೇಳಿದರು. ನರೇಂದ್ರ ಮೋದಿ ಅವರು ಐತಿಹಾಸಿಕ ಮೂರನೇ ಬಾರಿಗೆ ಭಾರತದ ಪ್ರಧಾನಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಬಹುನಿರೀಕ್ಷಿತ ಸಮಾರಂಭದಲ್ಲಿ ಭಾಗವಹಿಸಲು ಸಜ್ಜಾಗಿರುವ ಗಣ್ಯ ಅತಿಥಿಗಳಲ್ಲಿ ಪಿಎಂ ತೊಬ್ಗೇ ಕೂಡ ಸೇರಿದ್ದಾರೆ.

## ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಸ್ಥಾನ ತೊರೆದ ಜೆ.ಪಿ ನಡ್ಡಾ



**ನವದೆಹಲಿ:** ಲೋಕಸಭಾ ಚುನಾವಣೆ ಫಲಿತಾಂಶದ ಬಳಿಕ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಜೆಪಿ ನಡ್ಡಾ ರಾಜೀನಾಮೆ ನೀಡಿದ್ದಾರೆ. ಜೆಪಿ ನಡ್ಡಾ ಪ್ರಧಾನಿ ನರೇಂದ್ರ ಮೋದಿ ಅವರ ಸಂಪುಟದಲ್ಲಿ ಸಚಿವರಾಗಿ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆಯಿರುವುದರಿಂದ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ ಎಂದು ವರದಿಯಾಗಿದೆ.ಅವರ ಅಧಿಕಾರಾವಧಿ ಇದೇ ತಿಂಗಳು ಮುಕ್ತಾಯಗೊಳ್ಳಲಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಜೆಪಿ ನಡ್ಡಾ ರಾಜೀನಾಮೆ ನೀಡಿದ್ದು, ಮುಂದೆ ಅವರ ಸ್ಥಾನಕ್ಕೆ ಯಾರನ್ನು ಆಯ್ಕೆ ಮಾಡಲಾಗುತ್ತದೆ ಎಂಬುವುದನ್ನು ಕಾದು ನೋಡಬೇಕಿದೆ.

## ಡೆನ್ಮಾರ್ಕ್ ಪ್ರಧಾನಿ ಮೆಟ್ಟೆ ಫ್ರೆಡೆರಿಕ್ಸನ್ ಮೇಲಿನ ಹಲ್ಲೆ ಖಂಡಿಸಿದ ನರೇಂದ್ರ ಮೋದಿ



**ದೆಹಲಿ:** ಡೆನ್ಮಾರ್ಕ್ ಪ್ರಧಾನಿ ಮೆಟ್ಟೆ ಫ್ರೆಡೆರಿಕ್ಸನ್ ಮೇಲೆ ನಡೆದ ಹಲ್ಲೆಯನ್ನು ನಿಯೋಜಿತ ಪ್ರಧಾನಿ ನರೇಂದ್ರ ಮೋದಿ ಖಂಡಿಸಿದ್ದಾರೆ.

ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, 'ಡೆನ್ಮಾರ್ಕ್ ಪ್ರಧಾನಿ ಮೆಟ್ಟೆ ಫ್ರೆಡೆರಿಕ್ಸನ್ ಅವರ ಮೇಲಿನ ಹಲ್ಲೆಯನ್ನು ಖಂಡಿಸುತ್ತೇವೆ.ನನ್ನ ಸ್ನೇಹಿತನಿಗೆ ಉತ್ತಮ ಆರೋಗ್ಯವನ್ನು ಬಯಸುತ್ತೇವೆ' ಎಂದಿದ್ದಾರೆ. ಡೆನ್ಮಾರ್ಕ್ ಪ್ರಧಾನಿ ಮೆಟ್ಟೆ ಫ್ರೆಡೆರಿಕ್ಸನ್ ಮೇಲೆ ಹಲ್ಲೆ ನಡೆದಿದ್ದು, ಸಣ್ಣ ಪ್ರಮಾಣದ ಗಾಯ ಆಗಿದೆ ಎಂದು ಅವರ ಕಚೇರಿಯ ಪ್ರಕಟಣೆ ತಿಳಿಸಿದೆ.

ಕುತ್ತಿಗೆ ಸಣ್ಣದಾಗಿ ಉಳುಕಿರುವುದು ಹೊರತುಪಡಿಸಿದರೆ ಪ್ರಧಾನಿ ಆರೋಗ್ಯವಾಗಿಯೇ ಇದ್ದಾರೆ. ಆದರೆ ಘಟನೆಯಿಂದ ಅವರು ಆಘಾತಗೊಂಡಿದ್ದಾರೆ ಎಂದು ಹೇಳಿದೆ.

ಶುಕ್ರವಾರ ಸಂಜೆ ಕೋಪನ್ಹೇಗನ್ ಸ್ಕ್ವೇರ್‌ನಲ್ಲಿ ವ್ಯಕ್ತಿಯೊಬ್ಬ ಪ್ರಧಾನಿ ಅವರನ್ನು ಬಲವಾಗಿ ತಳ್ಳಿದ್ದನು. ಹಲ್ಲೆಗೈದ 39 ವರ್ಷದ ವ್ಯಕ್ತಿಯನ್ನು ಬಂಧಿಸಲಾಗಿದ್ದು, ಶನಿವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

## ಅಮೆರಿಕನ್ನರ ಬಟ್ಟೆ ಒಣಗಿಸುವ ರೀತಿಗೆ ಇಂಟ್ರೆಸ್ಟಿಂಗ್ ಕಮೆಂಟ್ಸ್!

**ಅಮೆರಿಕ:** ಭಾರತೀಯರು ತೆರೆದ ಅಂಗಳ ಮತ್ತು ಬಾಲ್ಕನಿಗಳಲ್ಲಿ ಹಗ್ಗ/ ತಂತಿ ಮೇಲೆ ಬಟ್ಟೆಗಳನ್ನು ಹಾಕಿ ಅವುಗಳನ್ನು ಒಣಗಿಸುತ್ತಾರೆ. ಇಂತಹ ವಿಧಾನವೇನೂ ಇಲ್ಲಿ ವಿಶೇಷವೆನಿಸಲ್ಲ. ಆದರೆ ಪಾಶ್ಚಿಮಾತ್ಯ ದೇಶಗಳಲ್ಲಿ ಇಂತಹ ದೃಶ್ಯ ಕಂಡುಬರುವುದಿಲ್ಲ. ಆದರೆ ಅಮೆರಿಕನ್ನರು ಬಟ್ಟೆ ಒಣಗಿಸಲೆಂದೇ ಹಗ್ಗ ಕಟ್ಟಿ ಅದರ ಮೇಲೆ ಬಟ್ಟೆ ಒಣಗಿಸುವುದನ್ನು ಕಂಡುಹಿಡಿದಿದ್ದಾರೆಂದು ಹೇಳಲಾದ ಹಳೆಯ ಪೋಸ್ಟ್ ವೈರಲ್ ಆಗುತ್ತಿದೆ. ಥಾಮಸ್ ವೈಲೆಸ್ ಎಂಬ ಖಾತೆಯಿಂದ ಹಳೆಯ ರೆಡ್ಡಿಟ್ ಪೋಸ್ಟ್ ಅನ್ನು ಪುನಃ ಪೋಸ್ಟ್ ಮಾಡಲಾಗಿದೆ. ಒಣಗಲು ಬಟ್ಟೆಗಳನ್ನು ನೇತುಹಾಕುವುದು. ವಿದ್ಯುತ್ ಬಿಲ್ಗಳಲ್ಲಿ ವರ್ಷಕ್ಕೆ ನೂರು ಅಥವಾ ಹೆಚ್ಚಿನದನ್ನು ಉಳಿಸಿ.'' ಎಂದು ಪೋಸ್ಟ್ ಗೆ ಶೀರ್ಷಿಕೆ ನೀಡಿದ್ದಾರೆ. ಇದು ಪಾಶ್ಚಿಮಾತ್ಯ ದೇಶಗಳ ನಿವಾಸಿಗರ ಗಮನ ಸೆಳೆದಿದ್ದು, ನಾನು ಅಮೆರಿಕನ್ನರನ್ನು ತುಂಬಾ ಪ್ರೀತಿಸುತ್ತೇನೆ ಎಂದು ಕೆಲವರು ಕಮೆಂಟ್ ಮಾಡಿದ್ದಾರೆ. ಹೆಚ್ಚಿನ ಟೀಕೆಗಳು ಉಲ್ಲಾಸದಾಯಕವಾಗಿದ್ದು ಪಾಶ್ಚಿಮಾತ್ಯರನ್ನು ಗೇಲಿ ಮಾಡುವಂತಿವೆ. ''ಅಮೆರಿಕನ್ನರು ಬಟ್ಟೆ ಒಣಗಿಸುವ ಬಗ್ಗೆ ಕಲಿತರೆ ನಾವು ಹವಾಮಾನ ಬದಲಾವಣೆಯನ್ನು ಪರಿಹರಿಸಬಹುದು.'' ಎಂದಿದ್ದಾರೆ. ''ವಾವ್, ಇದು ಹೊಸ ತಂತ್ರಜ್ಞಾನ'' ಎಂದು ಕೆಲವರು ಬರೆದಿದ್ದಾರೆ.




## ಟ್ರಾಫಿಕ್ ಜಾಮ್; ಮೋದಿ ಚಹಾ ಕೂಟಕ್ಕೆ ಕಾರು ಬಿಟ್ಟು ಓಡಿಕೊಂಡೇ ಹೋದ ಬಿಜೆಪಿ ನಾಯಕ



**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ಮೂರನೇ ಬಾರಿ ಪ್ರಮಾಣವಚನ ಸ್ವೀಕರಿಸುತ್ತಿರುವ ಹಿನ್ನೆಲೆ ಇದಕ್ಕೂ ಮುನ್ನ ಮಧ್ಯಾಹ್ನ ಎನ್ಡಿಎ ನಾಯಕರೊಂದಿಗೆ ಚಹಾ ಕೂಟವನ್ನು ಆಯೋಜಿಸಿದ್ದರು. ಈ ಕೂಟಕ್ಕೆ ಆಗಮಿಸುತ್ತಿದ್ದ ವೇಳೆ ಬಿಜೆಪಿ ನಾಯಕರೊಬ್ಬರು ಟ್ರಾಫಿಕ್ ಜಾಮ್ನಲ್ಲಿ ಸಿಲುಕಿದ್ದು, ಕೂಟಕ್ಕೆ ತಡವಾಗುತ್ತಿದ್ದ ಹಿನ್ನೆಲೆ ಅವರು ಕಾಲ್ನಡಿಗೆಯಲ್ಲೇ ಆಗಮಿಸಿರುವ ಘಟನೆ ನಡೆದಿದೆ.

ಬಿಜೆಪಿ ನಾಯಕ ರವನೀತ್ ಸಿಂಗ್ ಬಿಟ್ಟು ಅವರ ಕಾರು ಟ್ರಾಫಿಕ್ನಲ್ಲಿ ಸಿಲುಕಿದ್ದ ಹಿನ್ನೆಲೆ ಪ್ರಧಾನಿ ಅಧಿಕೃತ ನಿವಾಸದ ಕಡೆಗೆ ಓಡಿಕೊಂಡು ಹೋಗಿರುವ ದೃಶ್ಯಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಈ ಬಗ್ಗೆ ಮಾಧ್ಯಮದವರೊಂದಿಗೆ ಮಾತನಾಡಿದ ಬಿಟ್ಟು, ಪ್ರಧಾನಿ ಮೋದಿಯವರ ಸಭೆಗೆ ಯಾರು ಕೂಡಾ ತಡವಾಗಿ ಬರಬಾರದು. ತಾವು ಕೂಡಾ ತಡವಾಗಿ ತಲುಪಲು ಬಯಸಲ್ಲ ಎಂದು ಹೇಳಿದ್ದಾರೆ.

## ಫ್ರಾನ್ಸ್‌ಗೆ ತೆರಳುತ್ತಿದ್ದ ವಿಮಾನದಲ್ಲಿ ಬೆಂಕಿ: 389 ಪ್ರಯಾಣಿಕರು, 13 ಸಿಬ್ಬಂದಿ ಪ್ರಾಣಾಪಾಯದಿಂದ ಪಾರು

**ಟೊರೊಂಟೊ:** ಕೆನಡಾದ ಟೊರೊಂಟೊ ಪಿಯರ್ಸನ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬೋಯಿಂಗ್ 777 ವಿಮಾನದಲ್ಲಿ ಬೆಂಕಿ ಹೊತ್ತಿಕೊಂಡ ಘಟನೆ ನಡೆದಿದೆ.

389 ಪ್ರಯಾಣಿಕರು ಹಾಗೂ 13 ಸಿಬ್ಬಂದಿಯೊಂದಿಗೆ ಬೋಯಿಂಗ್ 777 ವಿಮಾನ ಟೇಕಾಫ್ ಆಗಿತ್ತು. ರಾತ್ರಿ 12 ಗಂಟೆ 17 ನಿಮಿಷಕ್ಕೆ ಟೇಕಾಫ್ ಆಗಿ ಫ್ರಾನ್ ಗೆ ತೆರಳುತ್ತಿತ್ತು.

ಟೇಕಾಫ್ ಆದ ಕೆಲವೇ ನಿಮಿಷಗಳಲ್ಲಿ ವಿಮಾನದ ಹೊರ ಭಾಗದ ಬಲಗಡೆ ಶಾರ್ಟ್ ಸರ್ಕ್ಯೂಟ್ ರೀತಿಯಲ್ಲಿ ಬೆಂಕಿ ಚಿಮ್ಮಿದೆ. ಬಲಭಾಗದಲ್ಲಿದ್ದ ವಿಮಾನದ ಇಂಜಿನ್ ಸುಟ್ಟು ಹೋಗುತ್ತಿದ್ದರಿಂದ ಬೆಂಕಿ ಕಾಣಿಸಿಕೊಂಡಿದೆ.

ಇದರಿಂದ ಗಾಬರಿಗೊಂಡ ಒಳಗಿದ್ದ ಸಿಬ್ಬಂದಿ ಹಾಗೂ ಪ್ರಯಾಣಿಕರು ಪ್ಯಾನ್, ಪ್ಯಾನ್ ಎಂದು ಕೂಗಿಕೊಂಡಿದ್ದರಿಂದ ಪೈಲೆಟ್ಗಳು ಜಾಗ್ರತರಾಗಿ ರಾತ್ರಿ 12 ಗಂಟೆ 39 ನಿಮಿಷಕ್ಕೆ ಮತ್ತೆ ಅದೇ ವಿಮಾನ ನಿಲ್ದಾಣದಲ್ಲೇ ವಾಪಸ್ ಲ್ಯಾಂಡ್ ಮಾಡಿದ್ದಾರೆ.ಸದ್ಯ 389 ಪ್ರಯಾಣಿಕರು ಮತ್ತು 13 ಸಿಬ್ಬಂದಿಯೆಲ್ಲ ಪ್ರಾಣಾಪಾಯದಿಂದ ಪಾರಾಗಿದ್ದು ದೊಡ್ಡ ಅನಾಹುತವೊಂದು ತಪ್ಪಿದೆ ಎಂದು ಹೇಳಲಾಗಿದೆ. ಪೈಲಟ್‌ಗಳು ಮತ್ತು ಅವರ ಏರ್ ಟ್ರಾಫಿಕ್ ಕಂಟ್ರೋಲರ್‌ಗಳ ಅದ್ಭುತ ಕೆಲಸಕ್ಕೆ ಸೋಶಿಯಲ್ ಮೀಡಿಯಾದಲ್ಲಿ ಜನರು ಮೆಚ್ಚುಗೆ ಸೂಚಿಸುತ್ತಿದ್ದಾರೆ.



## ಉಕ್ರೇನ್‌ನಲ್ಲಿ ಗೆಲುವಿಗೆ ಪರಮಾಣು ಶಸ್ತ್ರಾಸ್ತ್ರ ಬಳಕೆ ಅಗತ್ಯವಿಲ್ಲ: ಪುಟಿನ್

**ಮಾಸ್ಕೋ:** ಉಕ್ರೇನ್‌ನಲ್ಲಿ ರಶ್ಯದ ಗೆಲುವಿಗೆ ಪರಮಾಣು ಶಸ್ತ್ರಾಸ್ತ್ರ ಬಳಸುವ ಅಗತ್ಯವಿಲ್ಲ ಎಂದು ರಶ್ಯ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಶುಕ್ರವಾರ ಹೇಳಿದ್ದಾರೆ.ಆದರೆ ಉಕ್ರೇನ್ ವಿರುದ್ಧ ಪರಮಾಣು ಶಸ್ತ್ರಾಸ್ತ್ರ ಬಳಸುವುದಿಲ್ಲ ಎಂಬ ಬಗ್ಗೆ ರಶ್ಯ ಅಧ್ಯಕ್ಷರಿಂದ ಇನ್ನೂ ಸ್ಪಷ್ಟ ಹೇಳಿಕೆ ಹೊರಬಿದ್ದಿಲ್ಲ. ಇತ್ತೀಚಿನ ದಿನಗಳಲ್ಲಿ



ರಶ್ಯ ಪಡೆಗಳು ಪೂರ್ವ ಉಕ್ರೇನ್ನಲ್ಲಿ ಮುನ್ನಡೆ ಸಾಧಿಸಿವೆ. ಸಂಪೂರ್ಣ ಗೆಲುವಿಗೆ ಪರಮಾಣು ಶಸ್ತ್ರಾಸ್ತ್ರ ಬಳಸುವ ಯೋಜನೆಯಿದೆಯೇ ಎಂಬ ಪ್ರಶ್ನೆಗೆ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಪುಟಿನ್ ' ಇಂತಹ ಶಸ್ತ್ರಾಸ್ತ್ರ ಬಳಸಬೇಕಾದ ಪರಿಸ್ಥಿತಿ ಕಾಣುವುದಿಲ್ಲ. ಆದ್ದರಿಂದ ಜನರು ಪರಮಾಣು ವಿಷಯ ಚರ್ಚಿಸುವುದನ್ನು ನಿಲ್ಲಿಸಬೇಕೆಂದು ಕೋರುತ್ತೇನೆ' ಎಂದರು. ಆದರೆ ಯಾವ ಪರಿಸ್ಥಿತಿಯಲ್ಲಿ ಪರಮಾಣು ಶಸ್ತ್ರಾಸ್ತ್ರಗಳನ್ನು ಬಳಸಬಹುದು ಎಂದು ಸೂಚಿಸುವ ರಶ್ಯದ ಪರಮಾಣು ನೀತಿಯಲ್ಲಿ ಬದಲಾವಣೆಯ ಸಾಧ್ಯತೆಯನ್ನು ನಿರಾಕರಿಸಲಾಗದು ಎಂದು ಪುಟಿನ್ ಹೇಳಿದ್ದಾರೆ. ಅಗತ್ಯವಿದ್ದರೆ ರಶ್ಯ ಪರಮಾಣು ಅಸ್ತ್ರವನ್ನು ಪರೀಕ್ಷಿಸಬಹುದು, ಆದರೆ ಪ್ರಸ್ತುತ ಅದರ ಅಗತ್ಯ ಕಾಣುವುದಿಲ್ಲ. ದೇಶದ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಗೆ ಅಪಾಯದ ಸಂದರ್ಭದಲ್ಲಿ ಈ ಬಗ್ಗೆ ಯೋಚಿಸಬಹುದು ಎಂದರು. ರಶ್ಯದ ವಿರುದ್ಧದ ಯುದ್ಧದಲ್ಲಿ ರಶ್ಯದೊಳಗೆ ಅಮೆರಿಕದ ಶಸ್ತ್ರಾಸ್ತ್ರಗಳ ಬಳಕೆಗೆ ಇರುವ ಕೆಲವು ನಿರ್ಬಂಧಗಳನ್ನು ಸಡಿಲಗೊಳಿಸುವುದಾಗಿ ಕಳೆದ ವಾರ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಹೇಳಿದ್ದರು.



## ಲಿಬಿಯಾ ಸಮುದ್ರದಲ್ಲಿ ಮುಳುಗಿದ ದೋಣಿ: 11 ಮೃತದೇಹ ಪತ್ತೆ

**ಲಿಬಿಯಾ:** ಲಿಬಿಯಾ ಕರಾವಳಿಯ ಬಳಿ ಸಮುದ್ರದಲ್ಲಿ ಮುಳುಗುತ್ತಿದ್ದ ದೋಣಿಯಲ್ಲಿದ್ದ 160ಕ್ಕೂ ಅಧಿಕ ವಲಸಿಗರನ್ನು ರಕ್ಷಿಸಲಾಗಿದೆ. ಆದರೆ 11 ವಲಸಿಗರು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದು ಅವರ ಮೃತದೇಹಗಳನ್ನು ಪತ್ತೆಹಚ್ಚಿರುವುದಾಗಿ ಸ್ವಯಂಸೇವಾ ಸಂಸ್ಥೆ 'ಡಾಕ್ಟರ್ಸ್ ವಿದೌಟ್ ಬಾರ್ಡರ್ಸ್' ಹೇಳಿದೆ. ಲಿಬಿಯಾ ಕಡಲ ತೀರದ ಬಳಿ ಮುಳುಗುತ್ತಿದ್ದ ದೋಣಿಯಲ್ಲಿದ್ದ 146 ಮಂದಿಯನ್ನು ರಕ್ಷಣಾ ಕಾರ್ಯಕರ್ತರ ದೋಣಿ ರಕ್ಷಿಸಿದೆ. ಮತ್ತೊಂದು ಪ್ರತ್ಯೇಕ ಕಾರ್ಯಾಚರಣೆಯಲ್ಲಿ ಉಳಿದ 20 ವಲಸಿಗರನ್ನು ರಕ್ಷಿಸಿ ದಡ ಸೇರಿಸಲಾಗಿದೆ. ಈ ಮಧ್ಯೆ, ರಕ್ಷಣಾ ಕಾರ್ಯಕ್ಕೆ ಬಳಸಲಾಗಿದ್ದ ಹೆಲಿಕಾಪ್ಟರ್ ಸಮುದ್ರದಲ್ಲಿ ತೇಲುತ್ತಿದ್ದ 11 ಮೃತದೇಹಗಳನ್ನು ಪತ್ತೆಹಚ್ಚಿ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಮೃತದೇಹಗಳನ್ನು ದಡಕ್ಕೆ ತರಲಾಗಿದೆ ಎಂದು ತಿಳಿಸಿದೆ.

## ಹಾನಿಕಾರಕ ರಾಸಾಯನಿಕ ಪತ್ತೆ: 28 ಪಾನೀಯಗಳನ್ನು ನಿಷೇಧಿಸಿದ US FDA

**ವಾಷಿಂಗ್ಟನ್:** ಹಾನಿಕಾರಕ ರಾಸಾಯನಿಕಗಳ ಪತ್ತೆ ಹಿನ್ನೆಲೆಯಲ್ಲಿ ಯುಎಸ್ ಎಫ್ಡಿಎ ಈ ವರ್ಷ ಇಲ್ಲಿಯವರೆಗೆ 28 ಪಾನೀಯಗಳನ್ನು ನಿಷೇಧಿಸಿದೆ ಎಂದು ವರದಿಗಳು ತಿಳಿಸಿವೆ. ಕಂಪನಿಯು ಬಹಿರಂಗಪಡಿಸದ ಔಷಧಿಗಳು, ಬ್ಯಾಕ್ಟೀರಿಯಾ ಅಥವಾ ಹಾನಿಕಾರಕ ರಾಸಾಯನಿಕಗಳಿಂದ ತುಂಬಿದ್ದರಿಂದ ನಾಲ್ಕು ಪಾನೀಯಗಳನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ವರದಿಗಳು ತಿಳಿಸಿವೆ. ಹಿಂಪಡೆದ ಪಾನೀಯಗಳಲ್ಲಿ ಹಿಮಾಲಯನ್ ನೋವು ನಿವಾರಕ ಚಹಾವೂ ಸೇರಿದೆ, ಇದು ಅದರ ಲೇಬಲ್ನಲ್ಲಿ ಉರಿಯೂತದ ಔಷಧಿ ಪದಾರ್ಥವನ್ನು ಬಹಿರಂಗಪಡಿಸಿಲ್ಲ ಎಂದು ಆರೋಗ್ಯ ಸಂಸ್ಥೆ ಹೇಳಿದೆ.

ಪಟ್ಟಿಯಲ್ಲಿರುವ ಮತ್ತೊಂದು ಪಾನೀಯವೆಂದರೆ ಮಾರ್ಟಿನೆಲ್ಲಿಯ ಆಪಲ್ ಜ್ಯೂಸ್, ಇದು ಹೆಚ್ಚಿನ ಪ್ರಮಾಣದ ಆರ್ಸೆನಿಕ್ ಇರುವ ಕಾರಣ ನೆನಪಿಸಿಕೊಳ್ಳಲಾಗಿದೆ – ಇದು ಮೂತ್ರಕೋಶ ಮತ್ತು ಚರ್ಮದ ಕ್ಯಾನ್ಸರ್ ಅಪಾಯವನ್ನು ಹೆಚ್ಚಿಸುವ ವಿಷಕಾರಿ ಲೋಹವಾಗಿದೆ. ಮ್ಯಾಂಗನೀಸ್ ಜೊತೆಗೆ ಮೂರು ರೀತಿಯ ಬ್ಯಾಕ್ಟೀರಿಯಾಗಳು ಕಂಡುಬಂದ ನಂತರ ವಿಟಿ ಲಿಮಿಟೆಡ್ನ ನ್ಯಾಚುರಲ್ ವಾಟರ್ಸ್ ತಯಾರಿಸಿದ ಸುಮಾರು 1.9 ಮಿಲಿಯನ್ ಬಾಟಲಿ ಫಿಜಿ ನೀರನ್ನು ಹಿಂಪಡೆಯಲಾಗಿದೆ, ಇದು ಹೆಚ್ಚಿನ ಪ್ರಮಾಣದಲ್ಲಿ ಮೆದುಳಿಗೆ ಹಾನಿಗೆ ಕಾರಣವಾಗಬಹುದು ಎಂದು ವರದಿ ತಿಳಿಸಿದೆ. ಈ ಪಾನೀಯಗಳಲ್ಲಿ ಅನೇಕವು ಆಹಾರ ಬಣ್ಣಗಳೊಂದಿಗೆ ಬೆರೆಸಲ್ಪಡುತ್ತವೆ, ಇದು ಕ್ಯಾನ್ಸರ್ ಅಪಾಯಕ್ಕೆ ಸಂಬಂಧಿಸಿದೆ. ಕಂಪನಿಯು ಘಟಕಾಂಶವಾಗಿ ಬಹಿರಂಗಪಡಿಸದ ಬಣ್ಣಗಳಲ್ಲಿ ರೆಡ್ 40 ಮತ್ತು ಯೆಲ್ಲೋ 5 ಸೇರಿವೆ, ಇದು ಮಾನವರು ಮತ್ತು ಪ್ರಾಣಿಗಳಿಗೆ ಬೆಂಜಿಡಿನ್ ಕ್ಯಾನ್ಸರ್ ಕಾರಕವಾಗಿದೆ ಎಂದು ವೈದ್ಯರು ಹೇಳುತ್ತಾರೆ.



## ಟಾಯ್ಲೆಟ್‌ನಲ್ಲಿ ಕೂತಿದ್ದ ವೇಳೆ ಆನ್‌ಲೈನ್ ಮೀಟಿಂಗ್‌ನಲ್ಲಿ ಭಾಗಿಯಾದ ಮಾಜಿ ಮೇಯರ್



**ಬ್ರೆಜಿಲ್:** ಕೆಲವೊಮ್ಮೆ ಸೆಲೆಬ್ರಿಟಿಗಳು ಮಾತಿನ ಭರದಲ್ಲಿ ಎಡವಟ್ಟು ಮಾಡಿಕೊಂಡು, ಆ ಬಳಿಕ ಕ್ಷಮೆಯಾಚಿಸುವುದುಂಟು. ಇಂಥದ್ದೇ ಒಂದು ಘಟನೆ ಬ್ರೆಜಿಲ್‌ನಲ್ಲಿ ನಡೆದಿದೆ.

ಮೂರು ಬಾರಿ ಬ್ರೆಜಿಲ್ನ ರಿಯೊ ಡಿ ಜನ್ನೈರೊದ ಮೇಯರ್ ಆಗಿದ್ದ ಸೀಸರ್ ಮಾಯಾ ಪಕ್ಷದ ಸಭೆಯಲ್ಲಿ ಭಾಗಿಯಾದ ವೇಳೆ ಮಾಡಿಕೊಂಡ ಎಡವಟ್ಟು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ರಿಯೊ ಡಿ ಜನ್ನೈರೊದಲ್ಲಿನ ಸಿಟಿ ಹಾಲ್ನ ಮಾಜಿ ಮೇಯರ್ ಸೀಸರ್ ಮಾಯಾ ಅವರು ಇತರ ಕೌನ್ಸಿಲ್ ಸದಸ್ಯರೊಂದಿಗಿನ ಅಧಿವೇಶನಕ್ಕಾಗಿ ಆನ್ ಲೈನ್ ನಲ್ಲಿ ಜಾಯಿನ್ ಆಗಿದ್ದಾರೆ. ಝೂಮ್ ಕಾಲ್ ಮೂಲಕ ಲಾಗಿನ್ ಆಗಿ ಅವರು ಸಭೆಗೆ ಜಾಯಿನ್ ಆಗಿದ್ದಾರೆ.

ಕೌನ್ಸಿಲರ್ ಪಾಬ್ಲೋ ಮೆಲ್ಲೋ ಅಧಿವೇಶನವನ್ನು ನಡೆಸುತ್ತಿದ್ದರು. ಅಧಿವೇಶನದಲ್ಲಿ ಸೀಸನ್ ಮಾಯಾ ಸೇರಿದಂತೆ ಇತರೆ ಸದಸ್ಯರು ಆನ್ ಲೈನ್ ನಲ್ಲಿ ಜಾಯಿನ್ ಆಗಿದ್ದರು. ಸಭೆ ನಡೆಯುವಾಗ ಸೀಸರ್ ಟಾಯ್ಲೆಟ್ನಲ್ಲಿ ಕೂತಿದ್ದರು. ಝೂಮ್ ಕಾಲ್ ನಲ್ಲಿದ್ದ ಅವರು ಕ್ಯಾಮರಾವನ್ನು ಕಾಲಿನತ್ತ ಇಟ್ಟಿದ್ದಾರೆ. ಇದರಿಂದ ಅವರು ಟಾಯ್ಲೆಟ್ ನಲ್ಲಿ ಕೂತಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಾಗಿದೆ. ಇದು ಗೊತ್ತಾದ ಕೂಡಲೇ ಸೀಸರ್ ಕ್ಯಾಮರಾವನ್ನು ತನ್ನ ಮುಖದತ್ತ ತಿರುಗಿಸಿದ್ದಾರೆ.

ಇದನ್ನು ನೋಡಿದ ಇತರೆ ಸದಸ್ಯರು ಮುಜುಗರಕ್ಕೆ ಒಳಗಾಗಿದ್ದಾರೆ. ಕ್ಯಾಮರಾವನ್ನು ಆಫ್ ಮಾಡಿ ಎಂದು ಕೌನ್ಸಿಲರ್ ಸೀಸರ್ ಅವರಿಗೆ ಹೇಳಿದ್ದಾರೆ ಎಂದು ಇಂಡಿಪೆಂಡೆಂಟ್ ವರದಿ ತಿಳಿಸಿದೆ.

ಸೀಸರ್ ಅವರು ಅನಾರೋಗ್ಯದ ಕಾರಣದಿಂದ ಅಧಿವೇಶನದಲ್ಲಿ ಭಾಗಿಯಾಗಿಲ್ಲ. ಅವರು ಆಕಸ್ಮಿಕವಾಗಿ ಸಭೆಗೆ ಜಾಯಿನ್ ಆಗಿದ್ದರು ಎಂದು ಪ್ರಕಟಣೆಯಲ್ಲಿ ಹೇಳಿರುವುದಾಗಿ ವರದಿ ತಿಳಿಸಿದೆ. ವಿಡಿಯೋ ರೆಕಾರ್ಡ್ ಆಗಿ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ. ಆ ಬಳಿಕ ಸೀಸರ್ ಎಲ್ಲರ ಬಳಿಕ ಕ್ಷಮೆ ಯಾಚಿಸಿದ್ದಾರೆ.

## ದಕ್ಷಿಣ ಕೊರಿಯಾಕ್ಕೆ ಮೂರನೇ ಬಾರಿಗೆ ನೂರಾರು ಕಸದ ಬಲೂನ್ ಹಾರಿಸಿದ ಉತ್ತರ ಕೊರಿಯಾ

**ಉತ್ತರ ಕೊರಿಯಾ:** ಉತ್ತರ ಕೊರಿಯಾವು ಮೇ ಅಂತ್ಯದ ನಂತರ ತನ್ನ ಮೂರನೇ ಅಭಿಯಾನದಲ್ಲಿ ನೂರಾರು ಕಸ ಸಾಗಿಸುವ ಬಲೂನ್‌ಗಳನ್ನು ದಕ್ಷಿಣ ಕೊರಿಯಾಕ್ಕೆ ಹಾರಿಸಿದೆ,

ದಕ್ಷಿಣ ಕೊರಿಯಾದ ಕಾರ್ಯಕರ್ತರು ಉತ್ತರದಲ್ಲಿ ಪ್ರಚಾರದ ಕರಪತ್ರಗಳನ್ನು ಹರಡಲು ತಮ್ಮದೇ ಆದ ಬಲೂನ್‌ಗಳನ್ನು ತೇಲಿಸಿದ ಕೆಲವೇ ದಿನಗಳಲ್ಲಿ ಈ ಘಟನೆ ಮತ್ತೆ ಮರುಕಳಿಸಿದೆ.

ಉತ್ತರ ಕೊರಿಯಾದ ಪರಮಾಣು ರಾಜತಾಂತ್ರಿಕ ಪ್ರತಿಸ್ಪರ್ಧಿಗಳ ನಡುವೆ ಉದ್ವಿಗ್ನತೆಯನ್ನು ಹೆಚ್ಚಿಸುವ ಮೂಲಕ ದಕ್ಷಿಣ ಕೊರಿಯಾದ ನಾಗರಿಕ ಕರಪತ್ರ ಅಭಿಯಾನಗಳಿಗೆ ಪ್ರತೀಕಾರವಾಗಿ ದಕ್ಷಿಣದಲ್ಲಿ ಟನ್ ಗಳಷ್ಟು ಕಸ ಮತ್ತು ಗೊಬ್ಬರವನ್ನು ಬೀಳಿಸಲು ಉತ್ತರ ಕೊರಿಯಾ ಇದುವರೆಗೆ 1,000 ಕ್ಕೂ ಹೆಚ್ಚು ಬಲೂನ್ ಗಳನ್ನು ಕಳುಹಿಸಿದೆ.



ಪ್ರತಿಕ್ರಿಯೆಯಾಗಿ, ದಕ್ಷಿಣ ಕೊರಿಯಾವು ಉತ್ತರ ಕೊರಿಯಾದೊಂದಿಗಿನ 2018 ರ ಉದ್ವಿಗ್ನತೆ-ಸಡಿಲಗೊಳಿಸುವ ಒಪ್ಪಂದವನ್ನು ಸ್ಥಗಿತಗೊಳಿಸಿದೆ. ಈ ಕ್ರಮವು ದಕ್ಷಿಣಕ್ಕೆ ಲೈವ್-ಫೈರ್ ಮಿಲಿಟರಿ ಅಭ್ಯಾಸಗಳನ್ನು ಮರುಪ್ರಾರಂಭಿಸಲು ಅನುಮತಿಸಿದೆ. ಉತ್ತರ ಕೊರಿಯಾ ವಿರೋಧಿ ಪ್ರಚಾರಗಳನ್ನು ಗಡಿ ಪ್ರದೇಶಗಳಲ್ಲಿ ಹೆಚ್ಚಿಸಲಾಗಿದೆ. ಮತ್ತು ತನ್ನದೇ ಆದ ಪ್ರತೀಕಾರದ ಮಿಲಿಟರಿ ಕ್ರಮಗಳನ್ನು ತೆಗೆದುಕೊಳ್ಳಲು ಮುಂದಾಗಿದೆ.

ಶನಿವಾರ ರಾತ್ರಿಯಿಂದ ದಕ್ಷಿಣದ ಕಡೆಗೆ ಸುಮಾರು 330 ಬಲೂನ್ ಗಳನ್ನು ಉಡಾವಣೆ ಮಾಡುವುದನ್ನು ಪತ್ತೆ ಹಚ್ಚಿದೆ ಮತ್ತು ಭಾನುವಾರ ಬೆಳಿಗ್ಗೆ ದಕ್ಷಿಣ ಕೊರಿಯಾದ ಪ್ರದೇಶದಲ್ಲಿ ಸುಮಾರು 80 ಬಲೂನ್ಗಳು ಕಂಡುಬಂದಿವೆ ಎಂದು ದಕ್ಷಿಣ ಕೊರಿಯಾದ ಸೇನೆ ಜಂಟಿ ಮುಖ್ಯಸ್ಥರು ಹೇಳಿದ್ದಾರೆ. ಶನಿವಾರ ರಾತ್ರಿ, ಪೂರ್ವಕ್ಕೆ ಗಾಳಿ ಬೀಸುತ್ತಿದ್ದು, ಇದು ದಕ್ಷಿಣ ಕೊರಿಯಾದ ಪ್ರದೇಶದಿಂದ ಅನೇಕ ಬಲೂನ್ಗಳು ತೇಲುವಂತೆ ಮಾಡಿರಬಹುದು ಎಂದು ಸೇನೆ ಹೇಳಿದೆ.

Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

# ಮೃಣಾಲ್‌ಗೆ ಬೇಡಿಕೆ
## ತಮಿಳಿನತ್ತ 'ಸೀತಾರಾಮಂ' ನಟಿ



ಮುಂಬೈ ಬೆಡಗಿ ಮೃಣಾಲ್ ಠಾಕೂರ್ ಬಾಲಿವುಡ್‌ಗಿಂತ ಸೌತ್‌ನಲ್ಲೇ ನಟಿಗೆ ಹೆಚ್ಚಿನ ಬೇಡಿಕೆ ಇದೆ. ಮೃಣಾಲ್ ತೆಲುಗಿನಲ್ಲಿ ನಟಿಸಿದ ಸಿನಿಮಾಗಳು ಹಿಟ್ ಆಗಿವೆ. ಅಪಾರ ಅಭಿಮಾನಿಗಳ ಬಳಗ ಹೊಂದಿರುವ ನಟಿಗೆ ಕಾಲಿವುಡ್‌ನಿಂದ ಈಗ ಬಂಪರ್ ಆಫರ್ ಸಿಕ್ಕಿದೆ. ತಮಿಳಿನ ಸ್ಟಾರ್ ನಟನ ಜೊತೆ ತೆರೆಹಂಚಿಕೊಳ್ಳುವ ಅವಕಾಶ ದಕ್ಕಿದೆ.

ಸೀತಾರಾಮಂ, ಹಾಯ್ ನಾನಾ, ಫ್ಯಾಮಿಲಿ ಸ್ಟಾರ್ ಸಿನಿಮಾಗಳ ನಂತರ ಕಾಲಿವುಡ್‌ನಲ್ಲಿಯೂ ನಟಿ ಮಿಂಚಲು ಸಜ್ಜಾಗಿದ್ದಾರೆ. ತಮಿಳು ನಟ ರಾಘವ್ ಲಾರೆನ್ಸ್ ನಟನೆಯ ಹೊಸ ಸಿನಿಮಾದಲ್ಲಿ ನಾಯಕಿಯಾಗಿ ನಟಿಸಲು ಮೃಣಾಲ್‌ಗೆ ಚಾನ್ಸ್ ಸಿಕ್ಕಿದೆ. 'ಕಾಂಚನಾ' ಸಿನಿಮಾದ ಮುಂದುವರೆದ ಭಾಗದಲ್ಲಿ 'ಸೀತಾರಾಮಂ' ನಟಿ ಕೂಡ ಕಾಣಿಸಿಕೊಳ್ಳಿದ್ದಾರೆ.

'ಕಾಂಚನಾ-4' ಸಿನಿಮಾ ಮಾಡಲು ತೆರೆಮರೆಯಲ್ಲಿ ತಯಾರಿ ನಡೆಯುತ್ತಿದೆ. ಹಾರರ್ ಕಥೆಗೆ ಸ್ಕ್ರಿಪ್ಟ್ ಕೂಡ ಸಿದ್ಧವಾಗಿದೆ. ಈಗಾಗಲೇ ಚಿತ್ರತಂಡ ಮೃಣಾಲ್‌ರನ್ನು ಭೇಟಿಯಾಗಿ ಚಿತ್ರದ ಕಥೆ ಹೇಳಿದ್ದು, ನಟಿ ಕೂಡ ಓಕೆ ಎಂದಿದ್ದಾರೆ. ಈ ವರ್ಷದ ಅಂತ್ಯದಲ್ಲಿ ಶೂಟಿಂಗ್ ಶುರುವಾಗಲಿದೆ. ಈ ಕುರಿತು ಚಿತ್ರತಂಡದಿಂದ ಅಧಿಕೃತ ಘೋಷಣೆ ಆಗಬೇಕಿದೆ.

ಮೊದಲ ತಮಿಳು ಸಿನಿಮಾದಲ್ಲಿ ರಾಘವ್ ಲಾರೆನ್ಸ್‌ಗೆ ಮೃಣಾಲ್ ನಾಯಕಿಯಾಗಿ ನಟಿಸುತ್ತಿರೋದು ಫ್ಯಾನ್ಸ್‌ಗೆ ಖುಷಿ ಕೊಟ್ಟಿದೆ. ಸಿನಿಮಾಗಾಗಿ ಅಭಿಮಾನಿಗಳು ಎದುರು ನೋಡ್ತಿದ್ದಾರೆ.

# ಸ್ಟಾರ್ ನಟನ ಪುತ್ರನಿಗೆ ಶ್ರೀಲೀಲಾ ನಾಯಕಿ



ಕನ್ನಡದ ನಟಿ ಶ್ರೀಲೀಲಾ ಇದೀಗ ಟಾಲಿವುಡ್‌ನಲ್ಲಿ ಬೇಡಿಕೆಯ ನಟಿಯಾಗಿದ್ದಾರೆ. ಸ್ಯಾಂಡಲ್‌ವುಡ್, ಟಾಲಿವುಡ್‌ನಲ್ಲಿ ಮಿಂಚಿದ ಬಳಿಕ ಬಾಲಿವುಡ್‌ಗೆ 'ಕಿಸ್' ನಟಿ ಪಾದಾರ್ಪಣೆ ಮಾಡುತ್ತಿದ್ದಾರೆ. ಸ್ಟಾರ್ ನಟನ ಪುತ್ರನ ಜೊತೆ ನಟಿ ರೊಮ್ಯಾನ್ಸ್ ಮಾಡಲಿದ್ದಾರೆ.

ಟಾಲಿವುಡ್ ಬಳಿಕ ಬಾಲಿವುಡ್‌ನಲ್ಲಿ ನಟಿಗೆ ಅದೃಷ್ಟದ ಬಾಗಿಲು ತೆರೆದಿದೆ. ಸದ್ಯ ಹರಿದಾಡುತ್ತಿರುವ ಮಾಹಿತಿ ಪ್ರಕಾರ, ಸೈಫ್ ಅಲಿ ಖಾನ್ ಪುತ್ರ ಇಬ್ರಾಹಿಂಗೆ ಶ್ರೀಲೀಲಾ ಜೋಡಿಯಾಗ್ತಿದ್ದಾರೆ ಎನ್ನಲಾಗಿದೆ. 'ಡೈಲರ್' ಎಂಬ ಹಿಂದಿ ಸಿನಿಮಾದಲ್ಲಿ ಶ್ರೀಲೀಲಾ ಲೀಡ್ ರೋಲ್‌ನಲ್ಲಿ ನಟಿಸಲು ಕರೆ ಬಂದಿದೆಯಂತೆ. ಇದೇ ಆಗಸ್ಟ್‌ನಿಂದ ಸಿನಿಮಾ ಶೂಟಿಂಗ್ ಕೂಡ ಶುರುವಾಗಲಿದ್ದು, ಶ್ರೀಲೀಲಾ ಕೂಡ ಸಾಥ್ ನೀಡುತ್ತಿದ್ದಾರೆ.

ಮೊದಲ ಹಿಂದಿ ಸಿನಿಮಾದಲ್ಲೇ ನಟಿಗೆ ಉತ್ತಮ ಪಾತ್ರ ಸಿಕ್ಕಿದೆಯಂತೆ. ಇದೇ ಮೊದಲ ಬಾರಿಗೆ ಯುವ ನಟ ಇಬ್ರಾಹಿಂ ಜೊತೆ ಶ್ರೀಲೀಲಾ ನಟಿಸುತ್ತಿರುವ ಕಾರಣ, ಈ ಜೋಡಿಯನ್ನು ಸಿನಿಮಾದಲ್ಲಿ ನೋಡಲು ಫ್ಯಾನ್ಸ್ ಕಾಯುತ್ತಿದ್ದಾರೆ.

ಅಂದಹಾಗೆ, ಭಗವಂತ ಕೇಸರಿ, ಗುಂಟೂರು ಖಾರಂ ಸಿನಿಮಾ ಬಳಿಕ ನಟಿ ಸೈಲೆಂಟ್ ಆಗಿದ್ದರು. ಇದೀಗ ಮತ್ತೆ ಸಿನಿಮಾ ಟ್ರ್ಯಾಕ್‌ಗೆ ನಟಿ ಮರಳಿದ್ದಾರೆ. ತೆಲುಗಿನ ನಟ ರವಿತೇಜ ಜೊತೆ ಕೂಡ ಹೊಸ ಸಿನಿಮಾ ಒಪ್ಪಿಕೊಂಡಿದ್ದಾರೆ. ಮತ್ತೆ ಶ್ರೀಲೀಲಾ ಜಮಾನ ಶುರುವಾಗೋದು ಗ್ಯಾರಂಟಿ ಅಂತಿದ್ದಾರೆ ನೆಟ್ಟಿಗರು.



## ಗುಟ್ಟಾಗಿ ಎಂಗೇಜ್‌ಮೆಂಟ್ ಮಾಡಿಕೊಂಡ
# 'ಗಂಗೆ ಬಾರೆ ತುಂಗೆ ಬಾರೆ' ನಟಿ



ಕನ್ನಡದ 'ಗಂಗೆ ಬಾರೆ ತುಂಗೆ ಬಾರೆ' ಸಿನಿಮಾ ಮೂಲಕ ಪರಿಚಿತರಾದ ಸುನೈನಾ ಇದೀಗ ಗುಡ್ ನ್ಯೂಸ್ ಕೊಟ್ಟಿದ್ದಾರೆ. ಗುಟ್ಟಾಗಿ ನಟಿ ಎಂಗೇಜ್‌ಮೆಂಟ್ ಮಾಡಿಕೊಂಡಿದ್ದಾರೆ. ಈ ಕುರಿತು ನಟಿ ಅಧಿಕೃತ ಮಾಹಿತಿ ನೀಡಿದ್ದಾರೆ.

ಸೀಕ್ರೆಟ್ ಆಗಿ ಎಂಗೇಜ್‌ಮೆಂಟ್ ಆಗಿರುವ ಬಗ್ಗೆ ಸುದ್ದಿ ವೈರಲ್ ಆಗ್ತಿದ್ದಂತೆ ಸುನೈನಾ ಸೋಷಿಯಲ್ ಮೀಡಿಯಾದಲ್ಲಿ ರಿಯಾಕ್ಟ್ ಮಾಡಿದ್ದಾರೆ. ನಿಶ್ಚಿತಾರ್ಥದ ಸುದ್ದಿ ನಿಜ ಎಂದು ಒಪ್ಪಿಕೊಂಡಿದ್ದಾರೆ. ಭಾವಿ ಪತಿ ಜೊತೆ ರಿಂಗ್ ತೊಟ್ಟಿರುವ ಫೋಟೋವನ್ನು ಶೇರ್ ಮಾಡಿ, ತನಗೆ ಅಭಿನಂದನೆ ಸಲ್ಲಿಸಿದ್ದಕ್ಕಾಗಿ ಎಲ್ಲರಿಗೂ ಮುಂಚಿತವಾಗಿ ಧನ್ಯವಾದಗಳು ಎಂದಿದ್ದಾರೆ. ಆದರೆ ಭಾವಿ ಪತಿ ಜೊತೆಗಿನ ಫೋಟೋ ಆಗಲಿ ಯಾವುದೇ ವಿವರವನ್ನು ಸುನೈನಾ ಹಂಚಿಕೊಂಡಿಲ್ಲ. ಈ ವರ್ಷದ ಅಂತ್ಯದಲ್ಲಿ ಮದುವೆ ಜರುಗಲಿದೆ ಎನ್ನಲಾಗಿದೆ.

2008ರಲ್ಲಿ ಪ್ರಜ್ವಲ್ ದೇವರಾಜ್ ನಟನೆಯ 'ಗಂಗೆ ಬಾರೆ ತುಂಗೆ ಬಾರೆ' ಸಿನಿಮಾದಲ್ಲಿ ನಾಯಕಿಯಾಗಿ ನಟಿಸಿದ್ದರು. ಬಳಿಕ ಸೌತ್ ಸಿನಿಮಾಗಳಲ್ಲಿ ಬ್ಯುಸಿಯಾದರು.

# ಬುಮ್ರಾ ಬೆಂಕಿ ಬೌಲಿಂಗ್ ಭಾರತಕ್ಕೆ ರೋಚಕ 6 ರನ್ ಜಯ

ಜಸ್‌ಪ್ರೀತ್ ಬುಮ್ರಾ ಅವರ ಮ್ಯಾಜಿಕ್ ಸ್ಪೆಲ್‌ನಿಂದಾಗಿ ಟಿ20 ವಿಶ್ವಕಪ್‌ನಲ್ಲಿ ಭಾರತ ಪಾಕಿಸ್ತಾನದ ವಿರುದ್ಧ ಕೊನೆಯ ಓವರ್‌ನಲ್ಲಿ ರೋಚಕ 6 ರನ್‌ಗಳ ಜಯ ಸಾಧಿಸಿದೆ.

120 ರನ್‌ಗಳ ಸವಾಲನ್ನು ನೀಡಿದಾಗ ಪಾಕಿಸ್ತಾನ ಸುಲಭವಾಗಿ ಜಯಗಳಿಸಬಹುದು ಎಂದೇ ನಿರೀಕ್ಷಿಸಲಾಗಿತ್ತು. ಆದರೆ ಬುಮ್ರಾ ಅವರ ಅತ್ಯುತ್ತಮ ಬೌಲಿಂಗ್‌ನಿಂದಾಗಿ ಭಾರತ ರೋಚಕ ಜಯ ಸಾಧಿಸಿದೆ. ಪಾಕ್ ಸೇನೆಯಿಂದ ಅಭ್ಯಾಸ ಪಡೆದು ವಿಶ್ವಕಪ್‌ಗೆ ಆಗಮಿಸಿದ್ದ ಪಾಕಿಸ್ತಾನ ತಂಡ ಈಗ ಸತತ ಎರಡು ಸೋಲಿನಿಂದ ಗುಂಪು ಹಂತದಲ್ಲೇ ಹೊರಕ್ಕೆ ಹೋಗುವ ಸಾಧ್ಯತೆಯಿದೆ.3

2 ವಿಕೆಟ್ ಕಳೆದುಕೊಂಡು 72 ರನ್‌ಗಳಿಸಿದ್ದಾಗ ಪಾಕ್ ಸುಭದ್ರ ಸ್ಥಿತಿಯಲ್ಲಿ ಇತ್ತು. ಆದರೆ ಯಾವಾಗ ಫಕರ್ ಜಮಾನ್ ಔಟ್ ಆದರೋ ಅಲ್ಲಿಂದ ಪತನ ಆರಂಭವಾಯಿತು. ಕೊನೆಯ 36 ಎಸೆತಗಳಲ್ಲಿ ಪಾಕ್ ಗೆಲುವಿಗೆ 7 ವಿಕೆಟ್‌ಗಳ ಸಹಾಯದಿಂದ 40 ರನ್ ಬೇಕಿತ್ತು. 15ನೇ ಓವರ್ ಎಸೆದ ಬುಮ್ರಾ 31 ರನ್ (44 ಎಸೆತ, 1 ಬೌಂಡರಿ, 1 ಸಿಕ್ಸರ್) ಹೊಡೆದಿದ್ದ ರಿಜ್ವಾನ್ ಅವರನ್ನು ಬೌಲ್ಡ್ ಮಾಡಿದರು. ಈ ಓವರ್‌ನಲ್ಲಿ ಕೇವಲ 3 ರನ್ ಮಾತ್ರ ಬಂತು.

ಅಕ್ಷರ್ ಪಟೇಲ್ ಎಸೆದ 16ನೇ ಓವರ್‌ನಲ್ಲಿ 2 ರನ್ ಬಂದರೆ, ಹಾರ್ದಿಕ್ ಎಸೆದ 17ನೇ ಓವರ್‌ನಲ್ಲಿ 5 ರನ್ ಪಾಕಿಗೆ ಬಂತು. ಸಿರಾಜ್ ಎಸೆದ 18ನೇ ಓವರ್‌ನಲ್ಲಿ 9 ರನ್ ಬಂದಾಗ ಕೊನೆಯ 12 ಎಸೆತದಲ್ಲಿ 21 ರನ್ ಬೇಕಿತ್ತು.



19ನೇ ಓವರ್ ಎಸೆದ ಬುಮ್ರಾ, ಕೇವಲ 3 ರನ್ ನೀಡಿ 1 ವಿಕೆಟ್ ಪಡೆಯುವ ಮೂಲಕ ಪಂದ್ಯವನ್ನು ಭಾರತದತ್ತ ತಿರುಗಿಸಿದರು. ಕೊನೆಯ 20ನೇ ಓವರ್‌ನಲ್ಲಿ ಪಾಕಿಸ್ತಾನಕ್ಕೆ 18 ರನ್ ಬೇಕಿತ್ತು.

ಅರ್ಶ್‌ದೀಪ್ ಸಿಂಗ್ ಎಸೆದ ಮೊದಲ ಓವರ್‌ನಲ್ಲಿ ಇಮಾದ್ ವಸೀಂ ಕೀಪರ್‌ಗೆ ಕ್ಯಾಚ್ ನೀಡಿ ಹೊರನಡೆದರು. ನಂತರ ಎರಡು ಎಸೆತದಲ್ಲಿ 2ರನ್ ಬಂತು. 4ನೇ ಮತ್ತು 5ನೇ ಎಸೆತವನ್ನು ನಸೀಮ್ ಶಾ ಬೌಂಡರಿಗೆ ಅಟ್ಟಿ ಪಂದ್ಯಕ್ಕೆ ರೋಚಕ ತಿರುವು ನೀಡಿದರು. ಆದರೆ ಕೊನೆಯ ಎಸೆತದಲ್ಲಿ ಅರ್ಶ್‌ದೀಪ್ 1 ರನ್ ನೀಡಿದ ಪರಿಣಾಮ ಭಾರತ 6 ರನ್‌ಗಳ ರೋಚಕ ಜಯ ಸಾಧಿಸಿತು. ಪಾಕಿಸ್ತಾನ ಅಂತಿಮವಾಗಿ 7 ವಿಕೆಟ್ ನಷ್ಟಕ್ಕೆ 113 ರನ್ ಮಾತ್ರ ಗಳಿಸಿತು.

ಬುಮ್ರಾ 14 ರನ್ ನೀಡಿ 3 ವಿಕೆಟ್ ಪಡೆದರೆ ಪಾಂಡ್ಯ 24 ರನ್ ನೀಡಿ 2 ವಿಕೆಟ್ ಪಡೆದರು. ಅತ್ಯುತ್ತಮ ಪ್ರದರ್ಶನ ನೀಡಿದ ಬುಮ್ರಾ ಅರ್ಹವಾಗಿಯೇ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ನಾಯಕ ಬಾಬರ್ ಅಜಂ, ಉಸ್ಮನ್ ಖಾನ್, ಫಖರ್ ಜಮಾನ್ ತಲಾ 13 ರನ್ ಹೊಡೆದರೆ ಇಮಾದ್ ವಾಸೀಂ 15 ರನ್ ಹೊಡೆದು ಔಟಾದರು.

ಎ ಗುಂಪಿನಲ್ಲಿ ಆಡಿದ 2 ಪಂದ್ಯಗಳಲ್ಲಿ ಗೆದ್ದಿರುವ ಭಾರತ ಅಂಕಪಟ್ಟಿಯಲ್ಲಿ 4 ಅಂಕ ಪಡೆದು ಮೊದಲ ಸ್ಥಾನದಲ್ಲಿದೆ. ಅಮೆರಿಕ 4 ಅಂಕ ಪಡೆದು ಎರಡನೇ ಸ್ಥಾನದಲ್ಲಿದ್ದರೆ ಕೆನಡಾ 2 ಅಂಕ ಪಡೆದು ಮೂರನೇ ಸ್ಥಾನಲ್ಲಿದೆ. ಎರಡು ಪಂದ್ಯ ಸೋತಿರುವ ಪಾಕಿಸ್ತಾನ ಮತ್ತು ಐರ್ಲೆಂಡ್ ಕ್ರಮವಾಗಿ 4 ಮತ್ತು 5ನೇ ಸ್ಥಾನಲ್ಲಿದೆ. ಎರಡು ಪಂದ್ಯಗಳನ್ನು ಸೋತಿರುವ ಮಾಜಿ ಚಾಂಪಿಯನ್ ಪಾಕಿಸ್ತಾನ ಗುಂಪು ಹಂತದಲ್ಲೇ ಹೊರಕ್ಕೆ ಹೋಗುವ ಸಾಧ್ಯತೆಯಿದೆ. ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ್ದ ಭಾರತ 19 ಓವರ್‌ಗಳಿಗೆ 119 ರನ್‌ಗಳಿಸಿ ಆಲೌಟ್ ಆಗಿತ್ತು.

# ಉಗಾಂಡಾ ವಿರುದ್ಧ 134 ರನ್‌ಗಳ ಜಯ



**ಗಯಾನಾ:** ಇಲ್ಲಿನ ಪ್ರಾವಿಡೆನ್ಸ್ ಸ್ಟೇಡಿಯಂನಲ್ಲಿ ಉಗಾಂಡಾ ವಿರುದ್ಧದ ಪಂದ್ಯದಲ್ಲಿ ವೆಸ್ಟ್ ಇಂಡೀಸ್ 134 ರನ್‌ಗಳ ಅಂತರದಿಂದ ಗೆದ್ದು ಟಿ20 ವಿಶ್ವಕಪ್‌ನಲ್ಲಿ ವಿಶೇಷ ಸಾಧನೆ ಮಾಡಿದೆ. ಟಿ20 ವಿಶ್ವಕಪ್ ಇತಿಹಾಸದಲ್ಲೇ 2ನೇ ಅತಿ ದೊಡ್ಡ ಅಂತರದ ಗೆಲುವು ಇದಾಗಿದೆ. ಐಸಿಸಿ ಟಿ20 ವಿಶ್ವಕಪ್ ಇತಿಹಾಸದಲ್ಲಿ 2007ರ ಚೊಚ್ಚಲ ಟೂರ್ನಿಯಲ್ಲಿ ಶ್ರೀಲಂಕಾ 172 ರನ್‌ಗಳಿಂದ ಕೀನ್ಯಾ ತಂಡವನ್ನು ಸೋಲಿಸಿತ್ತು. ಇದು ಸಾರ್ವಕಾಲಿಕ ದಾಖಲೆಯಾಗಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ವಿಂಡೀಸ್ ತಂಡ 20 ಓವರ್‌ಗಳಲ್ಲಿ 173 ರನ್ ಕಲೆ ಹಾಕಿತ್ತು. ಈ ಗುರಿ ಬೆನ್ನಟ್ಟಿದ ಉಗಾಂಡಾ ತಂಡ ಕೇವಲ 39 ರನ್‌ಗಳಿಗೆ ಆಲೌಟ್ ಆಗಿ ಸೋಲೊಪ್ಪಿಕೊಂಡಿತು. 173 ರನ್‌ಗಳ ಸ್ಪರ್ಧಾತ್ಮಕ ರನ್ ಗುರಿ ಬೆನ್ನತ್ತಿದ್ದ ಉಗಾಂಡಾ ತಂಡದ ಪರ ಯಾರೊಬ್ಬರೂ ಕ್ರೀಸ್‌ನಲ್ಲಿ ನೆಲೆಯೂರದ ಕಾರಣ 12 ಓವರ್‌ಗಳಲ್ಲಿ 39 ರನ್‌ಗಳಿಗೆ ಸರ್ವಪತನ ಕಂಡಿತು.

ಸಂಘಟಿತ ಬ್ಯಾಟಿಂಗ್ ಪ್ರದರ್ಶನ ನೀಡಿದ ವಿಂಡೀಸ್ ಪರ ಬೌಲಿಂಗ್‌ನಲ್ಲಿ ಅಕೇಲ್ ಹೊಸೈನ್ ಅಬ್ಬರಿಸಿ ಬೊಬ್ಬಿರಿದರು. ಉಗಾಂಡಾ ಬ್ಯಾಟರ್ಸ್‌ಗಳನ್ನ ದುಸ್ವಪ್ನವಾಗಿ ಕಾಡಿದರು. 4 ಓವರ್ ಬೌಲಿಂಗ್ ಮಾಡಿದ ಹೊಸೈನ್ ಕೇವಲ 11 ರನ್ ಬಿಟ್ಟುಕೊಟ್ಟು 5 ವಿಕೆಟ್ ಕಿತ್ತರೆ, ಅಲ್ಜಾರಿ ಜೋಸೆಫ್ 2 ವಿಕೆಟ್ ಹಾಗೂ ರೊಮಾರಿಯೋ ಶೆಫರ್ಡ್, ಆಂಡ್ರೆ ರಸ್ಸೆಲ್, ಗುಡಾಕೇಶ್ ಮೋತಿ ತಲಾ ಒಂದೊಂದು ವಿಕೆಟ್ ಪಡೆದು ಮಿಂಚಿದರು.

ಮೊದಲು ಬ್ಯಾಟಿಂಗ್ ಮಾಡಿದ ವಿಂಡೀಸ್ ಪರ ಜಾನ್ಸನ್ ಚಾರ್ಲ್ಸ್ 44 ರನ್, ಬ್ರಾಂಡನ್ ಕಿಂಗ್ಸ್ 13 ರನ್, ನಿಕೋಲಸ್ ಪೂರನ್ 22 ರನ್, ರೋವ್ಮನ್ ಪೋವೆಲ್ 23 ರನ್, ಶೆರ್ಫೇನ್ ರುದರ್‌ಫೋರ್ಡ್ 22 ರನ್, ಆಂಡ್ರೆ ರಸೆಲ್ 30 ರನ್ ಹಾಗೂ ರೋಮಾರಿಯೋ ಶೆಫರ್ಡ್ 5 ರನ್ ಗಳಿಸಿದರು.

# ಯಾವುದೇ ಕಾರಣಕ್ಕೂ ಶಕ್ತಿ ಯೋಜನೆ ನಿಲ್ಲಿಸಲ್ಲ




**ಬೆಂಗಳೂರು:** ಯಾವುದೇ ಕಾರಣಕ್ಕೂ ಶಕ್ತಿ ಯೋಜನೆಯನ್ನು ನಿಲ್ಲಿಸುವುದಿಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ತಿಳಿಸಿದ್ದಾರೆ.

ಶಕ್ತಿ ಯೋಜನೆ ನಿಲ್ಲುತ್ತದೆ ಎಂಬ ಆರೋಪಕ್ಕೆ ಸ್ಪಷ್ಟನೆ ನೀಡಿದ ಅವರು, ಕಾಂಗ್ರೆಸ್ ಸರ್ಕಾರ ಗ್ಯಾರಂಟಿಗಳನ್ನು ಮತ ಪಡೆಯೋದಕ್ಕಾಗಿ ನೀಡಿಲ್ಲ. ಲೋಕಸಭಾ ಚುನಾವಣೆಯವರೆಗೆ ಅಂತ ನಿಗದಿ ಮಾಡಿಲ್ಲ ಎಂದು ಹೇಳಿದ್ದಾರೆ.

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮಾಡಿದ್ದ ಬೆಲೆ ಏರಿಕೆಯಿಂದ ಜನರು ತತ್ತರಿಸಿದ್ದರು. ಅವರಿಗೆ ಸಹಾಯ ಮಾಡುವುದಕ್ಕೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಗಿತ್ತು. ಇದರಿಂದ ಬಡ, ಮಧ್ಯಮ ವರ್ಗದವರಿಗೆ ಸಹಾಯ ಆಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಶಕ್ತಿ ಯೋಜನೆಗಾಗಿ ಬಜೆಟ್ ನಲ್ಲಿ ಸುಮಾರು 5,500 ಕೋಟಿ ರೂ. ಮೀಸಲಿಟ್ಟಿದ್ದಾರೆ. ಶಕ್ತಿ ಯೋಜನೆಗೆ ಯಾವುದೇ ಸಮಸ್ಯೆ ಇಲ್ಲ ಎಂದಿದ್ದಾರೆ.

ನಮ್ಮ ಕಾಂಗ್ರೆಸ್ ಸರ್ಕಾರ ಇರುವವರೆಗೂ ಶಕ್ತಿ ಯೋಜನೆ ಇರುತ್ತದೆ. ಯಾರಿಗೂ ಅನುಮಾನ ಬೇಡ. ಮುಂದೆಯೂ ಸಹ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲಿದ್ದು, ಆಗಲೂ ಶಕ್ತಿ ಯೋಜನೆ ಇರುತ್ತದೆ ಎಂದು ಸ್ಪಷ್ಟನೆ ನೀಡಿದರು.

# ಕೇಂದ್ರ ಸಚಿವರಾಗಿ ಕರ್ನಾಟಕದ ನಾಲ್ವರು ಪ್ರಮಾಣವಚನ ಸ್ವೀಕಾರ

**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ಸಂಪುಟದ ಸಚಿವರಾಗಿ ಕರ್ನಾಟಕದ ನಾಲ್ವರು ಸದಸ್ಯರು ಪ್ರಮಾಣವಚನ ಸ್ವೀಕರಿಸಿದರು.

ಕೇಂದ್ರ ಸಚಿವರಾಗಿ ಹೆಚ್‌ಡಿ ಕುಮಾರಸ್ವಾಮಿ, ಪ್ರಹ್ಲಾದ್ ಜೋಶಿ, ವಿ ಸೋಮಣ್ಣ ಹಾಗೂ ಶೋಭಾ ಕರಂದ್ಲಾಜೆ ಪ್ರಮಾಣವಚನ ಸ್ವೀಕರಿಸಿದ್ದಾರೆ. ಮೊದಲಿಗೆ ದೇವರ ಹೆಸರಲ್ಲಿ ಹೆಚ್‌ಡಿಕೆ ಕೇಂದ್ರ ಸಂಪುಟ ದರ್ಜೆ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

ಪ್ರಹ್ಲಾದ್ ಜೋಶಿ ಹಾಗೂ ಶೋಭಾ ಕರಂದ್ಲಾಜೆ ಅವರು ಎರಡನೇ ಬಾರಿಗೆ ಮೋದಿ ಸಂಪುಟ ಸಚಿವರಾಗಿದ್ದಾರೆ. ಜೊತೆಗೆ ವಿ ಸೋಮಣ್ಣ ಅವರು ಕೂಡ ಕೇಂದ್ರ ಸಚಿವರಾಗಿ ಪ್ರಮಾಣವಚನ ಸ್ವೀಕಾರ ಮಾಡಿದರು.



# ನಮಗೆ ಫ್ರೀ ಬೇಡ, ಹೆಚ್ಚುವರಿ ಬಸ್ ಓಡಿಸಿ



**ಉಡುಪಿ:** ನಮಗೆ ಫ್ರೀ ಬಸ್ ಬೇಡ, ಹೆಚ್ಚುವರಿ ಬಸ್ಸುಗಳನ್ನು ಹಳ್ಳಿಯಲ್ಲಿ ಓಡಿಸಿ ಸಹಾಯ ಮಾಡಿ ಎಂದು ಸರ್ಕಾರದ ವಿರುದ್ಧ ವಿದ್ಯಾರ್ಥಿಗಳು ಪ್ರತಿಭಟನೆ ಮಾಡಿದ ಘಟನೆ ಉಡುಪಿ ಜಿಲ್ಲೆಯಲ್ಲಿ ನಡೆದಿದೆ.

**» ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ವಿದ್ಯಾರ್ಥಿನಿ ಕ್ಲಾಸ್**

ಸರಿಯಾದ ಸಮಯಕ್ಕೆ ಓಡುವ ಹೆಚ್ಚುವರಿ ಬಸ್ಸುಗಳನ್ನು ಕೊಡಿ. ನಾವು ಪಾಸ್ ಮಾಡಿಸುತ್ತೇವೆ. ಹಣಕೊಟ್ಟು ಪ್ರಯಾಣ ಮಾಡುತ್ತೇವೆ ಎಂದು ಏರು ಧ್ವನಿಯಲ್ಲಿ ಉಡುಪಿ ಜಿಲ್ಲೆಯ ಬೈಂದೂರಿನ ವಿದ್ಯಾರ್ಥಿನಿ ಕೆಎಸ್‌ಆರ್‌ಟಿಸಿ ಅಧಿಕಾರಿ ಮುಂದೆ ಸಮಸ್ಯೆ ತೋಡಿಕೊಂಡಿದ್ದಾಳೆ. ಎಬಿವಿಪಿ ನೇತೃತ್ವದಲ್ಲಿ ಕುಂದಾಪುರದಲ್ಲಿ ಪ್ರತಿಭಟನೆ ನಡೆದ ಸಂದರ್ಭ ತಮಗಾಗುವ ಬಸ್ ಸಮಸ್ಯೆಗಳ ವಿರುದ್ಧ ಸರ್ಕಾರದ ಇಲಾಖೆಯ ವಿರುದ್ಧ ಧಿಕ್ಕಾರ ಕೂಗಿದರು. ಉಚಿತ ಬಸ್ಸಿನಿಂದಾಗಿ ವಿದ್ಯಾರ್ಥಿಗಳು ಅಲೆದಾಡುವಂತಾಗಿದೆ. ಬೆಳಗ್ಗೆ, ಸಂಜೆ ಬಸ್ಸಿನಲ್ಲಿ ಸೀಟ್ ಸಿಗುವುದಿಲ್ಲ. ಸರಿಯಾದ ಸಮಯಕ್ಕೆ ಮನೆ ತಲುಪುವುದು ಕಷ್ಟವಾಗುತ್ತಿದೆ. ಗ್ರಾಮೀಣ ಭಾಗದಲ್ಲಿ ಹೆಚ್ಚುವರಿ ಬಸ್ಸುಗಳನ್ನು ಓಡಿಸಿ ಸಹಾಯ ಮಾಡಿ ಎಂದು ಒತ್ತಾಯಿಸಿದ್ದಾರೆ.

ಈ ಕುರಿತು ವಿದ್ಯಾರ್ಥಿನಿಯೊಬ್ಬಳು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಳ್ಳುತ್ತಿರುವ ವೀಡಿಯೋ ವೈರಲ್ ಆಗಿದೆ. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ ವಿದ್ಯಾರ್ಥಿಗಳ ಪ್ರಶ್ನೆಗೆ ಉತ್ತರ ಕೊಡಿ. ಅವರ ಸಮಸ್ಯೆಯನ್ನು ಕೇಳಿ, ಅದಕ್ಕೆ ಏನು ಪರಿಹಾರ ಕೊಡುತ್ತೀರಿ ಕೊಡಿ. ವಿದ್ಯಾರ್ಥಿಗಳಿಗೆ ಸಮಸ್ಯೆಯಾದರೆ ಅವರೊಂದಿಗೆ ಶಾಸಕನಾಗಿ ನಾನು ಕೂಡ ಮಕ್ಕಳೊಂದಿಗೆ ಪ್ರತಿಭಟನೆಯಲ್ಲಿ ಕುಳಿತುಕೊಳ್ಳುತ್ತೇನೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಎಚ್ಚರಿಸಿದರು.

ಒಂದು ವಾರದ ಒಳಗೆ ಸಮಸ್ಯೆ ಬಗೆಹರಿಸದೆ ಇದ್ದರೆ ರಸ್ತೆ ತಡೆ ಮಾಡಿ ಪ್ರತಿಭಟಿಸುತ್ತೇವೆ ಎಂದು ಎಚ್ಚರಿಸಿದರು. ವಿದ್ಯಾರ್ಥಿಗಳ ಮನವಿಗೆ ಗೌರವಿಸಿ ಮೇಲಧಿಕಾರಿಗಳಿಗೆ ತಾಲೂಕಿನ ಸಮಸ್ಯೆಯನ್ನು ತಲುಪಿಸಿ ಎಂದು ಸೂಚಿಸಿದರು.

Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com